ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 22 ಶನಿವಾರ 2025

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 305 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪಕ್ಷಕ್ಕೆ ಮಾರಕವಾಗುವಂತಹ ಮಾತು ನಿಲ್ಲಿಸಿ; ಇಲ್ಲ ಮಂತ್ರಿ ಸ್ಥಾನ ತೊರೆದು

ಮನೆಗೆ ಹೋಗಿ...

- ಕೆಲವು ಸಚಿವರಿಗೆ ಕಾಂಗ್ರೆಸ್ ಹೈಕಮಾಂಡ್ ಖಡಕ್ ಎಚ್ಚರಿಕೆ
- ದೆಹಲಿಯಿಂದ ವಾಪಸ್ಸಾದ ಗೃಹ ಸಚಿವ ಪರಮೇಶ್ವರ್ ಮುಖ್ಯಮಂತ್ರಿ ಭೇಟಿಯಾಗಿ ರಹಸ್ಯ ಮಾತುಕತೆ; ಮಾಧ್ಯಮದವರೊಂದಿಗೆ ಮಾತಾಡದೇ ನಿರ್ಗಮನ
- ಡಾ.ಪರಮೇಶ್ವರ್ ಸಿಎಂ ಭೇಟಿ ವೇಳೆ ಸಚಿವರಾದ ರಾಜಣ್ಣ, ಸತೀಶ್ ಜಾರಕಿಹೊಳಿ ಉಪಸ್ಥಿತಿ!

ಬೆಂಗಳೂರು, ಫೆ. 21(ಕೆಎಂಶಿ)– ಪಕ್ಷಕ್ಕೆ ಮಾರಕ ಆಗುವಂತಹ ಹೇಳಿಕೆಗಳನ್ನು ನಿಲ್ಲಿಸದೆ ಇದ್ದರೆ ಮಂತ್ರಿ ಸ್ಥಾನ ತೊರೆದು ಮನೆಗೆ ಹೋಗಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರ್ನಾಟಕದ ಕೆಲವು ಸಚಿವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರ ಹಂಚಿಕೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಸದಾ ಹೇಳಿಕೆ ನೀಡಿ, ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಉಂಟುಮಾಡುತ್ತಿರುವ ಸಚಿವರಾದ ಡಾ.ಜಿ.ಪರಮೇಶ್ವರ್, ಕೆ.ಎನ್.ರಾಜಣ್ಣ, ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸತೀಶ್ ಜಾರಕಿಹೊಳಿಗೆ ಖರ್ಗೆ



ಈ ಸಂದೇಶ ರವಾನೆ ಮಾಡಿದ್ದಾರೆ. ಸಚಿವರಿಗಷ್ಟೇ ಅಲ್ಲ, ಕೆಲವು ಶಾಸಕರಿಗೂ ಎಐಸಿಸಿ ಎಚ್ಚರಿಕೆ ನೀಡಿದೆ. ಇನ್ನು ಮುಂದೆ ಯಾವುದೇ ಸಚಿವರು ಹಾಗೂ ಶಾಸಕರು ಅನಗತ್ಯ ಹೇಳಿಕೆ ನೀಡಿದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಇತ್ತೀಚೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಸತತವಾಗಿ ಹೇಳಿಕೆ ನೀಡಿದ್ದಲ್ಲದೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಸಕರ ಸಭೆ ಹಾಗೂ ಬೃಹತ್ ಸಮಾವೇಶ ನಡೆಸಲು ಮುಂದಾದಾಗಲೇ ಈ ಸಚಿವರುಗಳಿಗೆ ಖರ್ಗೆ, ಬಾಯಿ ಮುಚ್ಚಿಕೊಂಡು ಕೊಟ್ಟಿರುವ ಕೆಲಸ ಮಾಡಿ ಎಂದಿದ್ದರು. ಮತ್ತೆ ಇದೇ ಚಾಳಿ ಪುನರಾವರ್ತನೆ ಯಾದಾಗ ಬೆಳಗಾವಿಯ ಎಐಸಿಸಿ ಅಧಿವೇಶನ ವೇಳೆ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಇಂತಹ ಒಂದಿಬ್ಬರು ಸಚಿವರನ್ನು ಸಂಪುಟದಿಂದ ಹೊರಹಾಕಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದರು. ಇದಾದ ನಂತರವೂ ಡಾ.ಪರಮೇಶ್ವರ್ ಅವರ ವಿಧಾನಸೌಧದ ಕಚೇರಿಯಲ್ಲಿ ಈ ಸಚಿವರುಗಳು ಗೌಪ್ಯ ಸಭೆ ನಡೆಸಿದ್ದರು. ಸಭೆಯ ನಂತರದ ದಿನಗಳಲ್ಲಿ ಕೆಪಿಸಿಸಿ ಅಧ್ಯಕ್ಷರ ■6ನೇ ಪುಟಕ್ಕೆ

ನಮ್ಮ ಹೋರಾಟ ವಿರೋಧಿಗಳ ವಿರುದ್ಧವಿರಬೇಕು; ನಮ್ಮೊಳಗಲ್ಲ

ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರಿಗೆ ಡಿಸಿಎಂ ಡಿಕೆಶಿ ಟಾಂಗ್

ಬೆಂಗಳೂರು, ಫೆ. 21(ಕೆಎಂಶಿ)– ತಮ್ಮ ವಿರುದ್ಧ ಸಿಡಿದೆದ್ದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರ ಬಳಗದ ಮೇಲೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ.

ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ ತಮ್ಮ ವಿರುದ್ಧ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೀಡುತ್ತಿದ್ದ ಹೇಳಿಕೆಗಳಿಗೆ ಮೊದಲ ಬಾರಿಗೆ ಕಾಂಗ್ರೆಸ್ ಕಚೇರಿಯಲ್ಲೇ ತಿರುಗೇಟು ನೀಡಿದ್ದಾರೆ. ನಮ್ಮ ಹೋರಾಟ ರಾಜಕೀಯ ವಿರೋಧಿಗಳ ವಿರುದ್ಧ ಇರಬೇಕೇ ಹೊರತು ನಮ್ಮೊಳಗಲ್ಲ ಎಂದಿದ್ದಾರೆ. ಒಗ್ಗಟ್ಟಿನಿಂದ ಹೋರಾಟ ನಡೆಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇವೆ, ಒಳ್ಳೆಯ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಪಕ್ಷಕ್ಕಾಗಿ ದುಡಿದವರನ್ನು ಗುರುತಿಸಿ ವರಿಷ್ಠರು ಸ್ಥಾನಮಾನ ನೀಡಿದ್ದಾರೆ, ಯಾರನ್ನು ಅಧಿಕಾರದಲ್ಲಿ ಉಳಿಸಬೇಕು, ಯಾರನ್ನು ಬದಲಿಸಬೇಕು ಎನ್ನುವುದು ಅವರಿಗೆ ಬಿಟ್ಟ ವಿಚಾರ. ಸಮಯಕ್ಕೆ ಅನುಸಾರ ವರಿಷ್ಠರು ತೀರ್ಮಾನ



ಕೈಗೊಳ್ಳುತ್ತಾರೆ, ನಮ್ಮಲ್ಲಿ ಏನೇ ಸಣ್ಣ–ಪುಟ್ಟ ಸಮಸ್ಯೆಗಳಿದ್ದರೂ ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿಕೊಳ್ಳಬೇಕು. ಪ್ರತಿಪಕ್ಷಗಳ ವಿರುದ್ಧ ಹೋರಾಟ ನಡೆಸಬೇಕಾದ ನಾವು ಅವರಿಗೆ ಆಹಾರವಾಗಬಾರದು ಎಂದು ಈ ಸಚಿವರುಗಳಿಗೆ ಟಾಂಗ್ ನೀಡಿದ್ದಾರೆ.

ನಿನ್ನೆ ತಡರಾತ್ರಿ ಪಕ್ಷದ ಕಚೇರಿಯಲ್ಲಿ ಯುವ ಕಾಂಗ್ರೆಸ್ ಚುನಾವಣಾ ಫಲಿತಾಂಶ ಪ್ರಕಟಿಸಿ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ವಿರುದ್ಧ ಪದೇ ಪದೆ ಹೇಳಿಕೆ ನೀಡುವವರಿಗೆ ಪರೋಕ್ಷವಾಗಿ ತಿರುಗೇಟು ನೀಡಲು ಈ ವೇದಿಕೆ ಬಳಸಿಕೊಂಡರು. ಚುನಾವಣೆ ಗೆಲ್ಲುವುದು ಮುಖ್ಯವಲ್ಲ, ಈಗ ಚುನಾವಣಾ ವಿಚಾರ ಮರೆತು ಯಾವುದೇ ಗುಂಪುಗಾರಿಕೆ ಮಾಡದೆ, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಎಂದಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ■6ನೇ ಪುಟಕ್ಕೆ

ಮೈಸೂರು ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮ



- ಮೈಸೂರಿನಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮಾಹಿತಿ
- ಪಾರಂಪರಿಕ ಶೈಲಿಯಲ್ಲೇ ಹೊಸದಾಗಿ ನಿರ್ಮಾಣ ನಿರ್ಧಾರ
- ಲ್ಯಾನ್ಸ್‌ಡೌನ್ ಕಟ್ಟಡ ನಿರ್ಮಾಣಕ್ಕೆ 100 ಕೋಟಿ ಮೀಸಲು
- ಸತ್ವವಿಲ್ಲದ ಇತರೆ ಪಾರಂಪರಿಕ ಶೈಲಿ ಕಟ್ಟಡಗಳೂ ನೆಲಸಮ
- ಮೊದಲು ವ್ಯಾಪಾರ ಮಾಡಿದ್ದವರಿಗೆ ಹೊಸ ಕಟ್ಟಡದಲ್ಲಿ ಆದ್ಯತೆ
- ಮೈಸೂರಿನ ವಿವಿಧ ಯೋಜನೆಗೆ 750 ಕೋಟಿಯ ಡಿಪಿಆರ್



ಮೈಸೂರು, ಫೆ.21(ಬಿಎಲ್‌ಯು)– ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಹಾಗೂ ಇತರೆ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಾಣ ಮಾಡಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ. ಚಾಮುಂಡಿಬೆಟ್ಟದಲ್ಲಿ ಇಂದು ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಸತ್ವ ಕಳೆದುಕೊಂಡು, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದರು. ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮ ಮಾಡಿ ಪಾರಂಪರಿಕ ಶೈಲಿಯಲ್ಲಿ ಹೊಸದಾಗಿ ನಿರ್ಮಾಣ ಮಾಡಲು 100 ಕೋಟಿ ಮೀಸಲಿಡಲಾಗಿದೆ. ಯಾರು ಮೊದಲು ಇಲ್ಲಿ ವ್ಯಾಪಾರ ಮಾಡಿದ್ದರೋ ಅವರಿಗೆ ಹೊಸ ಕಟ್ಟಡದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಬೈರತಿ ಸುರೇಶ್ ಹೇಳಿದರು.

ಆದರೆ, ಶಿಥಿಲಾವಸ್ಥೆ ಕಟ್ಟಡ ನೆಲಸಮ ಮಾಡಿ ಹೊಸದಾಗಿ ಕಟ್ಟಡ ನಿರ್ಮಾಣಕ್ಕೆ ಆಕ್ಷೇಪಿಸಿ ಕೆಲವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಈ ಬಗ್ಗೆ ನ್ಯಾಯಾಲಯದ ತೀರ್ಪು ಕಾದು ನೋಡಬೇಕು ಎಂದು ತಿಳಿಸಿದರು. ಮೈಸೂರಿನ ಅಭಿವೃದ್ಧಿ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಲವು ಸೂಚನೆ ನೀಡಿದ್ದಾರೆ. ಮೈಸೂರು ನಗರ ದಲ್ಲಿ ವಿವಿಧ ಕಾಮಗಾರಿ ಕೈಗೆತ್ತಿಕೊಳ್ಳಲು 750 ಕೋಟಿ ರೂಪಾಯಿಯ ಡಿಪಿಆರ್ ಸಿದ್ಧಪಡಿಸಲು ಸೂಚಿಸಿದರು.

ಫೈಲ್ ಕೊಂಡೊಯ್ಯಲು ಅದೇನು ಕಡ್ಲೆಪುರಿನಾ...

ಮುಡಾದಿಂದ 141 ಫೈಲ್‌ಗಳನ್ನು ನಾನು ಹೊತ್ತೊಯ್ದಿದ್ದೇನೆ ಎಂಬ ಬಿಜೆಪಿ ಆರೋಪಕ್ಕೆ ಕಿಡಿಕಾರಿದ ಬೈರತಿ ಸುರೇಶ್, ಫೈಲ್‌ಗಳನ್ನು ಕೊಂಡೊಯ್ಯಲು ಅದೇನು ಕಡ್ಲೆಪುರಿನಾ ಎಂದು ಕೇಸರಿ ನಾಯಕರಿಗೆ ತಿರುಗೇಟು ನೀಡಿದ್ದಾರೆ. ಫೈಲ್ ಕೊಂಡೊಯ್ದಿದ್ದೇನೆ ಎಂಬ ಶಾಸಕ ಟಿ.ಎಸ್. ಶ್ರೀವತ್ಸ ಆರೋಪಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, ಮುಡಾದಲ್ಲಿರುವ ಸಿಸಿಟಿವಿ ಕ್ಯಾಮರಾಗಳ ಕಣ್ತಪ್ಪಿಸಿ ಫೈಲ್ ಕೊಂಡೊಯ್ಯಲು ಸಾಧ್ಯವೇ ಎಂದು ಪ್ರಶ್ನಿಸಿದರು. ಮುಡಾ ■6ನೇ ಪುಟಕ್ಕೆ




ಬೈರತಿ ಸುರೇಶ್

ಮೈಸೂರು ಮಿತ್ರ ಶನಿವಾರ 22 ಫೆಬ್ರವರಿ 2025

ಶ್ರೀ ಮಹಾಶಿವರಾತ್ರಿ ಆಚರಣೆ ಜೊತೆಗೆ ಕೆರೆ ಹಬ್ಬ ಆಚರಣೆ





ಮೈಸೂರು: ಕ್ರಿಸ್ತಶಕ 1188ರಲ್ಲಿ ಹೊಯ್ಸಳ ರಾಜ ವೀರ ಬಲ್ಲಾಳ ನಿರ್ಮಿಸಿದ ಮೈಸೂರು ಹೊರವಲಯದ ಕೆ. ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇಗುಲ ಮೈಸೂರಿನ ಇತಿಹಾಸ ಪ್ರಸಿದ್ಧ ದೇಗುಲಗಳಲ್ಲೊಂದು. ನಗರದ ಗದ್ದಿಗೆ ರಸ್ತೆಯಲ್ಲಿರುವ ಈ ದೇಗುಲ 1994ರಲ್ಲಿ ಜೀರ್ಣೋದ್ಧಾರಗೊಂಡಿತು.

ಧಾರ್ಮಿಕ, ಸಾಂಸ್ಕೃತಿಕ, ಜಾನಪದ ಆಚರಣೆಗಳೊಂದಿಗೆ ಆಚರಿಸಲಾಗುವ ಇಲ್ಲಿನ ಶ್ರೀ ಮಹಾಶಿವರಾತ್ರಿ ಹಬ್ಬ ಈ ಬಾರಿ ಇನ್ನಷ್ಟು ವಿಶಿಷ್ಟವಾಗಿರಲಿದೆ. ಕಾರಣ ಶಿವರಾತ್ರಿಯ ಜೊತೆಗೆ ಕೆರೆ ಹಬ್ಬ ಆಚರಣೆ. ಮೈಸೂರು ನಗರ ಕೆರೆಗಳ ತವರಿದ್ದಂತೆ. ನಗರದ ಒಳಗೆ ಹಾಗೂ ಹೊರಗೆ, ಕುಡಿಯುವ ನೀರು, ಕೃಷಿ ಇನ್ನಿತರ ಉದ್ದೇಶಗಳಿಗಾಗಿ ಇಲ್ಲಿ ನೂರಾರು ಕೆರೆಗಳು ನಿರ್ಮಾಣಗೊಂಡಿದ್ದವು. ಆದರೆ, ಆಧುನಿಕ ದಿನಗಳಲ್ಲಿ ಒತ್ತುವರಿ, ಮಾಲಿನ್ಯ ಮತ್ತಿತರ ಕಾರಣಗಳಿಂದಾಗಿ ಈ ಪೈಕಿ ಬಹುತೇಕ ತಮ್ಮ ಅಸ್ತಿತ್ವ ಕಳೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಸದರಿ ದೇಗುಲದಲ್ಲಿ ಕೆರೆಗಳ ಪ್ರಾಮುಖ್ಯತೆ ಬಗ್ಗೆ ಜನಜಾಗೃತಿ ಮೂಡಿಸಲು, ಮಹಾಶಿವರಾತ್ರಿ ಹಬ್ಬದ ದಿನ ಧಾರ್ಮಿಕ–ಸಾಂಸ್ಕೃತಿಕ–ಸಾಮಾಜಿಕ ಕಾರ್ಯಕ್ರಮಗಳೊಂದಿಗೆ 'ಕೆರೆ ಹಬ್ಬ' ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಬಾರಿ ದೇಗುಲದಲ್ಲಿ ಮಹಾಶಿವರಾತ್ರಿ ಆಚರಣೆ ಹಾಗೂ ಜಾತ್ರಾ ಮಹೋತ್ಸವ ಬುಧವಾರ ಫೆಬ್ರವರಿ 26ರಂದು ನಡೆಯಲಿದೆ.

ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಮೈಸೂರು ನಗರಕ್ಕೆ ಶುದ್ಧ ಕುಡಿಯುವ ನೀರು ಒದಗಿಸಲು ನಿರ್ಮಾಣಗೊಂಡ ಕೆರೆ ಕೃಷ್ಣರಾಜ ದೊಡ್ಡ ಕೆರೆ. ಸುಮಾರು 37 ಎಕರೆ ವಿಸ್ತೀರ್ಣದ ಈ ಕೆರೆ ಸಾಹುಕಾರ್ ಹುಂಡಿ ಹಾಗೂ ಮಾದಗಳ್ಳಿ ಹಳ್ಳಿಗಳಲ್ಲಿ ಹರಡಿಕೊಂಡಿದೆ. ಒಂದು ಕಾಲದಲ್ಲಿ ನಗರದ ಜೀವನಾಡಿಯಾಗಿದ್ದ ನಗರದ ಕುಕ್ಕರಹಳ್ಳಿ ಕೆರೆಗೆ ಜಲಮೂಲವಾಗಿರುವ ಪೂರ್ಣಯ್ಯ ನಾಲೆ ಇಲ್ಲಿಂದಲೇ ಆರಂಭಗೊಳ್ಳುತ್ತದೆ. ಇದು ಈ ಕೆರೆಯ ಪ್ರಾಮುಖ್ಯತೆಗೆ ಸಾಕ್ಷಿ.

ಈಗ ಈ ಕೆರೆ ಭಾಗಶಃ ಪುನರುಜ್ಜೀವನಗೊಂಡಿದ್ದರೂ, ಸಮುದಾಯದ ಭಾಗವಹಿಸುವಿಕೆ ಇಲ್ಲದೆ ಇದರ ಜೀವಂತಿಕೆ ಉಳಿಸುವುದು ಕಷ್ಟ ಎಂದರಿತು ಈ ಶಿವರಾತ್ರಿ ಸಂದರ್ಭದಲ್ಲಿ ಕೆರೆ ಹಬ್ಬ ಆಚರಿಸಲು ನಿರ್ಧರಿಸಲಾಗಿದೆ. ದೇಗುಲಕ್ಕೆ ಆಗಮಿಸುವ ಭಕ್ತರಿಗೆ ಕಾಲ್ನಡಿಗೆಯಲ್ಲಿ ಕೆರೆಗೊಂದು ಪ್ರದಕ್ಷಿಣೆ ಹಾಕಲು ಪ್ರೇರೇಪಿಸಲಾಗುವುದು. ಸ್ಥಳೀಯರು ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲಿದ್ದಾರೆ.

ಸ್ವಚ್ಛ ಕೆರೆ ಒಂದು ಊರಿನ ಆರೋಗ್ಯಕರ ಪರಿಸರ ವ್ಯವಸ್ಥೆಯ ಮೂಲ. ಸಮುದಾಯದಲ್ಲಿ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸಿದರೆ ಮಾತ್ರ ನಮ್ಮ ಕೆರೆಗಳನ್ನು ರಕ್ಷಿಸಲು ಸಾಧ್ಯ. ಈ ನಿಟ್ಟಿನಲ್ಲಿ ಈ ವಿಶಿಷ್ಟ ಕಾಲ್ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇಗುಲದ ಧರ್ಮದರ್ಶಿಗಳು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಮಹಾಶಿವರಾತ್ರಿಯ ಪ್ರಯುಕ್ತ ಶ್ರೀ ದೇಗುಲದ ಅಶೋಕವನದ ಪುರಾತನ ಶಿವಲಿಂಗಕ್ಕೆ ಭಕ್ತರು ಸ್ವತಃ ಅಭಿಷೇಕ ಮಾಡಬಹುದಾಗಿದೆ. ಹಬ್ಬದ ಪ್ರಯುಕ್ತ ರುದ್ರಾಭಿಷೇಕ, ಅಲಂಕಾರ, ಅನ್ನಸಂತರ್ಪಣೆ ದಿನವಿಡೀ ನಡೆಯುವುದು. ಬೆಳಿಗ್ಗೆ 10 ಗಂಟೆಯಿಂದ ಆರೋಗ್ಯ ಭಾರತಿ, ಸೇವಾ ಭಾರತಿ ಆಶ್ರಯದಲ್ಲಿ ತಜ್ಞ ಆಯುರ್ವೇದ ವೈದ್ಯರಿಂದ ಉಚಿತ ಆರೋಗ್ಯ ಶಿಬಿರ ನಡೆಯಲಿದೆ. ಅಗತ್ಯ ಉಳ್ಳವರಿಗೆ ಉಚಿತವಾಗಿ ಔಷಧ ವಿತರಿಸಲಾಗುವುದು. ಅಲ್ಲದೇ ಭಕ್ತಾದಿಗಳಿಂದ ಹಾಡು, ಭಜನಾ ಕಾರ್ಯಕ್ರಮವೂ ದೇಗುಲದ ಆವರಣದಲ್ಲಿ ನಡೆಯಲಿದೆ. ಶಿವರಾತ್ರಿ ಜಾಗರಣೆ ಪ್ರಯುಕ್ತ ಸಂಜೆ 7 ಗಂಟೆಯಿಂದ ಗ್ರಾಮದ ಪ್ರತಿಭೆಗಳಿಂದ 'ಶ್ರೀ ಕೃಷ್ಣಗಾರುಡಿ' ಪೌರಾಣಿಕ ನಾಟಕವು ಪ್ರದರ್ಶನಗೊಳ್ಳಲಿದೆ.

ಇಂದು, ನಾಳೆ ಶ್ರೀ ಪುರಂದರ, ತ್ಯಾಗರಾಜ ಆರಾಧನಾ ನೃತ್ಯ ಸಂಗೀತ ಮಹೋತ್ಸವ

ಮೈಸೂರು, ಫೆ. 21– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ ಫೆ. 22 ಮತ್ತು 23 ರಂದು ಸಂಜೆ 4 ಗಂಟೆಗೆ 52 ಹಾಗೂ 53ನೇ ಅಂತಾರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದ ಅಡಿಯಲ್ಲಿ 3ನೇ ವರ್ಷದ ಶ್ರೀ ಪುರಂದರ ತ್ಯಾಗರಾಜ ಆರಾಧನಾ ನೃತ್ಯ ಸಂಗೀತ ಮಹೋತ್ಸವ ಹಮ್ಮಿಕೊಂಡಿದೆ.

ಇದೇ ವೇಳೆ ನೃತ್ಯ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರನ್ನು "ಕಲೆಮನೆ ಕಲಾಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮೊದಲನೆಯ ದಿನದ ಕಾರ್ಯಕ್ರಮವನ್ನು ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಉದ್ಘಾಟಿಸಲಿದ್ದು, ಕಾರ್ಯಕ್ರಮದಲ್ಲಿ ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ನೆಲೆಸಿರುವ ಗುರು ಮಧುರ ವಿಶ್ವನಾಥನ್ ಅವರಿಗೆ 2025ರ 'ಕಲೆಮನೆ ಕಲಾಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ನಂತರ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ, ಗುರು ಮಧುರ ವಿಶ್ವನಾಥನ್, ಜ್ಯೋತಿ ಪಟ್ಟಾಭಿ ರಾಮನ್ ಮತ್ತು ಡಾ. ಸಾಧನಶ್ರೀ ಇವರುಗಳ ಶಿಷ್ಯರಿಂದ ಮತ್ತು ಗುರು ಸ್ಮೃತಿ ಕೌಶಿಕ್ ಹಾಗೂ ವಿದುಷಿ ಬಿಸ್ಮಿ ಶೈನ್ ಅವರಿಂದ ಭರತನಾಟ್ಯ ಕಾರ್ಯಕ್ರಮವಿದೆ. ಎರಡನೇ ದಿನದ ಕಾರ್ಯಕ್ರಮವನ್ನು ವಿದ್ವಾನ್ ವಿ ನಂಜುಂಡಸ್ವಾಮಿ ಮತ್ತು ಡಾ.ರಂಗನಾಥ್ ಉದ್ಘಾಟಿಸಲಿದ್ದು, ತದನಂತರ ವಿದ್ವಾನ್ ಕೆ.ಎಸ್.ಮೋಹನ್ ಕುಮಾರ್, ವಿದ್ವಾನ್ ಡಾ.ಎಂ.ವಿ ಶ್ರೀನಿವಾಸಮೂರ್ತಿ, ಶ್ರೀ ಮಧುರೈ ಆರ್.ಸಂಕರ ಪ್ರಸಾದ್, ಎಂ.ಕೆ.ಶಂಕರ್ ಅವರಿಗೆ 2025ರ "ಕಲೆಮನೆ ಕಲಾಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಹೆಸರಾಂತ ಸಂಗೀತ ಗುರುಗಳಿಂದ ಹಾಗೂ ಅವರ ಶಿಷ್ಯರಿಂದ ಶ್ರೀ ತ್ಯಾಗರಾಜ ಸ್ವಾಮಿ ಹಾಗೂ ಶ್ರೀ ಪುರಂದರದಾಸರ ಪಂಚರತ್ನ ಹಾಗೂ ದೇವರ ನಾಮಗಳ ಗೋಷ್ಠಿ ಗಾಯನವೂ ನಡೆಯಲಿದೆ.

ನಿವೃತ್ತ ಮುಖ್ಯ ಶಿಕ್ಷಕರಿಗೆ ಅಭಿನಂದನೆ



ಶ್ರೀ ಕುವೆಂಪು ಪ್ರೌಢಶಾಲೆಯಲ್ಲಿ ನಾಲ್ಕು ದಶಕಗಳ ಸುಧೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಮುಖ್ಯ ಶಿಕ್ಷಕ ಕೆ.ಹೆಚ್.ಶಂಕರೇಗೌಡ ಅವರನ್ನು ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದಿಂದ ಸಾಹಿತಿ ಬನ್ನೂರು ಕೆ.ರಾಜು ಅವರು ಅಭಿನಂದಿಸಿದರು. ಎ.ಸಂಗಪ್ಪ, ಎಂ.ಮುತ್ತುಸ್ವಾಮಿ, ಕೊರಾರಿ, ಯೂನಿಶ್ ಷರೀಫ್, ನೇತ್ರಾ, ಮಧು ಮತ್ತಿತರರು ಉಪಸ್ಥಿತರಿದ್ದರು.

ಸಾಹಿತ್ಯ ಸಂಗೀತ ಉತ್ಸವ

ಮೈಸೂರು, ಫೆ.21–ಮೈಸೂರಿನ ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ದಾಸ ಸಾಹಿತ್ಯ, ವಚನ ಸಾಹಿತ್ಯ, ಸ್ವತಃ ರಚಿಸಿದ ಸಾಹಿತ್ಯ ಹಾಗೂ ಸುಗಮ ಸಂಗೀತಕ್ಕೆ ಸಂಬಂಧಿಸಿದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯ ನೊಂದಣಿಗೆ ಫೆ. 28ರಂದು ಕಡೆದಿನ. ಆಸಕ್ತರು ಮೊ.8660913033, 6361075880 ಸಂಪರ್ಕಿಸಬಹುದು.

ತಾತ್ಕಾಲಿಕ ಗುತ್ತಿಗೆ ಆಧಾರದ ನೇಮಕಾತಿಗೆ ಅರ್ಜಿ ಆಹ್ವಾನ


ಮೈಸೂರು, ಫೆ.21– ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಪ್ರಾಧಿಕಾರದ ಕಚೇರಿಯಲ್ಲಿ ಆಡಳಿತ ಸಹಾಯಕ, ಕ್ಲರ್ಕ್–ಕಂ–ಟೈಪಿಸ್ಟ್ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ನಿವೃತ್ತ ಪದವೀಧರ ಸರ್ಕಾರಿ ನೌಕರರು, ಪದವೀಧರರು ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಬೆರಳಚ್ಚು ಕೌಶಲ ಮತ್ತು ಗಣಕಯಂತ್ರದ ಪರಿಣತಿ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಮಾಸಿಕ ಸಂಚಿತ ವೇತನ ರೂ. 18,340ಗಳನ್ನು ನೀಡಲಾಗುವುದು. ಅರ್ಹತೆಯುಳ್ಳ ನಿವೃತ್ತ ಪದವೀಧರ ಸರ್ಕಾರಿ ನೌಕರರು, ಪದವೀಧರರು ಪ್ರಾಧಿಕಾರದಿಂದ ಅರ್ಜಿಯನ್ನು ಪಡೆದು ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಫೆ.28ರ ಸಂಜೆ 5 ಗಂಟೆಯ ಒಳಗಾಗಿ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎ.ಡಿ.ಆರ್. ಸೆಂಟರ್, ಮಳಲವಾಡಿ, ಜಯನಗರ, 5ನೇ ಕ್ರಾಸ್, ಮೈಸೂರು ಇಲ್ಲಿಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ದಿನೇಶ್ ಬಿ.ಜಿ. ತಿಳಿಸಿದ್ದಾರೆ.

ಕೆಎಸ್ಎಂಸಿಎ ಸಂಸ್ಥೆಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿ ದೇಣಿಗೆ ನೀಡಿಕೆ

ಬೆಂಗಳೂರು: ಕರ್ನಾಟಕ ಸರ್ಕಾರದ ಏಕೈಕ ಜಾಹೀರಾತು ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಕಂಪನಿಯ ಅಧ್ಯಕ್ಷ ಸತೀಶ್ ಕೃಷ್ಣ ಸೈಲ್ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂಸ್ಥೆಯ ಆರ್ಥಿಕ ವರ್ಷ 2023–24ರ ಲಾಭಾಂಶದಿಂದ 1 ಕೋಟಿ ರೂಪಾಯಿ ದೇಣಿಗೆಯ ಚೆಕ್ ಅನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಅವರ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಹಾಗೂ ಕೆಎಸ್ಎಂಸಿಎ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಅತೀಕುಲ್ಲಾ ಶರೀಫ್, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ನಂದೀಶ ಉಪಸ್ಥಿತರಿದ್ದರು.



ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷ ಸತೀಶ್‌ಕೃಷ್ಣ ಸೈಲ್ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಎಂ.ಬಿ.ಪಾಟೀಲ್ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿ ರೂ. ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಕ್ರವಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಅಪಾರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಅತೀಕುಲ್ಲಾ ಶರೀಫ್, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್.ನಂದೀಶ್ ಉಪಸ್ಥಿತರಿದ್ದರು.

ಇ–ಆಸ್ತಿ ತಂತ್ರಾಂಶ ಮೂಲಕ ಆಸ್ತಿ ನಮೂನೆ ನೀಡಲು ಸೂಚನೆ

ಮೈಸೂರು,ಫೆ.21– ಕಡಕೊಳ ಪಟ್ಟಣ ಪಂಚಾಯಿತಿ ಪುರಸಭಾ ವ್ಯಾಪ್ತಿಯೊಳಗೆ ಬರುವ ಸರ್ಕಾರಿ ಜಾಗ, ಅರೆ ಸರ್ಕಾರಿ, ಸ್ಥಳೀಯ ಸಂಸ್ಥೆಗಳ ಪುರಸಭಾ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡಗಳು ಮತ್ತು ನಿವೇಶನಗಳ ಮಾಲೀಕರು ತಮ್ಮ ಆಸ್ತಿಗಳಿಗೆ ಸಂಬಂಧಿಸಿದ ಪೂರಕ, ಅಗತ್ಯವಾಗಿ ಬೇಕಾಗಿರುವ ಮಾಲೀಕತ್ವವನ್ನು ದೃಢೀಕರಿಸುವ ನೋಂದಾಯಿತ ದಾಖಲೆ ಪತ್ರಗಳು, ನಮೂನೆ–15(ಇಸಿ), ಸ್ವತ್ತಿನ ಛಾಯಾಚಿತ್ರ ಹಾಗೂ ಮಾಲೀಕರ ಪೋಟೋ ಮತ್ತು ಮಾಲೀಕರ ಆಧಾರ್ ಕಾರ್ಡ್, ಪಾನ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ. ಅನ್ಯಕ್ರಾಂತ ಮಂಜೂರಾತಿ ಪತ್ರ, ಬಡಾವಣೆ ವಿನ್ಯಾಸ ನಕ್ಷೆ, ಕಟ್ಟಡ ಪರವಾನಗಿ ಅನುಮತಿ ಪತ್ರ ಮತ್ತು ನಕಾಶೆ (ಕಟ್ಟಡವಿದ್ದಲ್ಲಿ). ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿ ರಶೀದಿಗಳು ಮತ್ತು ಕುಡಿಯುವ ನೀರಿನ ಶುಲ್ಕವನ್ನು ಪಾವತಿಸಿರುವ ರಶೀದಿಗಳು ಮತ್ತು ಇತರೆ ಅವಶ್ಯಕ ದಾಖಲಾತಿಗಳನ್ನು ಈ ಪುರಸಭಾ ಕಛೇರಿಗೆ ಸಲ್ಲಿಸಿ ಸಂಬಂಧಪಟ್ಟ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಿ ಆಸ್ತಿಗಳನ್ನು ಗಣಕೀಕರಣಗೊಳಿಸಿಕೊಂಡು ನಮೂನೆ–03ಎ ಮತ್ತು ನಮೂನೆ–03ಬಿ ಗಳನ್ನು ಪಡೆದುಕೊಳ್ಳಬಹುದಾಗಿದೆ.

ಸಾರಿಗೆ ಬಸ್‌ಗಳಲ್ಲಿ ಇನ್ನು ಮುಂದೆ ಪುರುಷ ಪ್ರಯಾಣಿಕರಿಗೂ ಆಸನ ಮೀಸಲು

ಮೈಸೂರು, ಫೆ.21(ಬಿಎಲ್‌ಯು) ಶಕ್ತಿ ಯೋಜನೆಯಡಿ ಉಚಿತ ಪ್ರಯಾಣ ಮಾಡುವ ಮಹಿಳೆಯರು ಇಡೀ ಬಸ್ ತುಂಬ ತುಂಬಿರುವ ಹಿನ್ನೆಲೆ ಪುರುಷರಿಗೆ ಆಸನವೇ ಸಿಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗ ಬಸ್‌ಗಳಲ್ಲಿ ಪುರುಷರಿಗೆ ಆಸನ ಮೀಸಲಿರಿಸಿದೆ. ಶಕ್ತಿ ಯೋಜನೆ ಜಾರಿಯಾದ ಮೇಲೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಇಡೀ ರಾಜ್ಯಾದ್ಯಂತ ನಿತ್ಯವೂ ಲಕ್ಷಾಂತರ ಮಹಿಳೆಯರು ಪ್ರಯಾಣ ಮಾಡುತ್ತಿದ್ದಾರೆ. ಉಚಿತ ಪ್ರಯಾಣದ ಯೋಜನೆಯನ್ನು ಆ ಮೂಲಕ ಮಹಿಳೆಯರು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ದೇವಸ್ಥಾನ, ಪ್ರವಾಸಿ ತಾಣ ಸೇರಿದಂತೆ ಇತರೆ ಸ್ಥಳಗಳಿಗೆ ಉಚಿತವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ ಇದರಿಂದ ಬಸ್ ತುಂಬಾ ಮಹಿಳಾ ಪ್ರಯಾಣಿಕರೆ ತುಂಬಿರುತ್ತಿದ್ದರು. ಪುರುಷರಿಗೆ ಮೀಸಲಾದ ಆಸನಗಳಲ್ಲಿ ಕೂಡ ಪ್ರಯಾಣಿಸುತ್ತಿದ್ದರು. ಇದರಿಂದ ಅನಿವಾರ್ಯವಾಗಿ ಪುರುಷರು ನಿಂತೇ ಪ್ರಯಾಣ ಮಾಡಬೇಕಿತ್ತು. ಪುರುಷರಿಗೆ ಮೀಸಲಿರುವ ಆಸನಗಳಲ್ಲಿ ಮಹಿಳಾ ಪ್ರಯಾಣಿಕರು ಕುಳಿತುಕೊಳ್ಳುತ್ತಿದ್ದು, ಪುರುಷರಿಗೆ ಆಸನಗಳು ಸಿಗುವುದಿಲ್ಲ ಎಂದು ಮೈಸೂರು ನಗರ ವಾಸಿ ಎಸ್.ವಿಷ್ಣುವರ್ಧನ ಅವರು ಕೆಎಸ್ ಆರ್‌ಟಿಸಿಯ ಕೇಂದ್ರ ಕಚೇರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಪುರುಷ ಪ್ರಯಾಣಿಕರಿಗೆ ಆಸನ ಮೀಸಲಿಡುವಂತೆ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿಗೆ ಆದೇಶ ನೀಡಿದೆ. ಪುರುಷ ಪ್ರಯಾಣಿಕರಿಗೆ ಮೀಸಲಿರುವ ಆಸನಗಳಲ್ಲಿ ಮಹಿಳಾ ಪ್ರಯಾಣಿಕರು ಕುಳಿತು ಪ್ರಯಾಣ ಮಾಡದಂತೆ ಕ್ರಮ ಕೈಗೊಳ್ಳುವಂತೆ ಎಲ್ಲಾ ಚಾಲನಾ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ತಿಳಿಸಿದ್ದಾರೆ. ಜೊತೆಗೆ ಈ ಆದೇಶವನ್ನು ಕೆಎಸ್‌ಆರ್‌ಟಿಸಿಯ ನಗರ ವಿಭಾಗದ ಎಲ್ಲಾ ಘಟಕದ ವ್ಯವಸ್ಥಾಪಕರಿಗೆ ಕೂಡ ನೀಡಲಾಗಿದೆ. ಬಸ್‌ನಲ್ಲಿ ಮಹಿಳಾ ಪ್ರಯಾಣಿಕರು, ಅಂಗವಿಕಲರು, ಹಿರಿಯ ನಾಗರಿಕರಿಗೆ ಆಸನ ಮೀಸಲಾಗಿದೆ. ಜೊತೆಗೆ ಬಸ್ ಹಿಂಭಾಗದಲ್ಲಿ ಪುರುಷ ಪ್ರಯಾಣಿಕರಿಗೂ ಆಸನ ಮೀಸಲಿಡಲಾಗಿದೆ. ಇದರಿಂದ ಇನ್ನು ಮುಂದೆ ಮಹಿಳಾ ಪ್ರಯಾಣಿಕರಿಗೆ ಆಸನ ಬಿಟ್ಟು ಪುರುಷರು ನಿಂತು ಪ್ರಯಾಣ ಮಾಡುವುದು ತಪ್ಪುತ್ತದೆ.

ಮಹಿಳೆಯರ ಕಾರುಬಾರಿಗೆ ಸ್ವಲ್ಪ ಬ್ರೇಕ್



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.02.2025 ಶನಿವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ** : ಮಹಿಳಾ ಉದ್ಯಮಿಗಳಿಂದ ತಯಾರಿಸಲಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ತನ್ವೀರ್ ಸೇಠ್, ಅತಿಥಿಗಳು : ಕೈಗಾರಿಕಾ ಅಭಿವೃದ್ಧಿ ಆಯುಕ್ತರಾದ ಶ್ರೀಮತಿ ಗುಂಜನ್ ಕೃಷ್ಣ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಕೆ.ಎಂ. ಗಾಯಿತ್ರಿ, ಕಾಂಗ್ರೆಸ್ ಮುಖಂಡರಾದ ಡಾ. ಪುಷ್ಪಾ ಅಮರನಾಥ್, ಅಧ್ಯಕ್ಷತೆ : ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 10ಕ್ಕೆ.

■ **ಗೋಪಾಲಗೌಡ ಶಾಂತವೇರಿ ಸ್ಮಾರಕ ನರ್ಸಿಂಗ್ ಕಾಲೇಜು, ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್, ಟ್ರೈನ್ಡ್ ನರ್ಸಸ್ ಅಸೋಸಿಯೇಷನ್ ಆಫ್ ಇಂಡಿಯಾ, ರಾಜ್ಯ ಶಾಖೆ :** ಫೋರೆನ್ಸಿಕ್ ನರ್ಸಿಂಗ್ ಮತ್ತು ಭಾರತೀಯ ಕಾನೂನು ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಜಿಜಿಎಸ್‌ಎಂಟಿ ಸದಸ್ಯ ಟ್ರಸ್ಟಿ ಡಾ. ಸಿ.ವಿ. ಶಿಲ್ಪಾ, ನಾರಾಯಣ ಹೃದಯಾಲಯ ನರ್ಸಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ. ನಿಶಾ ಪಿ. ನಾಯರ್, ಡಾ. ಸ್ನೇಹಾ ಪ್ರವೀಣ್, ಸಂಪನ್ಮೂಲ ವ್ಯಕ್ತಿ : ಸಹಾಯಕ ಪ್ರಾಧ್ಯಾಪಕ ಪ್ರೊ. ರೇಂಜುಲಾಲ್ ಯಶೋಧರನ್, ಅಧ್ಯಕ್ಷತೆ : ಡಾ. ಜಿ.ಎಸ್. ಶಶಿಧರ, ಸ್ಥಳ:ಗೋಪಾಲಗೌಡ ಶಾಂತವೇರಿ ಸ್ಮಾರಕ ನರ್ಸಿಂಗ್ ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಸುಮಂಗಲಿ ಸೇವಾ ಟ್ರಸ್ಟ್ :** ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಶ್ರೀರಂಗಪಟ್ಟಣ ಕಸಾಪ ಅಧ್ಯಕ್ಷೆ ಶ್ರೀಮತಿ ಎನ್. ಸರಸ್ವತಿ, ಮುಖ್ಯ ಅತಿಥಿಗಳು : ಡಾ. ಯೋಗೇಂದ್ರ, ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಬಿ. ರವಿಪ್ರಕಾಶ್, ಜಿ.ಎಸ್. ಮಂಜು, ಲಯನ್ ಗೋಲ್ಡನ್ ಟಿ. ಸುರೇಶ್, ತನಿಷ್ಕಾಮೂರ್ತಿ, ಡಾ. ಎಂ.ಎಲ್. ರಮೇಶ್ ಸ್ಥಪತಿ, ಎಸ್. ಬಾಲಕೃಷ್ಣ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ರುತು ಹಿಯರಿಂಗ್ ಕೇರ್ ಕ್ಲಿನಿಕ್ :** 4ನೇ ವಾರ್ಷಿಕೋತ್ಸವದ ಅಂಗವಾಗಿ ಉಚಿತ ಮಾತು ಮತ್ತು ಶ್ರವಣ ಸ್ಕ್ರೀನಿಂಗ್ ಶಿಬಿರ, ಸ್ಥಳ: ರುತು ಹಿಯರಿಂಗ್ ಕೇರ್ ಸ್ಪೀಚ್ ಥೆರಪಿ ಸೆಂಟರ್, ಬಿಜಿಎಸ್ ಆದಿಚುಂಚನಗಿರಿ ಶಾಲೆ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ರಿಂದ.

■ **ಮೈಸೂರು ವಿವಿ ಭೂ ವಿಜ್ಞಾನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘ :** ಉದ್ಘಾಟನಾ ಸಮಾರಂಭ, ಉಪಸ್ಥಿತರು : ಪ್ರೊ. ಡಿ. ನಾಗರಾಜು, ಪ್ರೊ. ಬಸವರಾಜ ಹಟ್ಟಿ, ಸ್ಥಳ: ಪ್ರೊ. ಎಂ.ಎನ್. ವಿಶ್ವನಾಥಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 52ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದ ಅಡಿಯಲ್ಲಿ 3ನೇ ವರ್ಷದ ಶ್ರೀ ಪುರಂದರ ತ್ಯಾಗರಾಜ ಆರಾಧನಾ ನೃತ್ಯ ಸಂಗೀತ ಮಹೋತ್ಸವ, ಉದ್ಘಾಟನೆ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮಧುರ ವಿಶ್ವನಾಥನ್ ಅವರಿಗೆ 2025ರ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ, ಗುರು ಮಧುರ ವಿಶ್ವನಾಥನ್, ಗುರು ಶ್ರೀಮತಿ ಜ್ಯೋತಿ ಪಟ್ಟಾಭಿ ರಾಮನ್ ಮತ್ತು ಡಾ. ಸಾಧನಶ್ರೀ ಅವರ ಶಿಷ್ಯರಿಂದ ಮತ್ತು ಗುರು ಸ್ಮೃತಿ ಕೌಶಿಕ್ ಹಾಗೂ ವಿದುಷಿ ಬಿಸ್ಮಿ ಶೈನ್ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಕಲೆಮನೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಕಲಾ ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ನಂಜನಗೂಡಿನ ಕವಯಿತ್ರಿ ನಾಗಶಯನ, ಸ್ಥಳ: ಕಲಾಸುರುಚಿ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್:** ಕಲಾಸೌರಭ–2, ಶ್ರೀಮನ್ ಮಹಾರಾಜ ಶ್ರೀ ಚಾಮರಾಜ ಒಡೆಯರ್ ಅವರ 162ನೇ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು : ಕವಿ ಲಕ್ಷ್ಮೀ ಕಿಶೋರ್, ಅಧ್ಯಕ್ಷತೆ : ಡಾ. ಭಾರತೀ ಶ್ರೀಧರ್ ರಾಜ್ ಅರಸ್, ಸ್ಥಳ: ಶಾಲೆ ಸಭಾಂಗಣ, ಸಂಜೆ 4.30ಕ್ಕೆ.

■ **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಪ್ರಶಸ್ತಿ ಪ್ರದಾನ: ಮಂಡ್ಯ ಡಯಟ್ ಪ್ರಾಚಾರ್ಯ ಪುರುಷೋತ್ತಮ, ಮುಖ್ಯ ಅತಿಥಿಗಳು: ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಸ್ಥಳ: ಅಕ್ಕನ ಬಳಗ, ತ್ಯಾಗರಾಜ ರಸ್ತೆ, ಸಂಜೆ 4.30ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ (ಮೈಸೂರು):** ಗಾನ ಸಿರಿ–ವೇದಾಂತ ಲಹರಿ ಭಾಗ–12, ಶ್ರೀ ವಾದಿರಾಜ ಗುರುಸಾರ್ವಭೌಮ ವಿರಚಿತ ರುಗ್ಮಿಣೀಶ ವಿಜಯ ಸಪ್ತಾಹ, ವಿದುಷಿ ಶ್ರೀಮತಿ ಸುಪ್ರಿಯಾ ಪ್ರವೀಣ್ ಅವರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ರಿಂದ ರಾತ್ರಿ 8.30ರವರೆಗೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ.ಕೇಶವಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎನ್.ಅಶ್ವಿನಿ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಆನಂದೂರು ಕೊಪ್ಪಲಿನ ನಾಟಕದ ಮೇಷ್ಟ್ರು ವೆಂಕಟಸ್ವಾಮಪ್ಪ ಅವರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–Indian Cancer Society, Karnataka Chapter, 9.10 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಲಾಜಿ ಶಂಕರ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–Indian Cancer Society, Karnataka Chapter, 1.25 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಸೂರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ ಕಾಶೀಯಾತ್ರೆ, ರಚನೆ–ಮಂಜುನಾಥ ಬೆಳಕೆರೆ, ನಿರ್ಮಾಣ–ಉಮೇಶ್. ಎಸ್.ಎಸ್.,4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸ್ವಯಂ ಉದ್ಯೋಗದ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯ ತಾಲೂಕು ದುದ್ದ ಹೋಬಳಿ ಗಾಣದಾಳು ಗ್ರಾಮದ ಕೃಷಿಕ ದಂಪತಿ ಜಿ.ಎಸ್.ರವಿಕುಮಾರ್ ಮತ್ತು ಎಸ್.ಸಿ. ಅರ್ಪಿತಾ ಪ್ರಸ್ತುತಿ: ಎನ್.ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ. ಚಾರುಲತಾ ಕೆ–ವೈಯೋಲಿನ್ ವಾದನ

■ **ದಿ ನೆಸ್ಟ್ :** ದಿ ನೆಸ್ಟ್ –ಫೆಸ್ಟ್–2025, ಮುಖ್ಯ ಅತಿಥಿಗಳು : ವಿಜಯನಗರ ಪೊಲೀಸ್ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ಸ್ಥಳ: ಶಾಲೆ ಆವರಣ, ಸಂಜೆ 6ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಮಾಲಿಕೆ–322, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಾಗ್ಮಿ ಮತ್ತು ಸಂಸ್ಕೃತಿಕ ಚಿಂತಕ ಡಾ. ಜ್ಯೋತಿಶಂಕರ್ ಅವರಿಂದ ದ್ವಾದಶ ಜ್ಯೋತಿರ್ಲಿಂಗಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ನಿವೃತ್ತ ಬ್ಯಾಂಕ್ ಅಧಿಕಾರಿ, ಶಿವ ದೇವಾಲಯದ ಅಧ್ಯಕ್ಷ ಎಚ್.ಜಿ. ಪರಶಿವಪ್ಪ, ಪರಂಜ್ಯೋತಿ ಮಹಿಳಾ ಬಳಗದವರಿಂದ ವಚನ ಗಾಯನ, ಸ್ಥಳ: ಶಿವ ದೇವಾಲಯದ ಶಿವ ಭವನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ 2ನೇ ಹಂತ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ಡಾ.ಕೆ.ಎಸ್.ಮಲ್ಲೇಶ್ ಅವರಿಂದ ದಿ ಕ್ವಾಂಟಮ್ ರೆವೊಲ್ಯೂಷನ್ಸ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ:** ಪ್ರೊ.ಎಸ್.ಮಲ್ಲಣ್ಣನವರ ನಿರ್ದೇಶನದಲ್ಲಿ ಪಿ.ಕಾಳಿಂಗರಾವ್ ಮತ್ತು ಸುಗಮ ಸಂಗೀತ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಕವಿ ಜಯಪ್ಪ ಹೊನ್ನಾಳಿ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ಗಾನಸಭಾ, ಸಂಜೆ 6ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಶ್ರೀ ಜನಜಾಗರಣ ಟ್ರಸ್ಟ್ :** ಕಾ. ಶ್ರೀ ನಾಗರಾಜ್ ವಿರಚಿತ ಗ್ರಂಥ ವಿಜಯೀ ಮಹಾರಾಜಾಧಿರಾಜ (ಛತ್ರಪತಿ ಶಿವಾಜಿ ಮಹಾರಾಜರ ಕುರಿತ ಕೃತಿ) ಲೋಕಾರ್ಪಣೆ ಕಾರ್ಯಕ್ರಮ, ಲೋಕಾರ್ಪಣೆ : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಪ್ರಚಾರಕ ಸು. ರಾಮಣ್ಣ, ಉಪಸ್ಥಿತರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜ್ಯೇಷ್ಠ ಪ್ರಚಾರಕ ಕಾ. ಶ್ರೀನಾಗರಾಜ್, ಅಧ್ಯಕ್ಷತೆ : ರಾಜ್ಯ ಸಂಪರ್ಕ ಪ್ರಮುಖ್ ಡಾ. ವಿ. ರಂಗನಾಥ್, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಮಂಜುನಾಥ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ದಿವ್ಯಶ್ರೀ ಎಸ್.ಎ.–ಪಿಟೀಲು, ವಿದ್ವಾನ್ ಶುಭಾಂಗ್ ಸಾಮಗ–ಮೃದಂಗ, ಸ್ಥಳ: ಶ್ರೀರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 34ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ, ಸಂಜೆ 6.30 ರಿಂದ ಕಳಸ ಸ್ಥಾಪನೆ, ಗಣಪತಿ ಪೂಜೆ, ಸಂಜೆ 7ಕ್ಕೆ ಸ್ವಸ್ತಿವಾಚನ, ಸಂಜೆ 8ಕ್ಕೆ ನವಗ್ರಹ ಪೂಜೆ, ಸಂಜೆ 8.30ಕ್ಕೆ ದುರ್ಗಾ ಪೂಜೆ, ಸಂಜೆ 9ಕ್ಕೆ ಗಣಪತಿ ನವಗ್ರಹ, ಮಹಾಮೃತ್ಯುಂಜಯ ಸಹಿತ ದುರ್ಗಾಹೋಮ, ರಾತ್ರಿ 10ಕ್ಕೆ ಪೂರ್ಣಾಹುತಿ, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಹೆಬ್ಬಾಳು.

■ **ಕಲಾ ಸುರುಚಿ, ದೇವಗೀತಂ ಚಾರಿಟಬಲ್ ಟ್ರಸ್ಟ್ :** ಖ್ಯಾತ ವಯೋಲಿನ್ ವಾದಕ ಮೈಸೂರು ಎಂ. ನಾಗರಾಜ್ ಅವರೊಂದಿಗೆ ವೃತ್ತಿ ಜೀವನದ ಅನುಭವಗಳು ಕುರಿತು ಮಾತುಕತೆ, ಸ್ಥಳ: ಕಲಾಸುರುಚಿ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ

■ **ನಟನ ರಂಗಶಾಲೆ :** ನಟನ ವಾರಾಂತ್ಯ ರಂಗಶಾಲೆಯ ವಿದ್ಯಾರ್ಥಿಗಳಿಂದ ಡಾ. ಪಿ.ಕೆ. ರಾಜಶೇಖರ ಅವರ ಜನಪದ ಮಹಾಭಾರತ ಆಧಾರಿತ ನಾಟಕ ಮಕ್ಕಳ ಮಹಾಭಾರತ, ನಿರ್ದೇಶನ: ಡಿ.ಸಿ. ಸುದರ್ಶನ ಮಳವಳ್ಳಿ, ರಚನೆ: ರಂಗಾಯಣ ರಾಮನಾಥ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಹುಯಿಲಾಳು, ಮೈಸೂರು ತಾ

■ **ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ಮಹಾರಾಣಿ ಮಹಿಳಾ ವಾಣಿಜ್ಯ–ನಿರ್ವಹಣಾ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–25, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಎಸ್‌ಡಿಎಂಸಿ ಅಧ್ಯಕ್ಷ ಹೆಚ್.ಎಂ. ಮಂಜುನಾಥ್ ಅವರಿಂದ, ಬೆಳಗ್ಗೆ 9 ರಿಂದ ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ, ಸಂಜೆ 5ಕ್ಕೆ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿ: ಕಮ್ಯುನಿಟಿ ತರಬೇತುದಾರರಾದ ಪಿ. ಶ್ರೀದೇವಿ, ಅಧ್ಯಕ್ಷತೆ : ಸಹ ಪ್ರಾಧ್ಯಾಪಕ ಡಾ.ಬಿ. ರವಿಶಂಕರ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಯಿಲಾಳು, ಮೈಸೂರು ತಾ.

ಚಾಮುಂಡಿಬೆಟ್ಟದಲ್ಲಿ ಬೆಂಕಿ; ನೂರಾರು ಎಕರೆ ವನ್ಯಸಂಪತ್ತು ನಾಶ



ಚಾಮುಂಡಿಬೆಟ್ಟದಲ್ಲಿ ಧಗಧಗಿಸುತ್ತಿರುವ ಬೆಂಕಿ.

●ಶುಕ್ರವಾರ ಮಧ್ಯಾಹ್ನ 12.30ಕ್ಕೆ ಉತ್ತನಹಳ್ಳಿ, ಲಲಿತಾದ್ರಿಪುರದ ಬಳಿ ಏಕಕಾಲಕ್ಕೆ ಕಾಣಿಸಿಕೊಂಡ ಬೆಂಕಿ; ತಡರಾತ್ರಿವರೆಗೂ ಧಗಧಗ ●ಗಾಳಿಗೆ ಬೆಂಕಿ ಕೆನ್ನಾಲಿಗೆಯ ರುದ್ರ ನರ್ತನ; ಬೆಂಕಿ ನಂದಿಸಲು ಅರಣ್ಯ, ಅಗ್ನಿಶಾಮಕ ಸಿಬ್ಬಂದಿ ಹರಸಾಹಸ



ಬೆಂಕಿ ನಂದಿಸಲು ಅಗ್ನಿಶಾಮಕದಳ ಹರಸಾಹಸ

ಮೈಸೂರು,ಫೆ.21(ಎಂಟಿವೈ)– ಎರಡು ಪ್ರತ್ಯೇಕ ಸ್ಥಳದಲ್ಲಿ ಕಂಡುಬಂದ ಬೆಂಕಿ ಜ್ವಾಲೆ ಚಾಮುಂಡಿಬೆಟ್ಟ ಅರಣ್ಯ ಪ್ರದೇಶದ ಅಪಾರ ವನ್ಯಸಂಪತ್ತನ್ನು ಆಹುತಿ ಪಡೆದಿದೆ. ಬೆಂಕಿಯ ಕೆನ್ನಾಲಿಗೆಗೆ ಚಾಮುಂಡಿಬೆಟ್ಟದ ಪೂರ್ವ ದಿಕ್ಕಿನ ಅರಣ್ಯ ಸುಟ್ಟುಕರಕಲಾಗಿದೆ.

ಬಿಸಿಲಿನ ಬೇಗೆಗೆ ಚಾಮುಂಡಿಬೆಟ್ಟದ ಗಿಡ–ಮರಗಳು ಸೊರಗಿದ್ದವು. ಲಲಿತಾದ್ರಿಪುರದ ಕೆರೆ ತಿರುವಿನ ಪ್ರದೇಶ ಹಾಗೂ ಉತ್ತನಹಳ್ಳಿಯ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಮಧ್ಯಾಹ್ನ 12.30ರಿಂದ 12.45ರೊಳಗೆ ಕಾಣಿಸಿಕೊಂಡ ಬೆಂಕಿ ಅಪಾರ ಪ್ರಮಾಣದ ಹಾನಿಯುಂಟು ಮಾಡಿದೆ. ಕಿಡಿಗೇಡಿಗಳ ಕೃತ್ಯವೇ ಇದಕ್ಕೆ ಕಾರಣ ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ.

ಬೆಂಕಿಯನ್ನು ಕಂಡು ಬೆಟ್ಟದಲ್ಲಿ ಗಸ್ತು ತಿರುಗುತ್ತಿದ್ದ ಅರಣ್ಯ ಸಿಬ್ಬಂದಿ ತಂಡ ಸ್ಥಳಕ್ಕೆ ಬರುವ ವೇಳೆಗೆ ಗಾಳಿ ಬೀಸುವುದು ಹೆಚ್ಚಾಗತೊಡಗಿದೆ.

ಗಾಳಿ ಬಿರುಸಾದಂತೆ ದಿಕ್ಕು ಬದಲಿಸಿದ ಬೆಂಕಿ ಕ್ಷಣಾರ್ಧದಲ್ಲಿ ಬೆಟ್ಟದ ಮೇಲ್ಭಾಗ ಆವರಿಸಿದೆ. ಲಲಿತಾದ್ರಿಪುರದ ಕೆರೆ ಸಮೀಪದ ತಿರುವಿನ ಬಳಿ ಬೆಂಕಿ ನಂದಿಸಲು ಕಾರ್ಯಾಚರಣೆ ಆರಂಭಿಸುತ್ತಿದ್ದಂತೆಯೇ ಉತ್ತನಹಳ್ಳಿಯತ್ತ ವ್ಯಾಪಿಸಿದೆ. ಬೆಂಕಿ ಕೆನ್ನಾಲಿಗೆಯನ್ನು ನಂದಿಸಲು ನೂರಾರು ಮಂದಿ ಅಗ್ನಿಶಾಮಕ ಹಾಗೂ ಅರಣ್ಯ ಸಿಬ್ಬಂದಿ ಪ್ರಾಣದ ಹಂಗು ತೊರೆದು ಕಾರ್ಯಾಚರಣೆ ನಡೆಸಿದರು. ಗಾಳಿಯ ವೇಗ ತುಪ್ಪ ಸುರಿದಂತೆ ಪರಿಣಾಮ ಬೆಂಕಿ ಬೆಟ್ಟದ ತುದಿವರೆಗೂ ವ್ಯಾಪಿಸಿ, ಬೆಟ್ಟದ ನಿವಾಸಿಗಳಲ್ಲಿ ಆತಂಕ ಉಂಟಾಗಿತ್ತು.

ಸಿಬ್ಬಂದಿ ಶ್ರಮ: ಬೀಸುತ್ತಿದ್ದ ಗಾಳಿ, ಮುಗಿಲೆತ್ತರಕ್ಕೆ ಚಿಮ್ಮುತ್ತಿದ್ದ ಬೆಂಕಿ ಕೆನ್ನಾಲಿಗೆ ಹಾಗೂ ದಟ್ಟ ಹೊಗೆ ಕಾರ್ಯಾಚರಣೆಗೆ ಅಡ್ಡಿಯುಂಟು ಮಾಡುತ್ತಿತ್ತಾದರೂ ಅಗ್ನಿಶಾಮಕ, ಅರಣ್ಯ ಸಿಬ್ಬಂದಿ ಹಾಗೂ ಕೆಲ ಸ್ವಯಂ ಸೇವಕರು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು. ಮಧ್ಯಾಹ್ನ 2 ಗಂಟೆ ವೇಳೆಗೆ ಉತ್ತನಹಳ್ಳಿಯಿಂದ ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆಯನ್ನು ದಾಟಿ ವ್ಯಾಪಿಸಲಾರಂಭಿಸಿತು. ಮುನ್ನೆಚ್ಚರಿಕಾ ಕ್ರಮವಾಗಿ ಆ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಯಿತು. ಬೆಂಕಿ ನಂದಿಸಲು ಎಷ್ಟೇ ಹರಸಾಹಸ ಮಾಡಿದರೂ ಬೆಂಕಿ ಮಾತ್ರ ಬೆಟ್ಟವನ್ನು ವ್ಯಾಪಿಸುತ್ತಲೇ ಇತ್ತು.

ಬೆಂಕಿ ನಂದಿಸಲು ಮೈಸೂರು ನಗರದ ಅಗ್ನಿಶಾಮಕ ಠಾಣೆಯಿಂದ 4, ತಿ.ನರಸೀಪುರ ಹಾಗೂ ಶ್ರೀರಂಗಪಟ್ಟಣದಿಂದ ತಲಾ ಒಂದೊಂದು ಒಟ್ಟು 6 ಅಗ್ನಿಶಾಮಕ ವಾಹನ, ಅರಣ್ಯ ಇಲಾಖೆಯ 4 ಕ್ಯೂಆರ್‌ವಿ(ಕ್ವಿಕ್ ರೆಸ್ಪಾನ್ಸ್ ವೆಹಿಕಲ್) ವಾಹನ, 5 ಟೆಂಡರ್ ವಾಹನಗಳಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆಗೆ ಬಳಸಿಕೊಳ್ಳಲಾಯಿತು.

ತಡರಾತ್ರಿ ಬೆಂಕಿ ನಿಯಂತ್ರಣಕ್ಕೆ: ನಿರಂತರ ಕಾರ್ಯಾಚರಣೆ ನಡೆಸಿದ ಫಲವಾಗಿ ಸರಿರಾತ್ರಿಗೆ ಬೆಂಕಿಯ ರುದ್ರನರ್ತನ ಹತೋಟಿಗೆ ಬಂತು. ಮುಂಜಾಗ್ರತಾ ಕ್ರಮವಾಗಿ ಅಗ್ನಿಶಾಮಕ ವಾಹನದಿಂದ ನೀರು ಸಿಂಪಡಿಸಲಾಗಿದೆ. ಗಿಡ–ಮರಗಳನ್ನು ನೀರಿನಿಂದ ತೋಯ್ಸಿ ಬೆಂಕಿ ವ್ಯಾಪಿಸದಂತೆ ನಿಗಾ ವಹಿಸಲಾಯಿತು. ಪರಿಣಾಮ ತಡರಾತ್ರಿ ವೇಳೆಗೆ ಬೆಂಕಿ ನಿಯಂತ್ರಣಕ್ಕೆ ಬಂದಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳೂ ಸಹ ತಿಳಿಸಿದ್ದಾರೆ.

ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ಕೆ.ಎನ್. ಬಸವರಾಜು, ಡಾ.ಐ.ಬಿ.ಪ್ರಭುಗೌಡ ಸೇರಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು, ಪ್ರಾದೇಶಿಕ ಅಗ್ನಿಶಾಮಕಾಧಿಕಾರಿ ಜಯರಾಮಯ್ಯ, ಜಿಲ್ಲಾ ಅಗ್ನಿಶಾಮಕಾಧಿಕಾರಿ ಚಂದನ್ ಇನ್ನಿತರ ಅಧಿಕಾರಿಗಳ ನೇತೃತ್ವದಲ್ಲಿ ಸಿಬ್ಬಂದಿ ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿ, ಬೆಂಕಿಯನ್ನು ತಹಬದಿಗೆ ತಂದರು.

ಕಟ್ಟೆಚ್ಚರ ವಹಿಸಲಾಗಿದೆ

ಬೇಸಿಗೆಯಿಂದ ಚಾಮುಂಡಿಬೆಟ್ಟದ ಅರಣ್ಯ ಪ್ರದೇಶವನ್ನು ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ಆದರೆ ಇಂದು ಲಲಿತಾದ್ರಿಪುರ, ಉತ್ತನಹಳ್ಳಿ ಕಡೆಯಿಂದ ಬೆಂಕಿ ಗಾಳಿಯಿಂದ ಬಹುಬೇಗ ವ್ಯಾಪಿಸಿತು. ನಿರಂತರ ಕಾರ್ಯಾಚರಣೆಯಿಂದ ಬೆಂಕಿ ನಿಯಂತ್ರಣಕ್ಕೆ ಬಂದಿದೆ ಆದರೂ ರಾತ್ರಿಯಿಡೀ ನಿಗಾವಹಿಸಲಾಗುವುದು. ಈ ಬಾರಿ ಬೇಸಿಗೆ ತೀವ್ರವಾಗಿದ್ದು, ಬೆಟ್ಟದ ವ್ಯಾಪ್ತಿಯಲ್ಲಿ ಯಾರೂ ಧೂಮಪಾನ ಮಾಡಬಾರದು.

- ಡಾ.ಕೆ.ಎನ್. ಬಸವರಾಜು, ಡಿಸಿಎಫ್

ನಕ್ಕರೆ ಅದೇ ಸ್ವರ್ಗ

ರಾಜು : ನಿನ್ನೆ ನಿಮ್ಮ ಮಗನಿಗೆ ಹೆಣ್ಣು ನೋಡೋಕೆ ಹೋಗಿದ್ದಲ್ಲ, ಏನಾಯಿತು?
ರಂಗ : ನನಗೆ ಅವಳು ಇಷ್ಟ ಆಗಲಿಲ್ಲ!
ರಾಜು : ಹೌದಾ... ಯಾಕೆ...?
ರಂಗ : Tea ಮಾಡೋಕೆ ಬರುತ್ತಾ ಅಂತ ಕೇಳಿದರೆ, ಅವರು ಕ್ಯಾಪಿಟಲ್ ಟೀನಾ, ಸ್ಮಾಲ್ ಟೀನಾ ಅಂತಾಳೆ!

ಮೈಸೂರು ಮಿತ್ರ

ಶನಿವಾರ, 22 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ಮನಸ್ಸಿನಿಂದ ಮಾಡುವ ಸಹಾಯ...ಒಳ್ಳೆಯವರ ಜೊತೆ ಮಾಡಿದ ಸ್ನೇಹ ಎಂದಿಗೂ ವ್ಯರ್ಥವಾಗುವುದಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸುಖ ಬಂದಾಗ ಹಿಗ್ಗಬೇಡ, ಕಷ್ಟ ಬಂದಾಗ ಕುಗ್ಗಬೇಡ

ನಿಮ್ಮ ಪತ್ರಗಳು

ಲಂಚ ಎಂಬ ರೋಗಕ್ಕೆ ಕಡಿವಾಣ ಅಗತ್ಯ

ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯ ಓದುಗರ ಪತ್ರಗಳು ಕಾಲಂನಲ್ಲಿ ಓದುಗ ರೊಬ್ಬರು ಇ–ಖಾತೆ ಮಾಡಲು ಲಂಚ ಕೊಡಬೇಕಾದ ಪರಿಸ್ಥಿತಿ ಬಗ್ಗೆ ಬರೆದಿದ್ದಾರೆ. ಈಗಾಗಲೇ ಇ–ಖಾತೆ ಎಲ್ಲದಕ್ಕೂ ಅವಶ್ಯಕವಾಗಿರುವುದರಿಂದ ಇದನ್ನು ಕಡ್ಡಾಯ ವಾಗಿ ಮಾಡಿಸಲೇಬೇಕು. ಅದು ಸುಲಭವಾಗಿ ಆನ್‌ಲೈನ್‌ನಲ್ಲಾಗಲೀ ಅಥವಾ ಕಚೇರಿಗೆ ಹೋದಾಗ ಆಗದು. ಲಂಚದ ಬೇಡಿಕೆ ಇಲ್ಲದೆ ಸಾರ್ವಜನಿಕರಿಗೆ ಸಿಗುವುದಿಲ್ಲ. ಲಂಚ ತಾಂಡವಮಾಡುತ್ತಿದೆ. ಇ–ಖಾತೆ ಕಡ್ಡಾಯ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿರುವ ಜನರನ್ನು ಲಂಚ ಮತ್ತಷ್ಟು ಹೈರಾಣಾಗಿಸದಿರಲಿ. ಸಂಬಂಧಪಟ್ಟವರು ಯೋಚಿಸಲಿ.

–ರಾಘವೇಂದ್ರ ಜೋಯಿಸ್, ಮೈಸೂರು

ಹಳ್ಳಿಗಳಲ್ಲೂ ಸಂಚಾರ ಜಾಗೃತಿ ಮೂಡಿಸಲಿ



ಮಾನ್ಯರೆ,

ಈ ಚಿತ್ರದಲ್ಲಿ ನಾಲ್ವರು ವಿದ್ಯಾರ್ಥಿಗಳು ಒಂದೇ ಬೈಕ್‌ನಲ್ಲಿ ಸವಾರಿ ಮಾಡುತ್ತಿದ್ದಾರೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿ ಇತ್ತೀಚೆಗೆ ಸಾಮಾನ್ಯವಾಗಿದೆ. ಈ ವಿದ್ಯಾರ್ಥಿಗಳು ಹದಿನೆಂಟು ವರ್ಷ ವಯಸ್ಸಿನ ಕೆಳಗಿನವರು ಎಂಬುದು ಗಮನಾರ್ಹ. ಇವರ ಪೋಷಕ ರಿಗೆ ಅಪಾಯದ ಅರಿವಿನ ಕೊರತೆ ಇದೆ. ನಗರಗಳಲ್ಲಿ ಹೆಲ್ಮೆಟ್ ಧರಿಸದವರನ್ನು, ಸೀಟ್ ಬೆಲ್ಟ್ ಹಾಕಿಕೊಳ್ಳದೆ ಕಾರು ಚಲಾಯಿಸುವವರನ್ನು ಹಿಡಿದು ದಂಡ ವಿಧಿಸಿ ಜಾಗೃತಿ ಮೂಡಿಸಿ ಪ್ರಾಣ ಉಳಿಸುತ್ತಿರುವ ನಮ್ಮ ಸಂಚಾರ ವಿಭಾಗದ ಪೊಲೀಸರು ಗ್ರಾಮಾಂತರ ಪ್ರದೇಶದ ಮಕ್ಕಳ ರಕ್ಷಿಸಲು ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಪ್ರಶ್ನೆಯಾಗಿದೆ. ಪ್ರಾಥಮಿಕ ಶಾಲೆಯ ಮಕ್ಕಳು ಸಹ ಹಳ್ಳಿಗಳಲ್ಲಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದಾರೆ. ಅವರನ್ನು ನೋಡಿ ತಾಯಂದಿರು ಖುಷಿ ಪಡುತ್ತಾರೆ. ದಯಮಾಡಿ ಸಂಬಂಧಪಟ್ಟವರು ಹಳ್ಳಿಗಳಲ್ಲಿ ಸಂಚಾರ ಜಾಗೃತಿ ಮೂಡಿಸಬೇಕು. **– ಜಗದೀಶ ಬಿ ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.**

ಮಧ್ಯಾಹ್ನದ ವೇಳೆ ವಿರಳ ವಾಹನ ಸಂಚಾರವಿದ್ದರೂ ಸಿಗ್ನಲ್ ಲೈಟ್ ಆನ್



ಮಾನ್ಯರೆ,

ಮೈಸೂರಿನಲ್ಲಿ ಇತ್ತೀಚೆಗೆ ಕೆಲವು ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸಿದ್ದಾರೆ. ಆದರೆ ಈ ಸರ್ಕಲ್ ಬಳಿ ಬೆಳಗ್ಗೆ 11 ರಿಂದ ಮಧ್ಯಾಹ್ನ 4 ಗಂಟೆಯ ತನಕ ಹೆಚ್ಚು ವಾಹನ ಸಂಚಾರ ಇರುವುದಿಲ್ಲ. ಆದರೆ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 10 ಗಂಟೆಯ ತನಕವೂ ಈ ಸಿಗ್ನಲ್ ಲೈಟ್ ಅನ್ ಆಗಿರುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯ ವೇಳೆಯಲ್ಲಿ ವಿರಳ ವಾಹನ ಸಂಚಾರವಿದ್ದರೂ ಸಿಗ್ನಲ್ ಲೈಟ್ ಅನ್ ಆಗಿರುತ್ತವೆ. ಈ ವರ್ಷ ಈಗಾಗಲೇ ಮೈಸೂರಿನಲ್ಲಿ 35 ಡಿಗ್ರಿ ಸೆಲ್ಸಿಯಸ್ ತಾಪಮಾನವಿದೆ. ಈ ಉರಿಯುವ ಬಿಸಿಲಿನಲ್ಲಿ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವ ಹಿರಿಯ ನಾಗರಿಕರು ಸೇರಿದಂತೆ ಒಂದು ಬಾರಿ ಸಿಗ್ನಲ್ ಪಾಸ್ ಆಗಲು 3 ರಿಂದ 4 ನಿಮಿಷಗಳು ಈ ಉರಿಯುವ ಬಿಸಿಲಿನಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ಮೈಸೂರಿನ ಆದಿಚುಂಚನಗಿರಿ ರಸ್ತೆಯ ಆಗರ್‌ವಾಲ್ ಕಣ್ಣಿನ ಆಸ್ಪತ್ರೆ ಸರ್ಕಲ್ ಸೇರಿದಂತೆ, ಕುವೆಂಪುನಗರದ ಕಾಂಪ್ಲೆಕ್ಸ್ ಬಳಿಯು ಇಂತಹದ್ದೇ ಪರಿಸ್ಥಿತಿ ಇದೆ. ಸಂಚಾರಿ ವಿಭಾಗದ ಪೊಲೀಸರು ಸ್ಥಳಕ್ಕೆ ಭೇಟಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಲೈಟ್ ಕಂಬ



ಮಾನ್ಯರೇ,


ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಹಳೇ ಶಾಂತಲಾ ಚಿತ್ರಮಂದಿರದ ಟ್ರಾಫಿಕ್ ಸಿಗ್ನಲ್ ಬಳಿ ರೋಡ್ ಡಿವೈಡರ್ ಮೇಲೆ ಇರುವ ಲೈಟ್ ಕಂಬದ ತಳಭಾಗ ಕಳಚಿಕೊಂಡು ಕಂಬ ಕೂಡ ತಳಭಾಗದಲ್ಲಿ ಬೆಂಡಾಗಿ ಅಪಾಯಕಾರಿಯಾಗಿ ವಾಲಿಕೊಂಡಿದೆ. ಇದು ಯಾವಾಗ ಬೇಕಾದರೂ ವಾಹನ ಸವಾರರು ಹಾಗೂ ಪಾದಚಾರಿಗಳ ಮೇಲೆ ಬಿದ್ದು ಪ್ರಾಣಕಂಟಕವಾಗಬಹುದು. ಹತ್ತಿರದಲ್ಲೇ ಸಿಗ್ನಲ್ ಬಳಿ ಇರುವ ಟ್ರಾಫಿಕ್ ಪೊಲೀಸ್ ಇದರ ಕಡೆ ಗಮನ ಕೊಡದೆ ಸುಮ್ಮನಿದ್ದಾರೆ. ಸಂಬಂಧಪಟ್ಟ ಕೆಇಬಿ ಅಧಿಕಾರಿಗಳು ತುರ್ತು ಪರಿಶೀಲಿಸಿ ಅಗತ್ಯ ಸುರಕ್ಷಾ ಕ್ರಮ ಕೈಗೊಂಡು ಮುಂದಾಗಬಹುದಾದ ಅನಾಹುತ ತಪ್ಪಿಸಬೇಕೆಂದು ಮನವಿ.

–ಪ್ರೊ.ಎಂ.ಎಸ್.ಎಸ್.ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಅಶ್ಲೀಲ ದೃಶ್ಯಕ್ಕೆ ಕಡಿವಾಣ ಹಾಕಿ

ಮಾನ್ಯರೆ,

ಬಹುಶಃ ಹಲವು ವರುಷಗಳೇ ಉಳಿದಿರಬಹುದು. ದೂರದರ್ಶನದ ಹಲವು ವಾಹಿನಿಗಳಲ್ಲಿ ಮತ್ತು ಯೂ ಟ್ಯೂಬ್, ಫೇಸ್‌ಬುಕ್ ಇನ್ನಿತರ ಹಲವಾರು ಮಾಧ್ಯಮಗಳಲ್ಲಿ ಅಶ್ಲೀಲಕರವಾದ ದೃಶ್ಯಗಳನ್ನು, ಅಸಹ್ಯವೆನಿಸುವ ನೃತ್ಯ ವೈಭವಗಳನ್ನೂ ಪ್ರದರ್ಶಿಸುತ್ತಿರುವುದು ಕಂಡು ಬರುತ್ತಿದೆ. ಇವುಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ದೃಶ್ಯಗಳು ಲೈಂಗಿಕತೆ ಪ್ರಚೋದಿಸುವ ಕಾರ್ಯಗಳನ್ನೇ ಮಾಡುತ್ತಿದ್ದು, ಯುವಕರು, ಯುವತಿಯರು ಅಷ್ಟೇಕೆ ಹಿರಿಯರೂ, ವಯಸ್ಸಾದವರೂ ಇಂತಹ ಅಶ್ಲೀಲ ದೃಶ್ಯ ಮಾಧ್ಯಮಗಳ ಅಥವಾ ಮೊಬೈಲ್ ದಾಸರಾಗುತ್ತಿರುವುದು ಸರ್ವವೇದ್ಯವಾಗಿದೆ. ನಮ್ಮ ಸಂಸ್ಕೃತಿ ಅಂದರೆ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು–ಗಂಡುಗಳ ಪ್ರೇಮ ಮಿಲನಗಳನ್ನು, ಅವರ ವೈಯಕ್ತಿಕ ಲೈಂಗಿಕತೆಗಳ ಪ್ರದರ್ಶನ ಅಕ್ಷಮ್ಯ ಅಪರಾಧ. ಸರ್ಕಾರದ ಮೃದು ಧೋರಣೆಯಿಂದ ಇವುಗಳಿಗೆ ಕಡಿವಾಣವಿಲ್ಲದೆ ಹುಚ್ಚು ಕುದುರೆಗಳು ಓಡುವಂತೆ ಇಂತಹ ಅಶ್ಲೀಲ ಚಿತ್ರ, ಸುರುಳಿಗಳ ಪ್ರಸಾರಕ್ಕೆ ಮಿತಿಯೇ ಇಲ್ಲವಾಗಿದೆ. ಮುಗ್ಧ ಮನಸ್ಸುಗಳು ಇದಕ್ಕೆ ಬಲಿಯಾಗಿ ಲೈಂಗಿಕ ಅಪರಾಧಗಳು ಹೆಚ್ಚಾಗಿವೆ. ಸರ್ಕಾರ ಅಥವಾ ಇತರೇ ಗಣ್ಯ ವ್ಯಕ್ತಿಗಳು ಇವುಗಳ ನಿರ್ಬಂಧಕ್ಕೆ ಮುಂದಾದರೆ ನಮ್ಮ ಸಂಸ್ಕೃತಿ ಉಳಿದೀತು. **– ಆನಂದರಾವ್, ಮೈಸೂರು.**



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ದಕ್ಕಿಲ್ಲ ಖಾಯಂ ಸ್ಥಾನ

> “ ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ವಿವೇಚನೆಯುಳ್ಳ ಪರಮಾಣು ಶಕ್ತಿ ಸಂಪನ್ನ ರಾಷ್ಟ್ರವಾಗಿದೆ. ಚಂದ್ರನಲ್ಲಿ ಯಶಸ್ವಿಯಾಗಿ ಗಗನನೌಕೆ ಕಳಿಸಿ ಬಾಹ್ಯಾಕಾಶ ಕ್ಷೇತ್ರದಲ್ಲೂ ಪಾರಮ್ಯ ಸಾಧಿಸಿದೆ. ಅತಿ ಹೆಚ್ಚು ಮಾನವ ಸಂಪನ್ಮೂಲ, ಯಶಸ್ವಿ ಪ್ರಜಾಪ್ರಭುತ್ವ, ಶಕ್ತಿಶಾಲಿ ಮಿಲಿಟರಿ, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಹಾಗೂ ರಫ್ತು ಮಾಡುವ ದೇಶವಾಗಿದೆ. ಈ ರೀತಿ ಅನೇಕ ಕ್ಷೇತ್ರಗಳಲ್ಲಿ ಪಾರಮ್ಯ ಸಾಧಿಸುತ್ತಿರುವ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯತ್ವ ದೊರೆಯ ಬೇಕಾಗಿರುವುದು ನ್ಯಾಯೋಚಿತವಾಗಿದೆ. ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಸದಸ್ಯತ್ವ ನೀಡಿದಲ್ಲಿ ಜಗತ್ತಿನಲ್ಲಿರುವ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮನ್ನಣೆ ನೀಡಿದಂತಾಗುತ್ತದೆ. ಟೆಸ್ಲಾ (TESLA) ಮುಖ್ಯಸ್ಥರಾಗಿರುವ ಎಲಾನ್ ಮಸ್ಕ್‌ರವರು 'ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯ ಆಗಿಲ್ಲದಿರುವುದು ಅಸಂಬದ್ಧವಾಗಿದೆ' ಎಂದು ತಿಳಿಸಿದ್ದಾರೆ.

2ನೇ ಮಹಾಯುದ್ಧದ ನಂತರ ಭವಿಷ್ಯದಲ್ಲಿ ವಿನಾಶಕಾರಿ ಯುದ್ಧಗಳಾಗದಂತೆ 1945 ರಲ್ಲಿ ಭಾರತ ಸಹಿತ 51 ದೇಶಗಳು, ಸನದಿಗೆ (CHARTER) ಸಹಿ ಹಾಕುವುದರೊಂದಿಗೆ ವಿಶ್ವ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಇದರಲ್ಲಿ ವಿಶ್ವದಲ್ಲಿ ಶಾಂತಿ, ಸೌಹಾರ್ದತೆ ಸ್ಥಾಪಿಸುವ ಉದ್ದೇಶದಿಂದ ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೀನಾ ಮೊದಲಾದ ಐದು ಬಲಿಷ್ಠ ದೇಶಗಳಿಗೆ ಶಕ್ತಿಶಾಲಿಯಾದ ಭದ್ರತಾ ಮಂಡಳಿಯಲ್ಲಿ ವಿಟೋ ಅಧಿಕಾರವಿರುವ ಖಾಯಂ ಸದಸ್ಯತ್ವ ನೀಡಲಾಯಿತು. ಆಗ ಚೀನಾದಲ್ಲಿ ಚಿಯಾಂಗ್ ಕೈಶೆಕ್ ನೇತೃತ್ವದ ರಾಷ್ಟ್ರೀಯವಾದಿ ಸರಕಾರವಿತ್ತು. ಆದರೆ ಈ ಹಂತದಲ್ಲಿ ಎರಡು ದಶಕಗಳಿಂದ ರಾಷ್ಟ್ರೀಯವಾದಿ ಸರಕಾರದ ವಿರುದ್ಧ ಯುದ್ಧ ಹೂಡಿದ್ದ ಮಾವೋ–ಜೆ–ಡಾಂಗ್ ನೇತೃತ್ವದ ಕಮ್ಯುನಿಸ್ಟ್ ಬಂಡುಕೋರರು ಮೇಲುಗೈ ಸಾಧಿಸುವುದರೊಂದಿಗೆ ಬೃಹತ್ ಚೀನಾದಲ್ಲಿ ಕಮ್ಯೂನಿಸ್ಟ್ ಸರಕಾರ ರಚನೆಯಾಯಿತು. ಚಿಯಾಂಗ್ ಕೈಶೆಕ್ ತೈವಾನ್‌ಗೆ ಪಲಾಯನ ಮಾಡಿ ಅಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಿದರು. ಈ ಸಂದರ್ಭದಲ್ಲಿ ಮಾವೊ ನೇತೃತ್ವದ ಸರಕಾರಕ್ಕೆ ಭದ್ರತಾ ಸಮಿತಿಯ ಖಾಯಂ ಸ್ಥಾನ ನೀಡಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಎರಡು ಕಮ್ಯುನಿಸ್ಟ್ ದೇಶಗಳು ಭದ್ರತಾ ಸಮಿತಿಯಲ್ಲಿರುವುದು ಅಮೆರಿಕಕ್ಕೆ ಇಷ್ಟವಿರಲಿಲ್ಲ. ಅದಕ್ಕಾಗಿ 1950 ಆಗಸ್ಟ್‌ನಲ್ಲಿ ಅಮೆರಿಕದ ಅಧ್ಯಕ್ಷ ಹೆರ್ರಿ ಟ್ರೂಮನ್‌ರ ರಾಜಕೀಯ ಸಲಹೆಗಾರ ಜಾನ್ ಫಾಸ್ಟರ್ ಡುಲ್ಸ್‌ರವರು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ನೆಹರೂರವರ ಸೋದರಿ ವಿಜಯಲಕ್ಷ್ಮಿ ಪಂಡಿತ್‌ರನ್ನು ಭೇಟಿಯಾಗಿ ಭದ್ರತಾ ಸಮಿತಿಯಲ್ಲಿ ಚೀನಾ ಬದಲು ಭಾರತವನ್ನು ಸದಸ್ಯತ್ವ ಸ್ವೀಕರಿಸುವಂತೆ ಆಹ್ವಾನಿಸಿದ್ದರು. ಆದರೆ ವಿಜಯಲಕ್ಷ್ಮಿಯವರು ಇದಕ್ಕೆ ಕಾಲಾವಕಾಶ ಕೇಳಿ ಪ್ರಧಾನಿ ನೆಹರೂರವರಿಗೆ ಈ ಪ್ರಸ್ತಾಪ ತಿಳಿಸಿದ್ದರು. ಈ ಪ್ರಸ್ತಾಪಕ್ಕೆ ನೆಹರೂ ನೀಡಿದ ಉತ್ತರದಲ್ಲಿ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆಯುವುದೆಂದರೆ ಚೀನಾವನ್ನು ಬಹಿರಂಗವಾಗಿ ಅಪಮಾನಿಸಿದಂತಾಗುವುದು ಹಾಗೂ ಪ್ರಾಯಶಃ ಭಾರತ–ಚೀನಾ ಬಾಂಧವ್ಯದಲ್ಲಿ ಬಿರುಕು ಉಂಟಾಗಬಹುದು. ಕೆಲವೊಂದು ತತ್ವಗಳ ಆಧಾರದಲ್ಲಿ ಭಾರತವು ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನಗಳಿಸುವ ಅರ್ಹತೆಯನ್ನು ನಿಶ್ಚಿತವಾಗಿ ಹೊಂದಿದೆ. ಆದರೆ ಚೀನಾದಿಂದ ಕಸಿದು ಭಾರತ ಈ ಸ್ಥಾನ ಪಡೆಯಲು ಬಯಸುವುದಿಲ್ಲ ಎನ್ನುತ್ತಾರೆ.

1955ರಲ್ಲಿ ಮತ್ತೆ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆಯುವ ಸುವರ್ಣಾವಕಾಶ ಬಂದಿತ್ತು. ಈ ಬಾರಿ ಚೀನಾವನ್ನು ಹೊರದೂಡದೆ ಭಾರತವನ್ನು ಆರನೇ ಖಾಯಂ ಸ್ಥಾನ ಸದಸ್ಯ ರಾಷ್ಟ್ರವಾಗಬೇಕೆಂದು ಆಹ್ವಾನಿಸಲಾಯಿತು. ಈ ಬಾರಿ ಪ್ರಬಲ ಕಮ್ಯುನಿಸ್ಟ್ ರಾಷ್ಟ್ರ ರಷ್ಯಾದ ಪ್ರಧಾನಿ ನಿಕೋಲಾಯ್ ಬುಲ್ಗಾನಿನ್ ಅವರು ನೇರವಾಗಿ ಪ್ರಧಾನಿ ನೆಹರೂರವರಿಗೆ ಪತ್ರ ಬರೆದು ಪ್ರಸ್ತಾಪಿಸಿದ್ದರು. ಆಗ ರಷ್ಯಾದ ಜ್ಯೂನಿಯರ್ ಪಾರ್ಟನರ್‌ನಂತಿದ್ದ ಕಮ್ಯೂನಿಸ್ಟ್ ಚೀನಾವು ರಷ್ಯಾದ ಪ್ರಸ್ತಾಪಗಳನ್ನು ಮಾನ್ಯ ಮಾಡುತ್ತಿತ್ತು. ಆದರೆ ಈ ಬಾರಿಯು ಪ್ರಧಾನಿ ನೆಹರೂರವರು ಈ ಪ್ರಸ್ತಾಪವನ್ನು ತಿರಸ್ಕರಿಸಿದ್ದರು. ಈ ತಿರಸ್ಕಾರದ ಹಿಂದಿನ ಅಸ್ಪಷ್ಟ ಕಾರಣಗಳೆಂದರೆ ಪ್ರಧಾನಿ ನೆಹರೂರವರಿಗೆ ಮಾವೊ ಬಗ್ಗೆ ಇದ್ದ ಪ್ರೀತಿ ಮತ್ತು ಭಯ. ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಸ್ವೀಕರಿಸಿದರೆ ಮಾವೊ ನಮ್ಮ ವಿರೋಧಿಯಾಗಿ ದೇಶದ ಮೇಲೆ ಆಕ್ರಮಣ ಮಾಡಬಹುದು ಎಂಬ ಭಯ. ಇದಲ್ಲದೆ ಒಂದೆರಡು ದೇಶಗಳ ಒಪ್ಪಿಗೆ ಮೇರೆಗೆ ಖಾಯಂ ಸ್ಥಾನ ಪಡೆದಲ್ಲಿ ವಿಶ್ವ ಸಂಸ್ಥೆಯ ಗೌರವಕ್ಕೆ ಚ್ಯುತಿಯಾ ಗುವುದೆಂಬ ಭಾವನೆಯಿಂದ ನೆಹರು ಈ ಕೊಡುಗೆ ತಿರಸ್ಕರಿಸಿದರು ಎಂಬ ಅಭಿಪ್ರಾಯವಿತ್ತು.

ವಾಸ್ತವವಾಗಿ ನೆಹರೂರವರು ತಾನೊಬ್ಬ ಮೌಲ್ಯಗಳಿಗೆ ಬದ್ಧನಾಗಿರುವ ಆದರ್ಶವಾದಿ ಎಂದು ಬಿಂಬಿಸಿ ಜಾಗತಿಕ ಮಟ್ಟದಲ್ಲಿ ವೈಯಕ್ತಿಕ ವರ್ಚಸ್ಸು ವರ್ಧಿಸುವ ಭರದಲ್ಲಿ ದೇಶದ ಹಿತಾಸಕ್ತಿ ಬಲಿ ಕೊಡುವ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ಖಾಯಂ ಸ್ಥಾನ ತಿರಸ್ಕರಿಸಿದರು ಎಂಬ ವಿಚಾರ ಆ ದಿನಗಳಲ್ಲಿ ರಾಜಕಾರಣ ಪಡಸಾಲೆಯಲ್ಲಿ ಹರಿದಾಡುತ್ತಿತ್ತು. ನೆಹರೂರವರ ಈ ನಿರ್ಧಾರ ದೆಹಲಿ ರಾಜಕಾರಣದಲ್ಲಿ ತೀವ್ರ ಕಂಪನ ಉಂಟು ಮಾಡಿತ್ತು. ಕಾಂಗ್ರೆಸಿಗರು ನೆಹರೂ ನಿರ್ಧಾರ ಸಮರ್ಥಿಸಿದರೆ, ವಿಪಕ್ಷಗಳು 'ಹಿಮಾಲಯನ್ ಬ್ಲಂಡರ್' ಎಂದು ಟೀಕಿಸಿದರು.

1955ರಲ್ಲಿ ಸಂಸತ್‌ನಲ್ಲಿ ಸದಸ್ಯರ ಪ್ರಶ್ನೆಗಳಿಗೆ ನೆಹರು ಉತ್ತರಿಸುತ್ತಾ 'ಖಾಯಂ ಸ್ಥಾನ ಭಾರತಕ್ಕೆ ನೀಡುವ ಬಗ್ಗೆ ಅಧಿಕೃತ ಅಥವಾ ಅನಧಿಕೃತವಾಗಿ ಆಹ್ವಾನ ಬಂದಿಲ್ಲ. ಕೆಲವು ಪತ್ರಿಕೆಗಳಲ್ಲಿ ಅಸ್ಪಷ್ಟ ರೂಪದಲ್ಲಿ ಉಲ್ಲೇಖಗಳು ಬಂದಿದ್ದು, ಇವುಗಳಲ್ಲಿ ಯಾವುದೇ ಸತ್ಯಾಂಶಗಳಿಲ್ಲ' ಎಂದು ತಿಳಿಸಿದ್ದರು. ಆದರೆ ಸಂಸತ್ ಅಧಿವೇಶನದ ನಂತರ ಜೂನ್‌ನಲ್ಲಿ ಹದಿನಾರು ದಿನಗಳ ರಷ್ಯಾ ಪ್ರವಾಸದಲ್ಲಿದ್ದಾಗ ಬರೆದ ಟಿಪ್ಪಣಿಯಲ್ಲಿ ಭಾರತ ಒಂದು ಮಹಾನ್ ದೇಶದ ರೂಪದಲ್ಲಿ ಭದ್ರತಾ ಮಂಡಳಿಯಲ್ಲಿ ಇರಬೇಕಾಗಿದ್ದರೂ ಈ ಹಂತದಲ್ಲಿ ನಾವು ಆ ಸ್ಥಾನಕ್ಕಾಗಿ ಆತುರಗೊಂಡಿಲ್ಲ' ಎಂದಿದ್ದರು. ಈ ರೀತಿ ನೆಹರುರವರ ಹೇಳಿಕೆಗಳಲ್ಲಿ ವಿರೋಧಾಭಾಸವಿತ್ತು. ಯಾವ ಕಾರಣಕ್ಕಾಗಿ, ಯಾರ ಭಯದಿಂದ ನೆಹರುರವರು ಭದ್ರತಾ ಮಂಡಳಿಯ ಖಾಯಂ ಸ್ಥಾನ ತಿರಸ್ಕರಿಸಿದರು ಎಂಬುದು ಇಂದಿಗೂ ನಿಗೂಢವಾಗಿ ಉಳಿದಿದೆ. ಆದರೆ ಇದರಿಂದಾಗಿ 1948ರ ಭಾರತ–ಪಾಕ್ ಸಂಘರ್ಷ, 1962ರ ಭಾರತ–ಚೀನಾ ಹಾಗೂ 1971ರ ಭಾರತ–ಪಾಕ್ ಯುದ್ಧಗಳಾದ ಸಂದರ್ಭಗಳಲ್ಲಿ ಭಾರತವು ಭಾರೀ ಬೆಲೆ ತೆತ್ತಿದೆ. ಅಂದು ಚೀನಾವನ್ನು ಮೆಚ್ಚಿಸುವ ಭರದಲ್ಲಿ ಪ್ರಧಾನಿ ನೆಹರುರವರು ಕೈಗೊಂಡ ದೇಶದ ಹಿತಾಸಕ್ತಿ ಬಲಿ ಕೊಟ್ಟ ನಿರ್ಣಯದಿಂದ ಭಾರತವು 75 ವರ್ಷಗಳಿಂದಲೂ ಪರಿತಪಿಸುತ್ತಿದೆ. ಭಾರತಕ್ಕೆ ಖಾಯಂ ಸ್ಥಾನ ಲಭಿಸದಂತೆ ಚೀನಾವೇ ತಡೆಯೊಡ್ಡುತ್ತಿದೆ.

ಭದ್ರತಾ ಮಂಡಳಿಯಲ್ಲಿ ಪ್ರಸ್ತುತ ಐದು ಖಾಯಂ ರಾಷ್ಟ್ರಗಳೊಂದಿಗೆ ಎರಡು ವರ್ಷಗಳ ಅವಧಿಯ ತಾತ್ಕಾಲಿಕ ಸದಸ್ಯತ್ವ ಹೊಂದಿರುವ ಹತ್ತು ರಾಷ್ಟ್ರಗಳಿವೆ. ಭಾರತದೊಂದಿಗೆ ಜಪಾನ್, ಜರ್ಮನಿ, ಬ್ರೆಜಿಲ್ ದೇಶಗಳು ಖಾಯಂ ಸದಸ್ಯತ್ವಕ್ಕಾಗಿ ಆಗ್ರಹಿಸುತ್ತಿವೆ. ಆ ಸ್ಥಾನಕ್ಕಾಗಿ ಮುಂದಿನ 15 ವರ್ಷ 'ವಿಟೊ ಪವರ್' ನೀಡಬೇಕಾಗಿಲ್ಲ ಎಂದರೂ ಉದ್ದೇಶ ಈಡೇರಲಿಲ್ಲ. ಭಾರತ ಮಾತ್ರ 'ವಿಟೊ' ಸಹಿತ ಖಾಯಂ ಸದಸ್ಯತ್ವ ದೊರೆಯಬೇಕೆಂದು ಬಯಸುತ್ತಿದೆ. ಈ ಸ್ಥಾನ ನೀಡದಿರುವುದು ತನಗಾಗಿರುವ ಅಪಮಾನ, ಅನ್ಯಾಯವೆಂದು ಭಾರತ ಭಾವಿಸಿದೆ.

ಪ್ರಧಾನಿ ಮೋದಿಯವರು ವಿಶ್ವಸಂಸ್ಥೆಯ 79ನೇ ಮಹಾ ಸಭೆಯಲ್ಲಿ 'ಜಾಗತಿಕ ಸಂಸ್ಥೆಗಳಲ್ಲಿ ವಿಶೇಷವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆಯಾಗಬೇಕೆಂದು ಪ್ರತಿಪಾದಿಸಿದರು. ಈ ಬಾರಿಯ ಮಹಾಸಭೆಯಲ್ಲಿ ಅಮೆರಿಕ, ಫ್ರಾನ್ಸ್ ಹಾಗೂ ಬ್ರಿಟನ್ ದೇಶಗಳು ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ನೀಡಬೇಕೆಂದು ವಾದಿಸಿದ್ದಾರೆ. ಭೂತಾನ್ ಪ್ರಧಾನಿ ತ್ಸೆರಿಂಗ್ ಟೊಬ್ಗ್ಯೆಯವರು ಭಾರತದ ಆರ್ಥಿಕತೆಯಲ್ಲಾಗಿರುವ ಬೆಳವಣಿಗೆ ಹಾಗೂ ದ–ಭೌಗೋಳದ ನಾಯಕತ್ವ ಹೊಂದಿರುವ ಭಾರತಕ್ಕೆ ಅರ್ಹ ಸ್ಥಾನ ದೊರೆಯಬೇಕೆಂದು ಆಗ್ರಹಿಸಿದರು.

79ನೇ ಸಾಮಾನ್ಯ ಸಭೆಯಲ್ಲಿ ಬ್ರಿಟನ್ ಪ್ರಧಾನ ಕೀರ್ ಸ್ಟಾರ್ಮರ್ ಭಾರತಕ್ಕೆ ಶಾಶ್ವತ ಸದಸ್ಯತ್ವ ನೀಡುವ ಬಗ್ಗೆ 'ನಾವು ಭದ್ರತಾ ಮಂಡಳಿಯಲ್ಲಿ ಭಾರತ, ಬ್ರೆಜಿಲ್, ಜಪಾನ್ ಹಾಗೂ ಜರ್ಮನಿ ಖಾಯಂ ಸದಸ್ಯತ್ವ ಆಫ್ರಿಕನ್ ದೇಶಗಳಿಂದ ಪ್ರತಿನಿಧಿ ಹಾಗೂ ಚುನಾಯಿತರ ಸಂಖ್ಯೆ ಹೆಚ್ಚುವುದು ಕಾಣಬಯಸುತ್ತೇವೆ' ಎಂದರು.

ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದಂತೆ 'ಜಗತ್ತಿನಲ್ಲಿ ಅತಿ ಹೆಚ್ಚು ಜನಸಂಖ್ಯೆಯುಳ್ಳ ಯಶಸ್ವಿ ಪ್ರಜಾಪ್ರಭುತ್ವವುಳ್ಳ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸ್ಥಾನ ನೀಡುವುದು. ಅದರ ವಿಶ್ವಾಸಾರ್ಹತೆ ಮತ್ತು ಕ್ರಿಯಾಶೀಲತೆಯ ದೃಷ್ಟಿಯಿಂದ ಅಪೇಕ್ಷೆಗಿಂತಲೂ ಹೆಚ್ಚಾಗಿ ಅವಶ್ಯಕತೆ, ಅನಿವಾರ್ಯತೆಯಾಗಿದೆ' ಎಂದರು.

ಸಿಂಗಾಪುರದ ಮಾಜಿ ರಾಜತಾಂತ್ರಿಕ ಕಿಶೋರ ಮಹಬುಬನಿಯವರು ಟಿವಿ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ 'ಭಾರತವಿಂದು ನಿಸ್ಸಂಕೋಚವಾಗಿ ಜಗತ್ತಿನ ಮೂರನೇ ಅತ್ಯಂತ ಶಕ್ತಿಶಾಲಿ ದೇಶವಾಗಿದೆ. ಗ್ರೇಟ್ ಬ್ರಿಟನ್ ಪ್ರಸ್ತುತ ಮಹಾನ್ (GREAT) ದೇಶವಲ್ಲ. ವಿಶ್ವಸಂಸ್ಥೆಯು ಹಿಂದೆ ಲೀಗ್ ಆಫ್ ನೇಷಿನ್ಸ್‌ನ ಪತನದ ಕಾರಣಗಳನ್ನು ವಿಶ್ಲೇಷಿಸಬೇಕು. ಕೆಲವು ದಶಕಗಳಿಂದ ಶಕ್ತ ರಾಷ್ಟ್ರಗಳ ಭೀತಿಯಿಂದ ಬ್ರಿಟನ್ ತನ್ನ ವಿಟೊ ಅಧಿಕಾರ ಚಲಾಯಿಸಿಲ್ಲ. ಆದ್ದರಿಂದ ಬ್ರಿಟನ್ ತನ್ನ ಖಾಯಂ ಸದಸ್ಯತ್ವವನ್ನು ಭಾರತಕ್ಕೆ ಬಿಟ್ಟುಕೊಡಬೇಕೆಂದು ಆಗ್ರಹಿಸಿದ್ದರು.

ಭಾರತಕ್ಕಿರುವ ಅಡೆ–ತಡೆಗಳು

ಅಮೆರಿಕವು ಭಾರತದ ಖಾಯಂ ಸದಸ್ಯತ್ವಕ್ಕೆ ತಾತ್ವಿಕವಾಗಿ ಸಮ್ಮತಿಸಿದೆ. ಆದರೆ ಅಧಿಕೃತವಾಗಿ ಸದಸ್ಯತ್ವ ನೀಡುವ ಸಂದರ್ಭದಲ್ಲಿ ವಿರೋಧಿಸಬಹುದೆಂಬ ಅನುಮಾನವಿದೆ. 2008ರಲ್ಲಿ ಅಮೆರಿಕದ ರಾಜಕೀಯ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ನಿಕೋಲಸ್ ಬರ್ನ್ಸ್‌ರವರು 'ತನ್ನ ದೇಶವು' ವಿಟೊ ಅಧಿಕಾರ ಐದು ದೇಶಗಳ ನಡುವೆ ಮಾತ್ರ ಹೊಂದಿರಬೇಕೆಂದು ಬಯಸಿದ್ದು ನೂತನ ರಾಷ್ಟ್ರಗಳಿಗೆ ನೀಡುವುದನ್ನು ಬೆಂಬಲಿಸುವುದಿಲ್ಲ' ಎಂದಿದ್ದರು. ವಿಪರ್ಯಾಸವೆಂದರೆ, ಅಂದು ಭದ್ರತಾ ಮಂಡಳಿಯಲ್ಲಿ ಚೀನಾ ಪ್ರವೇಶಿಸಲು ಬಲವಾಗಿ ಬೆಂಬಲಿಸಿದ ಭಾರತಕ್ಕೆ ಇಂದು ಚೀನಾ ಶತಾಯಗತಾಯ ವಿರೋಧಿಸುತ್ತಿದೆ. ಅಂತರ ರಾಷ್ಟ್ರೀಯ ಮಟ್ಟದ ಈ ಪ್ರತಿಷ್ಠಿತ ಮಂಡಳಿಯಲ್ಲಿ ಭಾರತವು ಸಮನಾಗಿ ಸ್ಥಾನ ಹಂಚಿಕೊಳ್ಳುವುದನ್ನು ಚೀನಾ ಬಯಸುತ್ತಿಲ್ಲ. ಆದರೂ ಚೀನಾ ಈ ಸ್ಥಾನ ಭಾರತಕ್ಕೆ ನೀಡುವ ವಿಷಯದಲ್ಲಿ ಕುಟಿಲ ರಾಜತಾಂತ್ರಿಕ ದಾಳ ಉರುಳಿಸಿದೆ. ಭಾರತವು ಈ ಸ್ಥಾನ ಜಪಾನ್‌ಗೆ ನೀಡಲು ಆಗ್ರಹಿಸಬಾರದು. ಈ ಮೂಲಕ ಭಾರತ–ಜಪಾನ್ ನಡುವಿನ ಗಾಢ ಮೈತ್ರಿ ಮುರಿದು ಜಿ–4 ಗುಂಪು ದುರ್ಬಲಗೊಳಿಸುವುದು. ಇದು ಚೀನಾದ ಕೊಡುಗೆಯ ಹಿಂದಿನ ಕುಟಿಲ ಹುನ್ನಾರವಾಗಿದ್ದು, ಭಾರತ ಇದನ್ನು ಚೆನ್ನಾಗಿ ಅರಿತಿದೆ. ಭಾರತಕ್ಕೆ ಸಮಸ್ಯೆಗಳು ಇನ್ನೂ ಇವೆ. ಭಾರತಕ್ಕೆ ಖಾಯಂ ಸ್ಥಾನ ನೀಡುವುದಕ್ಕೆ ಏಷ್ಯಾ ಉಪಖಂಡದ ಕೆಲವು ದೇಶಗಳು ವಿರೋಧಿಸುವ ಸಾಧ್ಯತೆಗಳಿವೆ. ಪಾಕಿಸ್ತಾನ್, ಬಾಂಗ್ಲಾದೇಶ್, ಅಫ್ಘಾನಿಸ್ತಾನ್ ಮೊದಲಾದ ದೇಶಗಳು ಭಾರತವನ್ನು ವಿಶ್ವಶಕ್ತಿಯಾಗಿ ನೋಡಬಯಸುವುದಿಲ್ಲ. ಭಾರತ–ಪಾಕ್ ನಡುವಿನ ವೈರತ್ವ ಮುಂದುವರಿದಿದೆ. ಬಾಂಗ್ಲಾ ದೇಶದಲ್ಲಿ ಭಾರತ ವಿರೋಧಿ ಮೂಲಭೂತವಾದಿಗಳ ಕೈಗೊಂಬೆ ಸರಕಾರ, ಚೀನಾ ಪ್ರಭಾವದಲ್ಲಿರುವ ನೇಪಾಳ, ಎಡಪಂಥೀಯ ಚೀನಾ ಪರವಾಗಿರುವ ಶ್ರೀಲಂಕಾದ ಅಧ್ಯಕ್ಷ ದಿಸ್ಸನಾಯಕೆ, ಇದಲ್ಲದೆ ಮಾಲ್ಡೀವ್ಸ್, ಭೂತಾನ್, ಅಫ್ಘಾನ್ ಮೊದಲಾದ ದೇಶಗಳು ಭಾರತದಿಂದ ಭಾರೀ ಪ್ರಮಾಣದಲ್ಲಿ ಸಹಾಯ ಪಡೆಯುತ್ತಿದ್ದರೂ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ನೀಡುವ ಬಗ್ಗೆ ಮತದಾನವಾದಲ್ಲಿ ಚೀನಾದ ಬೆದರಿಕೆಯಿಂದ ಭಾರತಕ್ಕೆ ವಿರೋಧವಾಗಿ ಮತ ಚಲಾಯಿಸುವ ಅಥವಾ ತಟಸ್ಥವಾಗುವ ಸಾಧ್ಯತೆಗಳಿವೆ. ಆದ್ದರಿಂದ ಭಾರತವು ಜಪಾನ್ ಮತ್ತು ಬ್ರೆಜಿಲ್‌ನೊಂದಿಗೆ ಖಾಯಂ ಸದಸ್ಯತ್ವ ಪಡೆಯಲು ಸಾಕಷ್ಟು ಪರಿಶ್ರಮಿಸಬೇಕಾಗಿದೆ ಎಂದು ಎಸ್.ಜೈಶಂಕರ್ ತಿಳಿಸಿದ್ದಾರೆ.


ಇತ್ತೀಚಿನ ವರ್ಷಗಳಲ್ಲಿ ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ವಿವೇಚನೆಯುಳ್ಳ ಪರಮಾಣು ಶಕ್ತಿ ಸಂಪನ್ನ ರಾಷ್ಟ್ರವಾಗಿದೆ. ಚಂದ್ರನಲ್ಲಿ ಯಶಸ್ವಿಯಾಗಿ ಗಗನನೌಕೆ ಕಳಿಸಿ ಬಾಹ್ಯಾಕಾಶ ಕ್ಷೇತ್ರದಲ್ಲೂ ಪಾರಮ್ಯ ಸಾಧಿಸಿದೆ. ಅತಿ ಹೆಚ್ಚು ಮಾನವ ಸಂಪನ್ಮೂಲ, ಯಶಸ್ವಿ ಪ್ರಜಾಪ್ರಭುತ್ವ, ಶಕ್ತಿಶಾಲಿ ಮಿಲಿಟರಿ, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಹಾಗೂ ರಫ್ತು ಮಾಡುವ ದೇಶವಾಗಿದೆ. ಈ ರೀತಿ ಅನೇಕ ಕ್ಷೇತ್ರಗಳಲ್ಲಿ ಪಾರಮ್ಯ ಸಾಧಿಸುತ್ತಿರುವ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯತ್ವ ದೊರೆಯಬೇಕಾಗಿರುವುದು ನ್ಯಾಯೋಚಿತವಾಗಿದೆ. ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಸದಸ್ಯತ್ವ ನೀಡಿದಲ್ಲಿ ಜಗತ್ತಿನಲ್ಲಿರುವ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮನ್ನಣೆ ನೀಡಿದಂತಾಗುತ್ತದೆ. ಟೆಸ್ಲಾ (TESLA) ಮುಖ್ಯಸ್ಥರಾಗಿರುವ ಎಲಾನ್ ಮಸ್ಕ್‌ರವರು 'ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯ ಆಗಿಲ್ಲದಿರುವುದು ಅಸಂಬದ್ಧವಾಗಿದೆ' ಎಂದು ತಿಳಿಸಿದ್ದಾರೆ.

ನಾಳೆ ವಿ.ಎನ್.ಪ್ರಸಾದ್–ತಂಡದಿಂದ ಪಿಬಿಎಸ್–ಎಸ್‌ಪಿಬಿ ಸಂಗೀತ ಸಂಜೆ

ರೋಟರಿ ಐವರಿ ಸಿಟಿ ಮೈಸೂರಿನ ಆಶ್ರಯದಲ್ಲಿ ಚಾಮುಂಡಿಬೆಟ್ಟದ ಮೇಲಿರುವ ಹೆಣ್ಣು ಮಕ್ಕಳ ಶಾಲಾ ಸಹಾಯಾರ್ಥ ಕಾರ್ಯಕ್ರಮ



ಪಿ.ಬಿ.ಶ್ರೀನಿವಾಸ್ ಎಸ್.ಪಿ.ಬಾಲಸುಬ್ರಹ್ಮಣ್ಯಂ ವಿ.ಎನ್. ಪ್ರಸಾದ್



ಡಾ.ನಟಶೇಖರ್, ತ್ಯಾಗರಾಜ್, ಜಯಂತಿ, ಹಂಸಿನಿ, ರುತ್ವಿಕ್ ರಾಜ್

ಮೈಸೂರು, ಫೆ.21– ವಿ.ಎನ್.ಪ್ರಸಾದ್ ಮತ್ತು ತಂಡವು ದಶಕಗಳಿಂದ ಮೈಸೂರು, ಚಾಮರಾಜನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೌಶಲ್ಯ ಮತ್ತು ಸಮುದಾಯ ಸೇವಾ ಯೋಜನೆಗಳಿಗೆ ಸಹಕಾರ ನೀಡುತ್ತಾ ಬಂದಿದೆ.

ಕಳೆದ 32 ವರ್ಷಗಳಿಂದ ರೋಟೇರಿಯನ್ ಆಗಿರುವ ಪ್ರಸಾದ್, ಮೈಸೂರಿನ ಯುವ ಗಾಯಕರಿಗೆ ನೆರವಾಗುತ್ತಾ ಬಂದಿದ್ದಾರೆ. ಅವರಿಗೆ ಅಗತ್ಯ ಪ್ರೋತ್ಸಾಹವನ್ನು ನೀಡಿದ್ದಾರೆ. ಅವರ ಪ್ರತಿಭೆಯನ್ನು ಪ್ರದರ್ಶಿಸಲು ದೊಡ್ಡ ವೇದಿಕೆಗಳನ್ನು ಕಲ್ಪಿಸಿದ್ದಾರೆ. ಅವರ ಗಾಯನ ವೃತ್ತಿ ಜೀವನವನ್ನು ಸುಧಾರಿಸಿದ್ದಾರೆ.

ಫೆಬ್ರವರಿ 23 ರಂದು (ಭಾನುವಾರ) ಸಂಜೆ 6 ಗಂಟೆಗೆ ವಿ.ಎನ್. ಪ್ರಸಾದ್ ಅವರ ತಂಡವು ಮೈಸೂರಿನ ಕಲಾಮಂದಿರದಲ್ಲಿ 'ಪಿ.ಬಿ.ಶ್ರೀನಿವಾಸ್–ಎಸ್.ಪಿ. ಬಾಲಸುಬ್ರಹ್ಮಣ್ಯಂ ನೈಟ್' ಶೀರ್ಷಿಕೆಯಡಿ ಕಾರ್ಯಕ್ರಮ ಸಜ್ಜಾಗಿದೆ.

ಜನೋಪಕಾರಿ ದಿವಂಗತ ಟಿ.ಎಸ್. ಸುಬ್ಬಣ್ಣ ಅವರು ಪ್ರಾರಂಭಿಸಿ, ಪೋಷಿಸಿರುವ ಚಾಮುಂಡಿ ಬೆಟ್ಟದ ಮೇಲಿರುವ ಸಾರ್ವಜನಿಕ ಪ್ರೌಢಶಾಲೆ ಶೈಕ್ಷಣಿಕ ಕೇಂದ್ರವನ್ನು ಸುಧಾರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸುಬ್ಬಣ್ಣ, ಮಹಾತ್ಮ ಗಾಂಧಿಯವರೊಂದಿಗೆ ಸಬರಮತಿ ಆಶ್ರಮದಲ್ಲಿ ಕೆಲ ದಿನ ಕಳೆದರು. ನಂತರ, ಅವರು ಆರ್ಥಿಕವಾಗಿ ದುರ್ಬಲ ಮತ್ತು ಹಿಂದುಳಿದ ಮಕ್ಕಳಿಗಾಗಿ ಶಿಕ್ಷಣ ಸಂಸ್ಥೆ ಮತ್ತು ಹಾಸ್ಟೆಲ್ ಸ್ಥಾಪಿಸುವ ಮಹತ್ವಾಕಾಂಕ್ಷೆಯೊಂದಿಗೆ ಮೈಸೂರಿಗೆ ಸ್ಥಳಾಂತರಗೊಂಡರು.

ಅವರ ಸಾರ್ವಜನಿಕ ಶಿಕ್ಷಣ ಸಂಸ್ಥೆಯ ಮುಖ್ಯ ಕೇಂದ್ರ ವಿದ್ಯಾರಣ್ಯಪುರಂನಲ್ಲಿದೆ. ಚಾಮುಂಡಿಬೆಟ್ಟದ ಮೇಲೆ ಸುಮಾರು 60 'ಹೆಣ್ಣು ಮಕ್ಕಳ' ವಸತಿ ಸೌಕರ್ಯವುಳ್ಳ ಸಂಸ್ಥೆ ಹೊಂದಿದೆ. ಆ ಸಂಸ್ಥೆಯಲ್ಲಿ ಹೆಚ್ಚಿನ ಸೌಲಭ್ಯಗಳ ಅಗತ್ಯವಿದೆ.

ಈಗಾಗಲೇ ರೋಟರಿ ಐವರಿ ಸಿಟಿ ಮೈಸೂರು ಶಾಲೆಗೆ ಸುಸಜ್ಜಿತ ಸ್ನಾನಗೃಹ, ಶೌಚಾಲಯಗಳು, ಕುಡಿಯುವ ನೀರು ಮತ್ತು ಹಲವು ಶೈಕ್ಷಣಿಕ ನೆರವು ಒದಗಿಸಿದೆ. ಪ್ರಸ್ತುತ, ಶಾಲೆಯ ವಿದ್ಯಾರ್ಥಿನಿಯರ ಸುರಕ್ಷತೆ ಕಾಪಾಡಲು ಕಾಂಪೌಂಡ್ ಗೋಡೆ ಮತ್ತು ಕಬ್ಬಿಣದ ಗೇಟ್‌ಗಳನ್ನು ಕಲ್ಪಿಸಲು ಈ ಸಹಾಯಾರ್ಥ ಸಹಕಾರಿಯಾಗುತ್ತದೆ.

ಮೈಸೂರಿನ ನಾಗರಿಕರು ಮತ್ತು ಸಂಗೀತ ಪ್ರಿಯರು 'ಪಿಬಿಎಸ್–ಎಸ್‌ಪಿಬಿ ಸಂಗೀತ ಸಂಜೆ' ಸದುದ್ದೇಶಕ್ಕೆ ಸಹಕಾರಿಯಾಗಬೇಕಿದೆ.

ಈ ತಂಡದಲ್ಲಿ ಪ್ರಸಿದ್ಧ ಇಎನ್‌ಟಿ ಶಸ್ತ್ರಚಿಕಿತ್ಸಕ ಮತ್ತು ಗೀತ್ ಗಾತಾ ಚಲ್‌ನಲ್ಲಿ ದೀರ್ಘಕಾಲದಿಂದ ಗುರುತಿಸಿಕೊಂಡಿರುವ ಡಾ.ಎಂ.ಎಸ್. ನಟಶೇಖರ್; ಖ್ಯಾತ ಗಾಯಕ ತ್ಯಾಗರಾಜ್, ಎಸ್‌ಬಿಐನ ನಿವೃತ್ತ ಅಧಿಕಾರಿ ಜಯಂತಿ ಭಟ್ ಇದ್ದಾರೆ. ದಿವಂಗತ ಎಸ್‌ಪಿಬಿ ಕಾರ್ಯಕ್ರಮ ನಿರೂಪಣೆ ಮಾಡಿದ ಜೀ ಟಿವಿ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿರುವ ದಕ್ಷಿಣ ರೈಲ್ವೆಯ ಅಧಿಕಾರಿ ಹಂಸಿನಿ ಕುಮಾರ್; ಉದಯೋನ್ಮುಖ ಹಿನ್ನೆಲೆ ಗಾಯಕ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿ ರುತ್ವಿಕ್ ರಾಜ್ ಭಾಗವಹಿಸಲಿದ್ದಾರೆ.

73 ವರ್ಷದ ವಿ.ಎನ್. ಪ್ರಸಾದ್ ಅವರು ಪ್ರಸಿದ್ಧ ಗಾಯಕರ ತಂಡವನ್ನು ಮುನ್ನಡೆಸುತ್ತಿದ್ದು, ಮೈಸೂರು ಜನರನ್ನು ರಂಜಿಸಲಿದ್ದಾರೆ.

ಈ ಕಾರ್ಯಕ್ರಮವನ್ನು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಮಹಿಳಾ ವಿಭಾಗದಲ್ಲಿ 'ಸ್ಫೂರ್ತಿ' ಎಂದು ಕರೆಯಲ್ಪಡುವ ಅಪಾರ ಅನುಭವ ಹೊಂದಿದ, ಕನ್ನಡವನ್ನು ನಿರರ್ಗಳವಾಗಿ ಮಾತನಾಡುವ ಮೈಸೂರಿನ ನಿವಾಸಿ ಶಾಂತಿ ಭಾರದ್ವಾಜ್ ನಿರೂಪಣೆ ಮಾಡಲಿದ್ದಾರೆ.



ಶಾಂತಿ ಭಾರದ್ವಾಜ್

ಕಲಾಮಂದಿರದ ಪ್ರವೇಶ ದ್ವಾರದಲ್ಲಿ ಡೊನೇಷನ್ ಕೇಂದ್ರವನ್ನು ಸ್ಥಾಪಿಸಲಾಗುವುದು. ಮೈಸೂರು ನಿವಾಸಿಗಳು ಸದುದ್ದೇಶಕ್ಕಾಗಿ ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರಲಾಗಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ. ವಿವರಗಳಿಗಾಗಿ, ಸಂಪರ್ಕಿಸಿ : ವಿ.ಎನ್. ಪ್ರಸಾದ್, ಮೊಬೈಲ್ ಸಂಖ್ಯೆ: 94490–58209.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶನಿವಾರ 22 ಫೆಬ್ರವರಿ 2025

ಮೈಸೂರು ನಗರ ಪಾಲಿಕೆಯಲ್ಲಿ ಆರ್ಥಿಕ ಶಿಸ್ತಿಲ್ಲ

● ಅಧಿಕಾರಿಗಳ ತರಾಟೆಗೆ ತೆಗೆದುಕೊಂಡ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ● ನಿರ್ವಹಣೆಗೆ ಪಾಲಿಕೆಗೆ 450 ಕೋಟಿ ಅಗತ್ಯವಿದೆ ● ಇನ್ನು ಕಾಮಗಾರಿ ಕೈಗೆತ್ತಿಕೊಳ್ಳಲು ಅಗತ್ಯ ಅನುದಾನವೇ ಇಲ್ಲ

ಅನುದಾನ ಹೊಂದಾಣಿಕೆಗೆ ಸಚಿವರ ಸೂಚನೆ; ಆರಂಭಿಸಿರುವ ಕಾಮಗಾರಿ ಪೂರ್ಣಗೊಳಿಸಲು ತಾಕೀತು

ಮೈಸೂರು, ಫೆ.21(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆಯಲ್ಲಿ ಆರ್ಥಿಕ ಶಿಸ್ತಿಲ್ಲವೇ? ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅಧಿಕಾರಿಗಳ ತರಾಟೆ ತೆಗೆದುಕೊಂಡರು.

ನಗರ ಪಾಲಿಕೆಯಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಪಾಲಿಕೆಯ ಪ್ರಸ್ತುತ ಆರ್ಥಿಕ ಸ್ಥಿತಿ–ಗತಿ, ತೆರಿಗೆ ಸಂಗ್ರಹದ ಪ್ರಗತಿ ಇನ್ನಿತರ ವಿಚಾರಗಳ ಬಗ್ಗೆ ಮಾಹಿತಿ ಪಡೆದ ಬಳಿಕ ಪಾಲಿಕೆಯ ಆರ್ಥಿಕ ಶಿಸ್ತಿನ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರು.

450 ಕೋಟಿ ಹೊರೆ: ಸಭೆಯ ಆರಂಭದಲ್ಲಿ ವಿವರಣೆ ನೀಡಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕಳೆದೆರಡು ಆರ್ಥಿಕ ವರ್ಷದ 30 ಕೋಟಿ ಬಾಕಿ ಹಾಗೂ ಪ್ರಸಕ್ತ ಬೇಡಿಕೆ 220 ಕೋಟಿ ಸೇರಿ ಪಾಲಿಕೆಯಲ್ಲಿ ಒಟ್ಟು 250 ಕೋಟಿ ಸಂಪನ್ಮೂಲವಿದೆ. ಆಸ್ತಿ ತೆರಿಗೆ ಹಾಗೂ ನೀರಿನ ಶುಲ್ಕದಿಂದ 350 ಕೋಟಿ ರೂ. ಆದಾಯ ಬರಬಹುದು. ಟ್ರೇಡ್ ಲೈಸೆನ್ಸ್, ಬಿಲ್ಡಿಂಗ್ ಲೈಸೆನ್ಸ್ ಫೀಸ್, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನ ಸೇರಿ ಪಾಲಿಕೆ ಬಜೆಟ್ ಸಾವಿರ ಕೋಟಿ ರೂ. ಆಗಬಹುದು ಎಂದು ತಿಳಿಸಿದರು.

ಸರ್ಕಾರಗಳ ಅನುದಾನ ಹಾಗೂ ಪಾಲಿಕೆಯ ಸ್ವಂತ ಹಣದಲ್ಲಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. 2020–21ನೇ ಸಾಲಿನ ಒಂದು ಕಾಮಗಾರಿ ಟೆಂಡರ್ ಹಂತದಲ್ಲಿದ್ದು, ಪ್ರಗತಿಯಲ್ಲಿರುವ 9 ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. 15ನೇ ಹಣಕಾಸು ಆಯೋಗದ 2023–24 ಹಾಗೂ 24–25 ಸಾಲಿನ ಅನುದಾನ ಬಂದಿಲ್ಲ. 2023–24ರಲ್ಲಿ ಕೌನ್ಸಿಲ್



ಮೈಸೂರು ಮಹಾನಗರ ಪಾಲಿಕೆಯಲ್ಲಿ ಶುಕ್ರವಾರ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಶಾಸಕರಾದ ಜಿ.ಟಿ.ದೇವೇಗೌಡರು, ಶ್ರೀವತ್ಸ, ಕೆ.ಹರೀಶ್‌ಗೌಡ, ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರ ಅಧಿಕಾರಿಗಳು ಉಪಸ್ಥಿತರಿದ್ದರು.

ಇತ್ತು. ಮೇಯರ್ ಅಧ್ಯಕ್ಷತೆಯಲ್ಲಿ 2023ರ ಆ.17ರಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಕಾರ್ಯಯೋಜನೆಗೆ ಅನುಮೋದನೆ ದೊರೆತು, ಕೆಲಸವೂ ಪ್ರಾರಂಭವಾಗಿತ್ತು. ನ.11ಕ್ಕೆ ಕೌನ್ಸಿಲ್ ಅವಧಿ ಮುಕ್ತಾಯವಾಯಿತು. ಆ ವರ್ಷದ ಅನುದಾನದ 26 ಕೋಟಿ ರೂ ಮೊದಲ ಕಂತು 2024ರ ಜುಲೈನಲ್ಲಿ ಬಂದಿತ್ತು. ಆದರೆ ಆ ವೇಳೆಗೆ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲ ಎಂಬ ಕಾರಣಕ್ಕೆ ಅನುದಾನ ವಾಪಸ್ ಹೋಗಿದ್ದರಿಂದ ಹಿಂದಿನ ಕಾಮಗಾರಿಗಳ ಬಿಲ್ ಬಾಕಿ ಆಯಿತು. ಹಾಗಾಗಿ ಇನ್ನೂ ಆರಂಭವಾಗದ ಕಾಮಗಾರಿಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ ಎಂದರು.

2024–25 ನೇ ಸಾಲಿನ ಶೇ.80ರಷ್ಟು ಕಾಮಗಾರಿಗಳು ಆರಂಭವಾಗಿದ್ದು, ಶೇ.15 ರಷ್ಟು ಕಾಮಗಾರಿಗಳನ್ನು ಭೌತಿಕವಾಗಿ ಆರಂಭಿಸಿಲ್ಲ. ಈ ಕಾಮಗಾರಿಗಳನ್ನು ಅನಿವಾರ್ಯವಾಗಿ ತಡೆಹಿಡಿಯಬೇಕಿದೆ. ವೇತನ, ನಿರ್ವಹಣೆ ವೆಚ್ಚ ಹೊರತುಪಡಿಸಿ ಅಭಿವೃದ್ಧಿ ಕಾಮಗಾರಿಗಳಿಗೆ 70–80 ಕೋಟಿ ರೂ. ಬಳಸಿಕೊಳ್ಳಲು ಅವಕಾಶವಾಗುತ್ತಿದೆ. ಆದರೆ ಈಗಾಗಲೇ 64 ಕೋಟಿ ರೂ. ಕಾಮಗಾರಿ ಪ್ರಗತಿಯಲ್ಲಿವೆ. 20 ಕೋಟಿ ರೂ. ಕಾಮಗಾರಿ ಪೂರ್ಣಗೊಂಡಿದ್ದು, ಅವುಗಳ ಬಿಲ್ ಲೆಕ್ಕ ವಿಭಾಗಕ್ಕೆ ಸಲ್ಲಿಕೆಯಾಗಿಲ್ಲ. 110 ಕೋಟಿ ರೂ. ಕಾಮಗಾರಿಯ ಬಿಲ್ ಲೆಕ್ಕ ವಿಭಾಗಕ್ಕೆ ಸಲ್ಲಿಕೆಯಾಗಿದ್ದು, ಬಿಡುಗಡೆ ಮಾಡಿಲ್ಲ. ವಾಣಿವಿಲಾಸ ವಾಟರ್ ವರ್ಕ್ಸ್ ಪಂಪ್ ಆಪರೇಟರ್‌ಗಳು, ಆಟೋ ಚಾಲಕರಿಗೆ ನಾಲ್ಕು ತಿಂಗಳಿಂದ ವೇತನ ನೀಡಿಲ್ಲ. ಪೌರಕಾರ್ಮಿಕರು. ಭದ್ರತಾ ಸಿಬ್ಬಂದಿ ವೇತನ, 350ಕ್ಕೂ ಹೆಚ್ಚು ವಾಹನಗಳ ನಿರ್ವಹಣೆ ಸೇರಿದಂತೆ ಮುಂದಿನ ಮಾರ್ಚ್‌ವರೆಗೆ 50 ಕೋಟಿ ಅಗತ್ಯವಿದೆ. ಒಟ್ಟಾರೆ ಪಾಲಿಕೆಗೆ 450 ಕೋಟಿ ರೂ. ಅಗತ್ಯವಿದೆ ಎಂದು ಪಾಲಿಕೆ ಆರ್ಥಿಕ ದುಸ್ಥಿತಿ ಬಗ್ಗೆ ವಿವರಿಸಿದರು.

ಪಾಲಿಕೆ ಆಯುಕ್ತರ ನೆರವಿಗೆ ಬಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಪಾಲಿಕೆಯಿಂದ ವಾರ್ಷಿಕ 220 ಕೋಟಿ ತೆರಿಗೆ ಸಂಗ್ರಹಿಸಲಾಗುತ್ತದೆ. ಅದರಲ್ಲಿ ಮಾಸಿಕ 10–12 ಕೋಟಿಯಂತೆ ವಾರ್ಷಿಕ 120 ಕೋಟಿ ನಿರ್ವಹಣೆಗೆ ವೆಚ್ಚವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಿದ್ದರೂ ಇನ್ನುಳಿಯುವ 70–80 ಕೋಟಿ ಹಣದಲ್ಲಿ ಬಾಕಿ ಬಿಲ್ ಪಾವತಿಸುವಂತಾದರೆ ಇನ್ನೂ ನಾಲ್ಕು ವರ್ಷಗಳು ಬೇಕಾಗುತ್ತದೆ ಎಂದರು.

ಈ ವೇಳೆ ಸಚಿವ ಬೈರತಿ ಸುರೇಶ್, 2017ರಿಂದ ಪಾಲಿಕೆಯಲ್ಲಿ ಈ ಪರಿಸ್ಥಿತಿ ಇದೆ. ಇಷ್ಟು ವರ್ಷ ಸರಿದೂಗಿಸುವ ಪ್ರಯತ್ನ ಮಾಡಲಿಲ್ಲವೇ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತರು, 2021 ರಿಂದ 2024ರವರೆಗಿನ ಮೂರು ಆರ್ಥಿಕ ವರ್ಷದಲ್ಲಿ ಹೆಚ್ಚು ಅಂದರೆ 110 ಕೋಟಿ ಬಿಲ್ ಬಾಕಿ ಇದೆ ಎಂದು ತಿಳಿಸಿದರು.

ಆರ್ಥಿಕ ಶಿಸ್ತಿಲ್ಲ: 2023–24ನೇ ಸಾಲಿನ ಹಣಕಾಸು ಆಯೋಗದ ಹಣ ಬಂದರೂ ಹಳೇ ಬಿಲ್ ಪಾವತಿ ಮಾಡಲು 300 ಕೋಟಿ ಬೇಕು. ತಕ್ಷಣ ಅಷ್ಟೊಂದು ಹಣ ಯಾರು ಕೊಡುತ್ತಾರೆ? ಹಾಗಾದರೆ ಪಾಲಿಕೆಯಲ್ಲಿ ಆರ್ಥಿಕ ಶಿಸ್ತಿಲ್ಲ ಎಂದು ಸಚಿವರು ಇದೇ ವೇಳೆ ಅಧಿಕಾರಿಗಳ ತರಾಟೆ ತೆಗೆದುಕೊಂಡರು.

ಶಾಸಕರುಗಳು ಆಕ್ಷೇಪ: ಆರ್ಥಿಕ ದುಸ್ಥಿತಿ ಕಾರಣದಿಂದ ಭೌತಿಕವಾಗಿ ಇನ್ನೂ ಆರಂಭವಾಗಿರದ ಕಾಮಗಾರಿಗಳ ಸ್ಥಗಿತಗೊಳಿಸುವುದಕ್ಕೆ ಸಭೆಯಲ್ಲಿ ಹಾಜರಿದ್ದ ಶಾಸಕರಾದ ಜಿ.ಟಿ.ದೇವೇಗೌಡರು, ಟಿ.ಎಸ್.ಶ್ರೀವತ್ಸ ಹಾಗೂ ಕೆ.ಹರೀಶ್‌ಗೌಡ ಆಕ್ಷೇಪ ವ್ಯಕ್ತಪಡಿಸಿದರು. ಈಗಾಗಲೇ ಭೂಮಿ ಪೂಜೆ ಮಾಡಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಿದರೆ ಜನರಿಗೆ ನಾವು ಏನೆಂದು ಉತ್ತರ ನೀಡುವುದು. ಭೂಮಿಪೂಜೆ ಮಾಡಿ, ಚಾಲನೆ ನೀಡಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಬಾರದು ಎಂದು ಆಗ್ರಹಿಸಿದರು.

ಸಚಿವರ ಭರವಸೆ, ಲೆಕ್ಕಾಚಾರ: ಶಾಸಕರ ಒತ್ತಾಯಕ್ಕೆ ಸ್ಪಂದಿಸಿದ ಸಚಿವರು, ಈಗಾಗಲೇ ಭೂಮಿ ಪೂಜೆ ಮಾಡಿರುವ ಕಾಮಗಾರಿಗಳನ್ನು ನಿಲ್ಲಿಸುವುದು ಸರಿಯಲ್ಲ. ಮಹಾತ್ಮ ಗಾಂಧೀ ನಗರ ವಿಕಾಸ ಯೋಜನೆಯಡಿ 150 ಕೋಟಿ ನೀಡಿದ್ದು, ಆ ಹಣದಲ್ಲಿ ಆರಂಭವಾಗಿರದ ಕಾಮಗಾರಿಗಳನ್ನು ಸೇರಿಸಿಕೊಳ್ಳಿ. ಇನ್ನು 55 ಕಿ.ಮೀ. ವೈಟ್ ಟ್ಯಾಪಿಂಗ್‌ಗೆ 400 ಕೋಟಿ ಕೊಡುತ್ತಿದ್ದೇವೆ. ಕುಕ್ಕರಹಳ್ಳಿ ಕೆರೆ ಹಾಗೂ ದಳವಾಯಿ ಕೆರೆ ಅಭಿವೃದ್ಧಿಗೆ 45 ಕೋಟಿ ರೂ. ನೀಡಲಾಗುತ್ತಿದೆ. ಎಲ್ಲಾ ಅನುದಾನಗಳೂ ಸೇರಿ ಸುಮಾರು 1200 ಕೋಟಿ ಆಗಬಹುದು. ಗುತ್ತಿಗೆದಾರರನ್ನು ಅಲೆಸಬೇಡಿ. ಹಂತ ಹಂತವಾಗಿ ಅವರ ಬಿಲ್ ಕ್ಲಿಯರ್ ಮಾಡಿಕೊಡಿ. ಈ ಸಂಬಂಧ ಸೂರ್ಮಕ ಪ್ರಸ್ತಾವನೆ ಸಲ್ಲಿಸಿ ಎಂದು ಹೇಳುವ ಮೂಲಕ ಆರ್ಥಿಕ ಸಂಕಷ್ಟದಲ್ಲಿರುವ ಪಾಲಿಕೆಗೆ ಅಭಯ ಹಸ್ತ ನೀಡಿದರು.

ಬಿಬಿಎಂಪಿ ಮಾದರಿ ಮೈಸೂರಲ್ಲೂ ತೆರಿಗೆ ಸಂಗ್ರಹಕ್ಕೆ ಸೂಚನೆ

ಮೈಸೂರು, ಫೆ.21(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಕ್ಕೆ ಬಿಬಿಎಂಪಿ ಮಾದರಿಯಲ್ಲಿ ಕಠಿಣ ಕ್ರಮ ಅನುಸರಿಸುವಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಆಸ್ತಿ ತೆರಿಗೆ ಹಾಗೂ ನೀರಿನ ಶುಲ್ಕ ಸಂಗ್ರಹದಲ್ಲಿ ಗುರಿ ಸಾಧನೆ ಆಗದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರಲ್ಲದೆ, ನೂರಾರು ಕೋಟಿ ಅನುದಾನ ಬೇಕು ಎನ್ನುತ್ತೀರಿ ಆದರೆ ಏಕೆ ಕಟ್ಟುನಿಟ್ಟಾಗಿ ತೆರಿಗೆ ಸಂಗ್ರಹಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಈವರೆಗೆ ಶೇ.82ರಷ್ಟು ಆಸ್ತಿ ತೆರಿಗೆ ಹಾಗೂ ಶೇ.65 ರಷ್ಟು ನೀರಿನ ಶುಲ್ಕ ವಸೂಲಿ ಮಾಡಲಾಗಿದೆ. ಉಳಿದಿರುವ ಶೇ.18ರಷ್ಟು ಆಸ್ತಿ ತೆರಿಗೆ ವಸೂಲಿಗೆ ಕ್ರಮ ವಹಿಸಲಾಗಿದೆ. ಎಲ್ಲಾ ಕಂದಾಯ ನಿರೀಕ್ಷಕರ ವ್ಯಾಪ್ತಿಯಲ್ಲಿ ಹೆಚ್ಚು ತೆರಿಗೆ ಪಾವತಿಸಬೇಕಿರುವ 100 ಮಂದಿಯ ಪಟ್ಟಿ ಮಾಡಿ, ಅವರಿಗೆ ವಸೂಲಾತಿ ಗುರಿ ನೀಡಲಾಗಿದೆ ಎಂದು ಸಚಿವರಿಗೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಬೆಂಗಳೂರಲ್ಲಿ ಒಂದು ತಿಂಗಳು ವಿಳಂಬವಾದರೂ ದುಪ್ಪಟ್ಟು ತೆರಿಗೆ ಪಾವತಿಸಬೇಕು. ಈ ಕ್ರಮವನ್ನು ಮೈಸೂರಿನಲ್ಲಿ ಏಕೆ ಅನುಷ್ಠಾನ ಮಾಡಲು ಸಾಧ್ಯವಾಗಿಲ್ಲ. ಶಾಸಕರು ಏನಾದರೂ ತೆರಿಗೆ ಸಂಗ್ರಹಿಸಬೇಡಿ ಎನ್ನುತ್ತಾರಾ?. ಈವರೆಗೆ 210 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದ್ದೀರಿ. ಇನ್ನೂ 30–40 ಕೋಟಿ ತೆರಿಗೆ ಬಾಕಿ ಇದೆ. ನೀವು ಹೊಸ ಎಸ್‌ಆರ್ ವ್ಯಾಲ್ಯೂ ಪ್ರಕಾರ ತೆರಿಗೆ ಸಂಗ್ರಹಿಸುತ್ತಿಲ್ಲ ಎಂದು ತರಾಟೆ ತೆಗೆದುಕೊಂಡರು.

ಹೊಸ ಎಸ್‌ಆರ್ ವ್ಯಾಲ್ಯೂ ಪ್ರಕಾರ ಆಸ್ತಿ ತೆರಿಗೆ ನಿಗದಿ ಮಾಡಿ. ನಿಗದಿತ ಸಮಯಕ್ಕೆ ತೆರಿಗೆ ಪಾವತಿಸದಿದ್ದರೆ ಬಡ್ಡಿ ವಿಧಿಸಿ. ಆದಾಗ್ಯೂ ಪಾವತಿ ಮಾಡದಿದ್ದರೆ ಕಟ್ಟಡಕ್ಕೆ ಬೀಗ ಹಾಕಿ. ಇಲ್ಲವೇ ವಿದ್ಯುತ್ ಹಾಗೂ ನೀರಿನ ಸಂಪರ್ಕವನ್ನು ಕಡಿತಗೊಳಿಸಿ. ಇನ್ನೂ ಶೇ.30ರಷ್ಟು ನೀರು ಬಳಕೆದಾರರು ಬಿಲ್ ಪಾವತಿ ಮಾಡಿಲ್ಲ. ಸರಿಯಾಗಿ ತೆರಿಗೆ ಸಂಗ್ರಹಿಸದಿದ್ದರೆ ಹೇಗೆ?. ಬೆಂಗಳೂರಿನಲ್ಲಿ ಒಂದು ದಿನವೂ ಕಾಲಾವಕಾಶ ನೀಡುವುದಿಲ್ಲ. ಅಲ್ಲಿರುವ ಕಠಿಣ ವ್ಯವಸ್ಥೆಯನ್ನು ಮೈಸೂರಿನಲ್ಲೂ ಅನುಷ್ಠಾನಗೊಳಿಸಿ ಎಂದು ಸೂಚಿಸಿದರು.

ಈ ವೇಳೆ ಪಾಲಿಕೆ ಆಯುಕ್ತರು, ಕಟ್ಟಡಗಳ ಪರಿಶೀಲಿಸಿ ಸೂಕ್ತ ತೆರಿಗೆ ನಿಗದಿಪಡಿಸಿದರೆ ತೆರಿಗೆ ಪ್ರಮಾಣ ಕನಿಷ್ಠ ಶೇ.20ರಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದರು. ಆಗ ಸಚಿವರು ಇದರ ಬಗ್ಗೆ ವಿಶೇಷ ಗಮನಹರಿಸುವಂತೆ ಉಪ ಆಯುಕ್ತರುಗಳಿಗೆ ನಿರ್ದೇಶನ ನೀಡಿದರು.

ಖಾತೆ ನೀಡಿ: ರಾಜ್ಯದಲ್ಲಿ ನಗರಪ್ರದೇಶಗಳ 55 ಲಕ್ಷಕ್ಕೂ ಹೆಚ್ಚು ಆಸ್ತಿ ಮಾಲೀಕರು ತೆರಿಗೆ ಪಾವತಿಸಿಲ್ಲ. ಅವರಿಗೆ ಬಿ–ಖಾತಾ ಆಧಾರದಲ್ಲಿ ತೆರಿಗೆ ವ್ಯಾಪ್ತಿಗೆ ಸೇರಿಸಲು ಕ್ರಮ ವಹಿಸಲಾಗಿದೆ. ಎಲ್ಲವನ್ನೂ ಕಾನೂನು ದೃಷ್ಟಿಯಲ್ಲೇ ಕ್ರಮ ವಹಿಸಿದರೆ ತೆರಿಗೆ ಪಾವತಿಯಿಂದ ಹೊರಗಿರುವವರು ಹಾಗೆಯೇ ಉಳಿದುಬಿಡುತ್ತಾರೆ. ನೀರು, ಥಾರು, ರೋಡು ಹಾಕಿಕೊಂಡು ಇರಬೇಕಾಗುತ್ತದೆ. ಹಾಗಂತ ಮಾಲೀಕರಲ್ಲದವರಿಗೆ ಖಾತೆ ಮಾಡಿಕೊಡಬಾರದು. ಖಾತೆಗೆ ಸದರಿ ಆಸ್ತಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಆಗಿರಲೇಬೇಕೆಂದಿಲ್ಲ. ಹಾಗಾದರೆ ಪೂರ್ವಜರಿಂದ ಬಂದಿರುವ ಆಸ್ತಿಗೆ ಸೇಲ್ ಡೀಡ್ ಎಲ್ಲಿ ಸಿಗುತ್ತದೆ. ವಿಭಾಗ ಪತ್ರ, ದಾನಪತ್ರಗಳ ಮೇಲೂ ಖಾತೆ ನೀಡಬಹುದು. ಈ ಬಗ್ಗೆ ಸ್ಥಳೀಯವಾಗಿ ನಿಯಮ ರೂಪಿಸಿಕೊಂಡು ಪಾಲಿಕೆ ಆರ್ಥಿಕ ಸಂಪನ್ಮೂಲ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಲ್ ಆಧಾರದಲ್ಲಿ ಕ್ರಮ: ವಿದ್ಯುತ್ ಹಾಗೂ ನೀರಿನ ಬಿಲ್ ಆಧಾರದಲ್ಲಿ ಆಸ್ತಿ ಗುರುತಿಸಿ, ಅವುಗಳಿಗೂ ಖಾತೆ ನೀಡುವ ನಿಯಮ ಜಾರಿಗೆ ತರಲಾಗುತ್ತಿದೆ. ಮೊದಲ ಹಂತದಲ್ಲಿ ಆಸ್ತಿ ಮಾಲೀಕತ್ವ ಸಾಬೀತುಪಡಿಸುವ ದಾಖಲೆ ಆಧಾರದಲ್ಲಿ ಖಾತೆ ನೀಡಲು ಕ್ರಮ ವಹಿಸಿ. ನಂತರ ವಿದ್ಯುತ್ ಹಾಗೂ ನೀರಿನ ಬಿಲ್ ಆಧಾರದಲ್ಲಿ ತೆರಿಗೆ ಪಾವತಿಸದಿರುವ ಆಸ್ತಿಗಳನ್ನು ಪಟ್ಟಿ ಮಾಡಿ. ಅಧಿಕಾರಿಗಳೇ ನೇರವಾಗಿ ಅಂತಹವರ ಮನೆಗೆ ಭೇಟಿ ನೀಡಿ, ಪರಿಶೀಲನೆ ಮಾಡಿ. ಆಸ್ತಿ ತೆರಿಗೆಯನ್ನು ಏಕೆ ಪಾವತಿಸುತ್ತಿಲ್ಲ ಎಂದು ಪ್ರಶ್ನಿಸಿ. ಆಗ ಅವರೇ ಯಾವುದಾದರೂ ದಾಖಲೆ ನೀಡುತ್ತಾರೆ. ನಂತರ ನಿಯಮಾನುಸಾರ ಖಾತೆ ಮಾಡಿಕೊಡಿ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ; ಮೂವರ ಬಂಧನ

ಬೆಂಗಳೂರು, ಫೆ.21– ಬೆಂಗಳೂರಿನ ಕೋರಮಂಗಲದಲ್ಲಿ 36 ವರ್ಷದ ಮಹಿಳೆಯ ಮೇಲೆ ನಾಲ್ವರು ಕಾಮುಕರು ಸಾಮೂಹಿಕ ಅತ್ಯಾಚಾರ ಎಸಗಿದ್ದು, ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಗುರುವಾರ ಮಧ್ಯರಾತ್ರಿ ಈ ಪೈಶಾಚಿಕ ಕೃತ್ಯ ನಡೆದಿದ್ದು, ಶುಕ್ರವಾರ ಬೆಳಗ್ಗೆ ದೂರು ದಾಖಲಾಗಿದೆ.

ಮಹಿಳೆ ನೀಡಿದ ದೂರಿನ ಆಧಾರದ ಮೇಲೆ ಕೊರಮಂಗಲ ಪೊಲೀಸ್ ಠಾಣೆಯಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಾಗಿದ್ದು, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ ಮೂಲದ ಅಜಿತ್, ವಿಶ್ವಾಸ್, ಶಿವು ಎಂಬುವರನ್ನು ಬಂಧಿಸಿದ್ದಾರೆ.

ಜ್ಯೋತಿ ನಿವಾಸ್ ಕಾಲೇಜು ಜಂಕ್ಷನ್‌ನಲ್ಲಿ ಬಸ್‌ಗಾಗಿ ಕಾಯುತ್ತಿದ್ದಾಗ ನಾಲ್ವರು ಯುವಕರು ತನ್ನ ಬಳಿಗೆ ಬಂದು ಮಾತನಾಡಲು ಆರಂಭಿಸಿದ್ದಾರೆ ಎಂದು ವಿವಾಹಿತ ಸಂತ್ರಸ್ತ ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಬಳಿಕ ತನ್ನೊಂದಿಗೆ ಸ್ನೇಹ ಬೆಳೆಸಿಕೊಂಡು ಹೋಟೆಲ್‌ನಲ್ಲಿ ಊಟಕ್ಕೆ ಆಹ್ವಾನಿಸಿದರು. ಊಟದ ಬಳಿಕ ಹೋಟೆಲ್‌ನ ಟೆರೇಸ್ ಮೇಲೆ ಕರೆದುಕೊಂಡು ಹೋಗಿ ನಾಲ್ವರು ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಮಹಿಳೆ ಆರೋಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬಗ್ಗೆ ಯಾರಿಗೂ ಹೇಳದಂತೆ ಬೆದರಿಕೆ ಹಾಕಿ ಇಂದು ಬೆಳಗ್ಗೆ 6 ಘಂಟೆ ಸುಮಾರಿಗೆ ಮೊಬೈಲ್, ಪರ್ಸ್ ಕಿತ್ತುಕೊಂಡು ಮಹಿಳೆಯನ್ನು ಆರೋಪಿಗಳು ಓಡಿಸಿದ್ದಾರೆ. ಘಟನೆ ಬಳಿಕ 122 ಕರೆ ಮಾಡಿದ ಮಹಿಳೆ ಮಾಹಿತಿ ನೀಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೂರಿನಲ್ಲಿ ನಾಲ್ವರು ವ್ಯಕ್ತಿಗಳ ಹೆಸರುಗಳನ್ನು ಹೆಸರಿಸಲಾಗಿದ್ದು, ಅವರಲ್ಲಿ ಮೂವರನ್ನು ಬಂಧಿಸಲಾಗಿದೆ. ಎಲ್ಲಾ ಆರೋಪಿಗಳು ಬೇರೆ ರಾಜ್ಯದವರು ಮತ್ತು ಈ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಜಂಟಿ ಆಯುಕ್ತ(ಪೂರ್ವ) ರಮೇಶ್ ಬಾನೋತ್ ಅವರು ತಿಳಿಸಿದ್ದಾರೆ.

ಸಂಭ್ರಮಾಚರಣೆ



ನೂತನವಾಗಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಎಚ್.ಎಸ್.ಮಂಜುನಾಥ್ ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಮೈಸೂರಿನ ಅರಮನೆ ಮುಂಭಾಗ ಕೋಟೆ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತು ಈ ಸಂದರ್ಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಪೈ. ನವೀನ್, ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷ ಧನಗಳ್ಳಿ ಪ್ರವೀಣ್, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಸ್.ಆರ್.ಎಸ್.ಮಂಜು, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ದೊಡ್ಡಕಾನ್ಯ ಪ್ರಕಾಶ್, ಜಿಲ್ಲಾ ಮಾಧ್ಯಮ ವಕ್ತಾರ ಚೆಟ್ಟಿ ಹುಂಡಿ ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿಗೆ ಬಿಜೆಪಿ ರೆಬಲ್ಸ್ ಕ್ಯಾಪ್ಟನ್ ಯತ್ನಾಳ್ ವಿಶೇಷ ಪೂಜೆ

ಶಕ್ತಿದೇವತೆ ಮುಂದೆ ಫೈಲ್ ಇಟ್ಟು ಪ್ರಾರ್ಥನೆ

● ಫೈಲ್‌ನಲ್ಲಿ ಏನಿದೆ ಎಂಬ ಸಹಜ ಕುತೂಹಲ ● ನೋಟಿಸ್‌ಗೆ ಉತ್ತರ ನೀಡಿದ ನಂತರ ಯತ್ನಾಳ್ ಟೆಂಪಲ್ ರನ್ ● ರೆಬಲ್ ಟೀಂನ ಇತರೆ ನಾಯಕರು ಗೈರು

ಮೈಸೂರು, ಫೆ.21(ಬಿಎಲ್‌ಯು)– ಬಿಜೆಪಿಯ ರೆಬಲ್ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಫೈಲ್‌ವೊಂದನ್ನು ಶಕ್ತಿದೇವತೆ ಮುಂದಿಟ್ಟು ಪೂಜೆ ಮಾಡಿಸಿರುವ ಯತ್ನಾಳ್ ನಡೆ ತೀವ್ರ ಕುತೂಹಲ ಮೂಡಿಸಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಬಂಡಾಯ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ಹೈಕಮಾಂಡ್ ನೀಡಿದ್ದ ನೋಟಿಸ್‌ಗೆ ಉತ್ತರ ನೀಡಿದ ನಂತರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕುಟುಂಬಸ್ಥರ ಹೆಸರಿನಲ್ಲಿ ಅರ್ಚನೆ ಮಾಡಿಸಿದ ಯತ್ನಾಳ್, ಫೈಲ್‌ವೊಂದನ್ನು ಚಾಮುಂಡೇಶ್ವರಿ ಮುಂದಿಟ್ಟು ಪೂಜೆ ಮಾಡಿಸಿದರು. ಯತ್ನಾಳ್ ಅವರು ದೇವರ ಮುಂದಿಟ್ಟು ಪೂಜೆ ಮಾಡಿಸಿದ ಫೈಲ್ ಯಾವುದು ಎಂಬ ಸಹಜ ಕುತೂಹಲ ಎಲ್ಲರನ್ನು ಕಾಡಲಾರಂಭಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ವಜಾ ಮಾಡಿ ನೂತನ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ಪಟ್ಟು ಹಿಡಿದಿರುವ ಯತ್ನಾಳ್‌ಗೆ ಬಿಜೆಪಿ ಹೈಕಮಾಂಡ್ ನೋಟಿಸ್ ಜಾರಿ ಮಾಡಿದೆ. ಪಕ್ಷದ ವರಿಷ್ಠರು ನೀಡಿದ್ದ ನೋಟಿಸ್‌ಗೆ ಉತ್ತರ ನೀಡಿದ ನಂತರವೂ ಯತ್ನಾಳ್ ವಿಜಯೇಂದ್ರ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ. ಈ ಬೆಳವಣಿಗೆ ಮಧ್ಯೆ ಯತ್ನಾಳ್ ಚಾಮುಂಡಿಬೆಟ್ಟದಲ್ಲಿ ನಾಡದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ್ದಾರೆ. ಚಾಮುಂಡೇಶ್ವರಿ ದರ್ಶನದ ನಂತರ ಆಂಜನೇಯ, ಗಣೇಶನಿಗೂ ಪೂಜೆ ಸಲ್ಲಿಸಿದರು. ರೆಬಲ್ ಟೀಂನಲ್ಲಿರುವ ರಮೇಶ್ ಜಾರಕಿಹೊಳಿ, ಮಧು ಬಂಗಾರಪ್ಪ, ಸಿದ್ದೇಶ್ವರ್, ಸ್ಥಳೀಯರಾದ ಪ್ರತಾಪ್ ಸಿಂಹ ಸೇರಿದಂತೆ ಇತರೆ ನಾಯಕರನ್ನು ಬಿಟ್ಟು ಯತ್ನಾಳ್ ಒಬ್ಬರೆ ಚಾಮುಂಡಿ ಬೆಟ್ಟಕ್ಕೆ ಬಂದಿರುವ ಬೆಳವಣಿಗೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.



ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಬಿಎಸ್‌ವೈ, ವಿಜಯೇಂದ್ರಗೆ ಜೈಕಾರ; ಯತ್ನಾಳ್‌ಗೆ ಮುಜುಗರ

ಬಸನಗೌಡ ಪಾಟೀಲ್ ಯತ್ನಾಳ್ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಲು ಬೆಟ್ಟಕ್ಕೆ ಬಂದ ಸಂದರ್ಭದಲ್ಲಿ ಯಡಿಯೂರಪ್ಪ ಹಾಗೂ ವಿಜಯೇಂದ್ರ ಅಭಿಮಾನಿಗಳು ತಮ್ಮ ನಾಯಕರಿಗೆ ಜೈಕಾರ ಹಾಕಿ ಯತ್ನಾಳ್‌ಗೆ ಮುಜುಗರ ಉಂಟು ಮಾಡಿದರು. ಕಾರಿನಿಂದ ಕೆಳಗಿಳಿದು ದೇವಸ್ಥಾನದ ಒಳಗೆ ಹೋಗುವಾಗ ಹಾಗೂ ದೇವರ ದರ್ಶನ ಪಡೆದು ಹೊರಗೆ ಬಂದಾಗ ಯಡಿಯೂರಪ್ಪ ಹಾಗೂ ವಿಜಯೇಂದ್ರ ಅಭಿಮಾನಿಗಳು ಜೈಕಾರ ಕೂಗಿದರು. ಇದಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದ ಯತ್ನಾಳ್ ಕಾರತ್ತಿ ನಿರ್ಗಮಿಸಿದರು. ಮಾಧ್ಯಮದವರು ಮೈಕ್ ಹಿಡಿದರೆ ಸಾಕು ವಿರೋಧಿಗಳ ಮೇಲೆ ಹರಿಹಾಯುತ್ತಿದ್ದ ಯತ್ನಾಳ್, ಇಂದು ಇರುಸು–ಮುರಿಸಿಗೊಳಗಾಗಿ ಪತ್ರಕರ್ತರಿಗೆ ಯಾವುದೇ ಪ್ರತಿಕ್ರಿಯೆ ನೀಡದೆ ತೆರಳಿದರು.

ಹಾಸನ ಮಿತ್ರ

10 ದಿನಗಳಲ್ಲಿ ಬೇಡಿಕೆ ಈಡೇರಿಕೆ ಚರ್ಚೆಗೆ ಕರೆಯದಿದ್ದಲ್ಲಿ ಅಣ್ಣಾ ಹಜಾರೆ, ಸಂತೋಷ್ ಹೆಗಡೆ ನೇತೃತ್ವದಲ್ಲಿ ಬೆಂಗಳೂರು ಚಲೋ

ಗೋಪಾಲ್ ಎಚ್ಚರಿಕೆ

ಹಾಸನ, ಫೆ.21–ಮುಖ್ಯಮಂತ್ರಿಗಳು 10 ದಿನಗಳ ಒಳಗಾಗಿ ನಮ್ಮ ಬೇಡಿಕೆ ಈಡೇರಿಕೆ ಕುರಿತು ಚರ್ಚೆಗೆ ಆಹ್ವಾನಿಸದಿದ್ದಲ್ಲಿ ಅಣ್ಣಾ ಹಜಾರೆ–ಸಂತೋಷ ಹೆಗಡೆ ಅವರುಗಳ ನೇತೃತ್ವದಲ್ಲಿ ಬೆಂಗಳೂರು ಚಲೋ ಅನಿರ್ದಿಷ್ಟಾವಧಿ ಪ್ರತಿಭಟನಾ ಸಮಾವೇಶವನ್ನು ನಡೆಸುವುದಾಗಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಕೇಂದ್ರ ಸಮಿತಿ ಜಿಲ್ಲಾ ಪ್ರಧಾನ ಸಂಚಾಲಕ ಗೋಪಾಲ್ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ : 1–7–2022 ರಿಂದ 31–7–2024ರ ಅವಧಿಯಲ್ಲಿ ನಿವೃತ್ತರಾದ ಅಧಿಕಾರಿ ಮತ್ತು ನೌಕರ ವರ್ಗದವರಿಗೆ 7ನೇ ವೇತನ ಆಯೋಗದಲ್ಲಿ ಆಗಿರುವ ಆರ್ಥಿಕ ನಷ್ಟದ ಕುರಿತು ಮುಖ್ಯಮಂತ್ರಿಗಳ ಗಮನ ಸೆಳೆಯಲು ಮುಂದಾಗಿದ್ದೇವೆ. ಒಂದು ವೇಳೆ ಮುಖ್ಯಮಂತ್ರಿಗಳು 10 ದಿನಗಳ ಒಳಗಾಗಿ ನಮ್ಮ ಬೇಡಿಕೆ ಈಡೇರಿಕೆ ಕುರಿತು ಚರ್ಚೆಗೆ ಆಹ್ವಾನಿಸದಿದ್ದಲ್ಲಿ ಅಣ್ಣಾ ಹಜಾರೆ–ಸಂತೋಷ ಹೆಗಡೆ ಅವರುಗಳ ನೇತೃತ್ವದಲ್ಲಿ ಬೆಂಗಳೂರು ಚಲೋ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಸಮಾವೇಶವನ್ನು ಅನಿರ್ದಿಷ್ಟ ಅವಧಿಗೆ ನಡೆಸುತ್ತೇವೆ.

ಸರಕಾರ ಸರಕಾರಿ ನೌಕರರಿಗೆ ವೇತನ ಭತ್ಯೆಗಳನ್ನು ಪರಿಷ್ಕರಿಸಲು ಹಾಗೂ ಪಿಂಚಣಿದಾರರ ಪಿಂಚಣಿಯನ್ನು ಪರಿಷ್ಕರಿಸಲು ಡಾ। ಸುಧಾಕರರಾವ್ ಅವರ ನೇತೃತ್ವದಲ್ಲಿ 7ನೇ ವೇತನ ಆಯೋಗವನ್ನು ರಚಿಸಿತ್ತು. ಸದರಿ ವೇತನ ಆಯೋಗವು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಸರಕಾರವು ಈ ಸಂಬಂಧ ದಿನಾಂಕ 23–08–2024 ರಂದು ವೇತನ ಭತ್ಯೆಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಸದರಿ ಆದೇಶದಲ್ಲಿ ದಿನಾಂಕ 01–08–2024 ರಿಂದ ವೇತನ ಭತ್ಯೆಗಳ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿದೆ. ವಾಸ್ತವವಾಗಿ ದಿನಾಂಕ 01–07–2022 ರಿಂದಲೇ ಜಾರಿಗೊಳಿಸಬೇಕಾಗಿದ್ದು, ನಿವೃತ್ತ ನೌಕರರಿಗೆ 7 ನೇ ವೇತನ ಆಯೋಗದ ಅನುಷ್ಠಾನದಲ್ಲಿ ನಿವೃತ್ತಿ ಉಪಲಬ್ಧಗಳನ್ನು ಪಾವತಿಸುವ ಸಂದರ್ಭದಲ್ಲಿ ಆರ್ಥಿಕ ನಷ್ಟವಾಗಿರುತ್ತದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಕೇಂದ್ರ ಸಮಿತಿ ರಾಜ್ಯ ಸಂಚಾಲಕ ಗಂಗೇಗೌಡ, ನಿಜಗುಣ, ತಾಲೂಕು ಪ್ರಧಾನ ಸಂಚಾಲಕ ಭಾಸ್ಕರ್ ಕುಮಾರ್, ಚಂದ್ರಶೆಟ್ಟಿ, ರಾಜ್ಯ ಸಂಚಾಲಕ ಕೆ.ಟಿ. ಪುಟ್ಟಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಖಾತೆ ಮಾಡಿಕೊಡಲು ಮಾ.1ರವರೆಗೆ ಗಡುವು

ಹಾಸನ, ಫೆ.21– ಕೊಟ್ಟಾಳು ಗ್ರಾಮದಲ್ಲಿ ನಿವೇಶನ ಇಲ್ಲದವರಿಗೆ ಭೂಮಿ ನೀಡಿದ್ದು, ಹಕ್ಕು ಪತ್ರ ಕೊಟ್ಟು ವರ್ಷವೇ ಕಳೆದರೂ ಇಲ್ಲಿನ ಅಧಿಕಾರಿಗಳು ಇಲ್ಲಸಲ್ಲದ ಸಬೂಬು ಹೇಳಿ ಅಲೆದಾಡಿಸುತ್ತಿದ್ದಾರೆ. ಕೂಡಲೇ ಖಾತೆಯನ್ನು ಮಾಡಿಕೊಡಬೇಕೆಂದು ಕರ್ನಾಟಕ ರಕ್ಷಣಾ ಸೇನೆಯ ರಾಜ್ಯಾಧ್ಯಕ್ಷ ಡಾ. ಎಸ್. ರಾಘವೇಂದ್ರಗೌಡ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2020–21 ರಲ್ಲಿ ರಾಮನಾಥಪುರ ಗ್ರಾಮ ಪಂಚಾಯಿತಿ ಮೂಲಕ ನಿವೇಶನ ಹಂಚಲಾಗಿತ್ತು. ಸುಮಾರು 59 ಮಹಿಳಾ ಅರ್ಹ ಫಲಾನುಭವಿಗಳಿದ್ದಾರೆ. ಯಾವುದೇ ದಾಖಲೆಗಳನ್ನು ಕೇಳಿದರೂ ಕೂಡ ನಿಮ್ಮ ಜಾಗಕ್ಕೆ ಸಂಬಂಧಪಟ್ಟಂತಹ ಯಾವುದೇ ಮಾಹಿತಿಯನ್ನು ಪಡೆಯಬೇಕಾದರೆ ಕೋರ್ಟ್‌ಲ್ಲಿ ಪಡೆದು ಕೊಳ್ಳಿ ಎಂದು ಹೇಳಿ ಕಳುಹಿಸುತ್ತಿದ್ದಾರೆ ಎಂದರು.

ಸರ್ಕಾರ ನಿವೇಶನ ರಹಿತರಿಗೆ ಗಾಂಧಿ ವಸತಿ ನಿಗಮ ನಿಯಮಿತ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನದ ಯೋಜನೆ ಅಡಿಯಲ್ಲಿ ಕಾಯ್ದಿರಿಸಿದ ಜಾಗದಲ್ಲಿ ನಿವೇಶನ ರಹಿತ ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅದರಲ್ಲಿ ಸೂಕ್ತರೆಂದು ಪರಿಗಣಿಸಿ ದಂಡಾಧಿಕಾರಿಗಳ ಸಮುಖದಲ್ಲಿ ಹಕ್ಕು ಪತ್ರವನ್ನು ವಿತರಿಸಲಾಗಿತ್ತು. ಆದರೂ ಇಲ್ಲಿಯವರೆಗೂ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಖಾತೆಯನ್ನು ಮಾಡಿಕೊಡಲು ಹಿಂದೇಟು ಹಾಕುತ್ತಿದ್ದಾರೆ ಎಂದರು.

ಈ ಸಂಬಂಧ ಮಾರ್ಚ್ 1ರ ವರೆಗೂ ಗಡುವು ನೀಡಿದ್ದು, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮಕೈಗೊಂಡು ಜನಸಾಮಾನ್ಯರಿಗೆ ಅವರ ಜಾಗದ ಖಾತೆಯನ್ನು ಮಾಡಿಸಿಕೊಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಮುಂದೆ ಯಾವುದೇ ರೀತಿಯ ಸಬೂಬು ನೀಡಿ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರತರವಾದ ಹೋರಾಟವನ್ನು ಮಾಡುವುದಾಗಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಇಂದ್ರಮ್ಮ, ವಸಂತ, ರತ್ನಮ್ಮ, ಹಾಗೂ ಜಾನಕ್ಕಮ್ಮ, ಅಪ್ಪುಲಾಲ್ ಇತರರು ಉಪಸ್ಥಿತರಿದ್ದರು.

ರಾಜ್ಯದ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ಅಳವಡಿಕೆ ಡೆಡ್‌ಲೈನ್ ಮತ್ತೆ ವಿಸ್ತರಣೆ

ಬೆಂಗಳೂರು, ಫೆ.21– ರಾಜ್ಯದ ಎಲ್ಲಾ ವರ್ಗಗಳ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ (ಅತಿಸುರಕ್ಷಿತ ನೋಂದಣಿ ಫಲಕ) ಅಳವಡಿಕೆ ಕಾಲಮಿತಿಯನ್ನು ಸಾರಿಗೆ ಇಲಾಖೆ ಮತ್ತೊಮ್ಮೆ ವಿಸ್ತರಿಸಿದೆ.



ರಾಜ್ಯದಲ್ಲಿ ಎಲ್ಲಾ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ಅಳವಡಿಕೆ ಅವಧಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಆ ಮೂಲಕ ಸಾರಿಗೆ ಇಲಾಖೆ 7ನೇ ಬಾರಿಗೆ ಕಾಲ ಮಿತಿ ವಿಸ್ತರಣೆ ಮಾಡಿದೆ. ಏಪ್ರಿಲ್ 1, 2019ರ ಮುನ್ನ ನೋಂದಣಿಯಾದ ವಾಹನಗಳು ಕಡ್ಡಾಯವಾಗಿ ಹೆಚ್‌ಎಸ್ ಆರ್‌ಪಿ ಅಳವಡಿಕೆ ಮಾಡಬೇಕು.

ಈ ಮುಂಚೆ ಜನವರಿ 31ರವರೆಗೆ ಕಾಲಮಿತಿಯನ್ನು ವಿಸ್ತರಿಸಲಾಗಿತ್ತು. ಹೆಚ್‌ಎಸ್‌ಆರ್‌ಪಿ ಅಳವಡಿಕೆ ಡೆಡ್‌ಲೈನ್ ಅನ್ನು ಹಲವು ಬಾರಿ ವಿಸ್ತರಣೆ ಮಾಡಲಾಗಿದೆ. 2023ರಂದು ಸಾರಿಗೆ ಇಲಾಖೆ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ಫಲಕ ಅಳವಡಿಕೆಯನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿತ್ತು ರಾಜ್ಯ ಸಾರಿಗೆ ಇಲಾಖೆ ಈವರೆಗೆ ಈ ನಂಬರ್ ಪ್ಲೇಟ್ ಅಳವಡಿಕೆಗೆ 6 ಬಾರಿ ಡೆಡ್‌ಲೈನ್ ವಿಸ್ತರಿಸಲಾಗಿದೆ. ಆದರೂ ಸಹ ವಾಹನ ಮಾಲೀಕರು ತಮ್ಮ ವಾಹನಕ್ಕೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿಲ್ಲ. ಹೀಗಾಗಿ, ರಾಜ್ಯ ಸಾರಿಗೆ ಇಲಾಖೆ ಈಗ ಮತ್ತೊಂದು ಅವಕಾಶ ನೀಡಿದೆ.

ಬಜೆಟ್‌ನಲ್ಲಿ ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ಫ್ಲೈ ಓವರ್, ಅಂತಾರಾಷ್ಟ್ರೀಯ ಅಕ್ವೇರಿಯಂ, ಡಿಸ್ನಿಲ್ಯಾಂಡ್ ನಿರ್ಮಾಣಕ್ಕೆ ಆದ್ಯತೆ ನೀಡಿ


ಮೈಸೂರು, ಫೆ.21(ಎಂಕೆ)– ಮೈಸೂರಿನ ರಿಂಗ್ ರಸ್ತೆಯ ಐದು ಜಂಕ್ಷನ್ ಗಳಲ್ಲಿ ಫ್ಲೈ ಓವರ್ ನಿರ್ಮಾಣ, ಅಂತಾರಾಷ್ಟ್ರೀಯ ಅಕ್ವೇರಿಯಂ, ಡಿಸ್ನಿಲ್ಯಾಂಡ್ ನಿರ್ಮಾಣಕ್ಕೆ 2025–26ನೇ ಸಾಲಿನ ಆಯ–ವ್ಯಯದಲ್ಲಿ ಆದ್ಯತೆ ನೀಡುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘ ಹಾಗೂ ಹೋಟೆಲ್ ಮಾಲೀಕರ ಸಂಘದ ಧರ್ಮದತ್ತಿ ಒತ್ತಾಯಿಸಿದೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರಿನ ರಿಂಗ್ ರಸ್ತೆಯ ಬೆಂಗಳೂರು ರಸ್ತೆ ಜಂಕ್ಷನ್, ಬನ್ನೂರು ರಸ್ತೆ ಜಂಕ್ಷನ್, ಟಿ.ನರಸೀಪುರ ರಸ್ತೆ ಜಂಕ್ಷನ್, ನಂಜನಗೂಡು ರಸ್ತೆ ಜಂಕ್ಷನ್ ಹಾಗೂ ಹೆಚ್.ಡಿ. ಕೋಟೆ ರಸ್ತೆಯ ಜಂಕ್ಷನ್‌ಗಳಲ್ಲಿ ಫ್ಲೈಓವರ್‌ಗಳನ್ನು ನಿರ್ಮಾಣ ಮಾಡಲು ಆಯ–ವ್ಯಯದಲ್ಲಿ ಹಣ ಮೀಸಲಿಟ್ಟು ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರಿನ ಮೃಗಾಲಯದ ಹಿಂಭಾಗದಲ್ಲಿ ನಿರ್ಮಾಣದ ಹಂತದಲ್ಲಿ ನೆನೆಗುದಿಗೆ ಬಿದ್ದಿರುವ ಅಂತರರಾಷ್ಟ್ರೀಯ ಅಕ್ವೇರಿಯಂ ಪೂರ್ಣಗೊಳಿಸಬೇಕು. ಇಪ್ಪತ್ತು ಸಾವಿರದಿಂದ ನಲವತ್ತು ಸಾವಿರ ಜನರು ಕೂರುವ ಸಾಮರ್ಥ್ಯದ ಅಂತರರಾಷ್ಟ್ರೀಯ ಕನ್ವೆನ್ಷನ್ ಸೆಂಟರ್ ನಿರ್ಮಾಣ, ಅಬಕಾರಿ ಇಲಾಖೆಯಲ್ಲಿ ರಾಜ್ಯಾದ್ಯಂತ 4000 ನೂತನ ಲೈಸೆನ್ಸ್ ನೀಡಲು ಒಪ್ಪಿಗೆ ನೀಡಬೇಕು ಹಾಗೂ ಮೈಸೂರು ಭಾಗದಲ್ಲಿ ಡಿಸ್ನಿಲ್ಯಾಂಡ್ ನಿರ್ಮಾಣ ಮಾಡಲು ಒತ್ತಾಯಿಸಿದ್ದಾರೆ.

ಅಭಿನಂಧನೆ



ದಿ.ಮೈಸೂರು ಕೊ ಆಪರೇಟಿವ್ ಬ್ಯಾಂಕ್‌ನ ನೂತನ ಅಧ್ಯಕ್ಷ ಜೆ. ಯೋಗೇಶ್ ಹಾಗೂ ಉಪಾಧ್ಯಕ್ಷ ರವಿ (ಟೆಂಟ್) ಅವರನ್ನು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಡುವಾರಹಳ್ಳಿ ವಾರ್ಡ್ ಅಧ್ಯಕ್ಷ ಕುಮಾರ್ ಇತರರು ಹಾಜರಿದ್ದರು.

ಸರ್ಕಾರಿ ನೌಕರಿ ಕೊಡಿಸುವುದಾಗಿ ಹಲವರಿಗೆ 2 ಕೋಟಿಗೂ ಅಧಿಕ ವಂಚನೆ

ಖತರ್ನಾಕ್ ವಂಚಕ ಪೊಲೀಸರ ಬಲೆಗೆ

● ಆರೋಪಿ ಬಳಿ ಸಿಎಂ ಸಿದ್ದರಾಮಯ್ಯ ಹೆಸರಿನ ಸಹಿ ಟ್ಯಾಂಪರ್ ನಕಲಿ ದಾಖಲಾತಿ ● ಮಂಡ್ಯ ಡಿಸಿ ಸಹಿ ಇರುವ ನಕಲಿ ಆದೇಶ ಪತ್ರ ಸೇರಿ ವಿವಿಧ ಇಲಾಖೆಯ ಅನೇಕ ಆದೇಶ ಪ್ರತಿಗಳು ವಶಕ್ಕೆ



ವಂಚಕ ಹೆಚ್.ಸಿ.ವೆಂಕಟೇಶ್



ಮಂಡ್ಯ, ಫೆ.21– ಸರ್ಕಾರಿ ಕೆಲಸ ಕೊಡಿಸುವುದಾಗಿ ನಕಲಿ ದಾಖಲಾತಿ ಗಳನ್ನು ಸೃಷ್ಟಿಸಿ ಹಲವು ಮಂದಿಗೆ ಮಹಾ ಮೋಸ ಮಾಡಿರುವ ಮಂಡ್ಯ ನಗರದ ತಾವರಗೆರೆ ಬಡಾವಣೆಯ ಹೆಚ್.ಸಿ. ವೆಂಕಟೇಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದು, ಬಂಧಿತನಿಂದ ಸಿಕ್ಕ ನಕಲಿ ದಾಖಲೆಗಳನ್ನು ಕಂಡು ಸ್ವತಃ ಪೊಲೀಸರೇ ನಿಬ್ಬೆರಗಾಗಿದ್ದಾರೆ.

ತಮ್ಮ ಕಚೇರಿಯಲ್ಲಿ ಶುಕ್ರವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಇದೇ ಫೆ.14ರಂದು ಮಂಡ್ಯ ನಗರದ ಸಾಹುಕಾರ್ ಚೆನ್ನಯ್ಯ ಬಡಾವಣೆಯ ಜಯಲಕ್ಷ್ಮಿ ಚಿತ್ರಮಂದಿರದ ಮುಂಭಾಗದ ನಿವಾಸಿ ಎಸ್.ಕೆ.ಗಾಯತ್ರಿ ಪೊಲೀಸ್ ಠಾಣೆಗೆ ಆಗಮಿಸಿ ಮಂಡ್ಯದ ತಾವರಗೆರೆ ಬಡಾವಣೆಯ ಹೆಚ್.ಸಿ.ವೆಂಕಟೇಶ್ ಬಿನ್ ಚಿಕ್ಕಹೊನ್ನಯ್ಯ ಎಂಬಾತ ಸರ್ಕಾರಿ ಕೆಲಸ ಕೊಡಿಸುವುದಾಗಿ ತಮ್ಮ ಮಗ ಹಾಗೂ ಆತನ ಸ್ನೇಹಿತರಿಗೆ ವಂಚಿಸಿದ್ದಾನೆ ಎಂದು ದೂರು ನೀಡಿದ್ದರು. ಆ ದೂರಿನನ್ವಯ ವೆಂಕಟೇಶ್‌ನನ್ನು ಬಂಧಿಸಿ ತನಿಖೆ ಕೈಗೊಳ್ಳಲಾಗುತ್ತಿದೆ ಎಂದರು.

ಗಾಯತ್ರಿ ಅವರು ನೀಡಿದ ದೂರಿನಲ್ಲಿ ವೆಂಕಟೇಶ್ ತನ್ನ ಮಗ ಕಿರಣ ಮತ್ತು ಆತನಿಗೆ ಪರಿಚಯ ಇರುವ ರಾಜೇಶ ಮತ್ತು ರಾಕೇಶ ಎಂಬುವವರಿಗೆ ಅಬಕಾರಿ ಇಲಾಖೆಯಲ್ಲಿ ಚಾಲಕನ ಹುದ್ದೆ ಕೊಡಿಸುವುದಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಜೊತೆಗೆ ನಂಬಿಸಿ ಸುಮಾರು 14 ಲಕ್ಷ ಹಣವನ್ನು ಮೋಸದಿಂದ ವಸೂಲಿ ಮಾಡಿದ್ದಾನೆಂದು ಉಲ್ಲೇಖಿಸಿದ್ದ ಹಿನ್ನೆಲೆಯಲ್ಲಿ ಮಂಡ್ಯ ಪೂರ್ವ ಠಾಣೆ ಪೊಲೀಸರು ಆತನನ್ನು ಬಂಧಿಸಿ, ಕಲಂ 316(2), 318(4), 336(3), 61, 351(2) ಕೂಡ 3(5) ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ ಎಂದು ಅವರು ಹೇಳಿದರು.

▶ ಬಂಧಿತ ವೆಂಕಟೇಶ್‌ನಿಂದ ಈ ಕೃತ್ಯಗಳಿಗೆ ಬಳಸಲಾಗಿದ್ದ ಒಂದು ಎಪ್ಸಾನ್ ಕಂಪನಿಯ ಪೋರ್ಟಬಲ್ ಕಲರ್ ಪ್ರಿಂಟರ್, ಒಂದು ಮೊಬೈಲ್ ಫೋನ್, ಎಫ್‌ಡಿಎ, ಕರ್ನಾಟಕ ಸರ್ಕಾರದ ಸಚಿವಾಲಯ ಮತ್ತು ಮುಖ್ಯ ಕಾರ್ಯದರ್ಶಿಗಳ ಕಾರ್ಯಾಲಯ, ವಿಧಾನಸೌಧ ಎಂದು ಹಾಗೂ ಆರೋಪಿ ವೆಂಕಟೇಶ್‌ನ ಫೋಟೋ ಮತ್ತು ಹೆಸರು ಇರುವ ಒಂದು ಐಡಿ ಕಾರ್ಡ್, ಕತ್ತಿಗೆ ಹಾಕಿಕೊಳ್ಳುವ ಕರ್ನಾಟಕ ಸರ್ಕಾರದ ಲೋಗೋಗಳು ಮತ್ತು ಕರ್ನಾಟಕ ಗವರ್ನಮೆಂಟ್ ಸೆಕ್ರೇಟ್ರಿಯೇಟ್ ವಿಧಾನಸೌಧ ಎಂದು ಇರುವ ಐಡಿ ಹೋಲ್ಡಿಂಗ್ ಟ್ಯಾಗ್‌ಗಳು ಹಾಗೂ ಹಲವಾರು ನಕಲಿ ದಾಖಲಾತಿಗಳು ದೊರಕಿವೆ.

ಫೆ.16ರಂದು ಆರೋಪಿಯನ್ನು ಬಂಧಿಸಿ, 17ರಂದು ನ್ಯಾಯಾಲಯದ ಮುಂದೆ ಹಾಜರು ಪಡಿಸಿ, ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಆತನನ್ನು ಪಡೆದುಕೊಂಡಿದ್ದು, ಈ ಸಂದರ್ಭದಲ್ಲಿ ಆತನ ಇದೊಂದೇ ಪ್ರಕರಣವಲ್ಲದೇ ಮಂಡ್ಯದವರೇ ಆದ ನಿರ್ಮಲಾ ಎಂಬುವವರಿಗೆ ನಾನು ವಿಧಾನಸೌಧದಲ್ಲಿ ಸಿಇಓ ಆಗಿ ಕೆಲಸ ಮಾಡುತ್ತಿದ್ದು, ಸರ್ಕಾರದಿಂದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೇರ ನೇಮಕಾತಿ ಮುಖಾಂತರ ಸೀನಿಯರ್ ಅಕೌಂಟೆಂಟ್ (ಹಿರಿಯ ಲೆಕ್ಕಾಧಿಕಾರಿ) ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದು, ತನಗೆ ವಾಣಿಜ್ಯ ತೆರಿಗೆ ಅಧಿಕಾರಿಗಳು ಪರಿಚಯವಿದ್ದು, ಅನೇಕ ಜನರಿಗೆ ಕೆಲಸ ಕೊಡಿಸಿದ್ದೇನೆ. ನಿಮಗೂ ಹೆಚ್ಚುವರಿ ನೇಮಕಾತಿ ಮುಖಾಂತರ ಸರ್ಕಾರಿ ಕೆಲಸ ಕೊಡಿಸುತ್ತೇನೆ ಎಂದು ಹೇಳಿ ನಂಬಿಸಿ ಒಟ್ಟು ಬರೋಬ್ಬರಿ 19 ಲಕ್ಷ ಹಣ ವಸೂಲಿ ಮಾಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ ಎಂದು ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು. ಈ ವೇಳೆ ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

ಇದರ ಜೊತೆಗೆ ಮಂಡ್ಯದವರೇ ಆದ ನೇತ್ರಾವತಿ ಎಂಬುವವರ ಮಗನಿಗೆ ಶಿಕ್ಷಣ ಇಲಾಖೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕೆಲಸ ಕೊಡಿಸುತ್ತೇನೆ ಎಂದು ನಂಬಿಸಿ, 12.24 ಲಕ್ಷ ರೂ. ಪಡೆದುಕೊಂಡಿದ್ದು, ಇದಿಷ್ಟೇ ಅಲ್ಲದೇ ಕನಿಷ್ಠ 35ರಿಂದ 40 ಮಂದಿಗೆ ಇದೇ ರೀತಿ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಸಾಕಷ್ಟು ವಂಚನೆ ಮಾಡಿದ್ದು, ಕನಿಷ್ಠ 2 ಕೋಟಿಯಷ್ಟು ವಂಚನೆಯಾಗಿದೆ ಎಂದು ಅಂದಾಜಿಸಲಾಗಿದ್ದು, ಈವರೆಗೆ 45 ಲಕ್ಷಕ್ಕೂ ಅಧಿಕ ವಂಚನೆಯಾಗಿರುವ ಬಗ್ಗೆ ಆರೋಪಿಯಿಂದ ಮಾಹಿತಿ ಬಂದಿದೆ. ಉಳಿದ ವಂಚನೆ ಬಗ್ಗೆ ಮಾಹಿತಿಯನ್ನು ಕಲೆ ಹಾಕುತ್ತಿದ್ದು, ಈತನಿಂದ ವಂಚನೆಗೊಳಗಾದವರು ನೇರವಾಗಿ ಬಂದು ದೂರು ಕೊಡಬಹುದೆಂದು ಎಸ್ಪಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಿ ಇರುವ ಟ್ಯಾಂಪರ್ ಮಾಡಿರುವ ನಕಲಿ ದಾಖಲಾತಿ, ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಲವಾರು ಹುದ್ದೆಗಳಿಗೆ ನೇಮಿಸಿ ಸ್ಥಳ ನಿಯೋಜಿಸಿರುವ ಆದೇಶ ಹೊರಡಿಸಲಾಗಿರುವ ಜಿಲ್ಲಾಧಿಕಾರಿಗಳ ಸಹಿ ಇರುವ ನೇಮಕಾತಿ ಪತ್ರ, ಅಬಕಾರಿ ಇಲಾಖೆಯ ಚಾಲಕರ ಹುದ್ದೆಯ ನೇಮಕಾತಿ ಮಾಡಿರುವ ನಕಲಿ ಆದೇಶದ ಪ್ರತಿಗಳು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿರುವ ನಕಲಿ ಆದೇಶದ ಪ್ರತಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ವಿವರಿಸಿದರು.

ಇದರ ಜೊತೆಗೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ನೇಮಕ ಮಾಡಿರುವ ಬಗ್ಗೆ ಸೃಷ್ಟಿಸಿರುವ ನಕಲಿ ದಾಖಲಾತಿಗಳು, ಕರ್ನಾಟಕ ಲೋಕಸೇವಾ ಆಯೋಗದಿಂದ ವಿವಿಧ ಹುದ್ದೆಗಳಿಗೆ ನೇಮಕ ಮಾಡಿರುವ ಬಗ್ಗೆ ಸೃಷ್ಟಿಸಿರುವ ನಕಲಿ ದಾಖಲಾತಿಗಳು, ನಗರಾಭಿವೃದ್ಧಿ ಇಲಾಖೆ ಬೆಂಗಳೂರಿನಲ್ಲಿ ವಿವಿಧ ಹುದ್ದೆಗಳಿಗೆ ನೇಮಕ ಮಾಡಿರುವ ಬಗ್ಗೆ ಸೃಷ್ಟಿಸಿರುವ ನಕಲಿ ದಾಖಲಾತಿಗಳು ಸೇರಿದಂತೆ ಹಾಜರಾತಿ ಪುಸ್ತಕಗಳು ಹಾಗೂ ಇನ್ನಿತರ ದಾಖಲಾತಿಗಳನ್ನು ವಶಕ್ಕೆ ಪಡೆದು ಕೊಳ್ಳಲಾಗಿದೆ ಎಂದು ತಿಳಿಸಿದರು.





ವಂಚಕ ಬಳಸುತ್ತಿದ್ದ ನಕಲಿ ಗುರುತಿನ ಚೀಟಿಗಳು.

ನಂಬಿಸಲು ಸರ್ಕಾರಿ ಕಚೇರಿಗೆ ಕರೆದೋಗಿ ನಕಲಿ ಹಾಜರಾತಿ ಪುಸ್ತಕಕ್ಕೆ ಸಹಿ: ಸರ್ಕಾರಿ ಕೆಲಸ ಕೊಡಿಸುತ್ತೇನೆಂದು ಲಂಚ ಪಡೆದ ಬಳಿಕ ಆರೋಪಿ ವೆಂಕಟೇಶ್ ವಂಚನೆಗೊಳಗಾದವರನ್ನು ಆಯಾ ಇಲಾಖೆಯ ಕಚೇರಿಗೆ ಕರೆದೋಗಿ ಆ ಇಲಾಖೆಯ ಐಡಿ ಕಾರ್ಡ್ ಧರಿಸಿ ಕೊಂಡು ನಕಲಿ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿಸಿಕೊಳ್ಳುತ್ತಿದ್ದ. ಅದರಲ್ಲೂ ಮಂಡ್ಯದವರನ್ನೇ ಹೆಚ್ಚಾಗಿ ವಂಚಿಸಿರುವುದರಿಂದ ಮಂಡ್ಯ ಡಿಸಿ ಕಚೇರಿ ಮತ್ತು ಅಬಕಾರಿ ಇಲಾಖೆಗೆ ಕರೆದೊಯ್ದು ನಕಲಿ ದಾಖಲಾತಿ ಪುಸ್ತಕಕ್ಕೆ ಸಹಿ ಹಾಕಿರುವುದು ತನಿಖೆಯಿಂದ ಹೊರಬಂದಿದೆ ಎಂದರು.

ನಕಲಿ ಆದೇಶ ಪ್ರತಿ ವಿತರಣೆ: ಇನ್ನು ಎಲ್ಲವೂ ಒಂದು ಹಂತಕ್ಕೆ ಬಂದ ಮೇಲೆ ವಂಚನೆಗೊಳಗಾದವರನ್ನು ನಂಬಿಸಲು ತಾನೇ ಸಿಎಂ, ಜಿಲ್ಲಾಧಿಕಾರಿಗಳು ಸೇರಿದಂತೆ ಹಲವು ಇಲಾಖೆಯ ಅಧಿಕಾರಿಗಳ ಹೆಸರಿನಲ್ಲಿ ಪೋರ್ಜರಿ ಲೆಟರ್‌ಹೆಡ್‌ನಲ್ಲಿ ಸಂಬಂಧಿಸಿದವರ ನಕಲಿ ಸಹಿ ಮಾಡಿ, ತಾನೇ ಹಂಚುತ್ತಿದ್ದ ಎಂಬುದು ಬೆಳಕಿಗೆ ಬಂದಿದ್ದು, ಆದೇಶ ಪ್ರತಿ ಕೊಟ್ಟು ಇನ್ನೊಂದು ಅಥವಾ ಎರಡು ತಿಂಗಳಿನಲ್ಲಿ ಉದ್ಯೋಗಕ್ಕೆ ಹೋಗುವಂತೆ ಸೂಚಿಸುತ್ತಿದ್ದ. ಅದಾದ ಬಳಿಕ ಮತ್ತೆ ವಂಚನೆಗೊಳಗಾದವರು ಪ್ರಶ್ನಿಸಿದರೆ, ನಿಮ್ಮನ್ನು ಬೇರೆಡೆಗೆ ಅಥವಾ ದೂರದೂರಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮತ್ತೊಂದು ನಕಲಿ ದಾಖಲೆಯ ಆದೇಶ ಪ್ರತಿಯನ್ನು ಕೊಡುತ್ತಿದ್ದ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ರಮೇಶ್ ಸೇರಿದಂತೆ ಹಲವು ಮಂದಿ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಕರಣದಲ್ಲಿ ಇನ್ನಿಬ್ಬರು ಆರೋಪಿಗಳು

ಈ ಪ್ರಕರಣದಲ್ಲಿ ವೆಂಕಟೇಶ್‌ಗೆ ಸಹಾಯ ಮಾಡುತ್ತಿದ್ದ ಇನ್ನಿಬ್ಬರು ಆರೋಪಿಗಳು ಇರುವ ಬಗ್ಗೆ ಬೆಳಕಿಗೆ ಬಂದಿದ್ದು, ಅವರನ್ನು ಬಂಧಿಸಲು ಈಗಾಗಲೇ ಬಲೆ ಬೀಸಲಾಗಿದೆ. ಅವರೂ ಸಹ ಕೆಲವರಿಗೆ ಈತನ ಮೂಲಕ ಸರ್ಕಾರಿ ನೌಕರಿ ಕೊಡಿಸುವುದಾಗಿ ಎರಡು– ಮೂರು ಲಕ್ಷ ಹಣ ಪಡೆದಿರುವ ಬಗ್ಗೆ ಮಾಹಿತಿ ಇದೆ. ಆದರೆ ಈತನಿಗೆ ಇಲಾಖೆ ವ್ಯಾಪ್ತಿಯಲ್ಲಿ ಸರ್ಕಾರಿ ನೌಕರರ ಸಂಪರ್ಕವೇನಾದರೂ ಇತ್ತೆ? ಎಂಬ ಬಗ್ಗೆಯೂ ತನಿಖೆ ನಡೆಸಲಾಗುತ್ತಿದ್ದು, ಪೊಲೀಸ್ ಇಲಾಖೆಯ ಇಬ್ಬರು ಸಿಬ್ಬಂದಿಗಳ ಸಂಪರ್ಕ ಇತ್ತು ಎಂಬ ಸುದ್ದಿಗಾರರ ಪ್ರಶ್ನೆಗೆ ಈ ಬಗ್ಗೆಯೂ ಎಎಸ್ಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ. ಜೊತೆಗೆ 2016ರಲ್ಲೂ ಈತನ ಮೇಲೆ ವಂಚನೆ ಪ್ರಕರಣ ದಾಖಲಾಗಿತ್ತು ಎಂದು ತಿಳಿಸಿದರು.

ಕುಸಿದು ಬಿದ್ದು ಬಿಲ್ ಕಲೆಕ್ಟರ್ ಸಾವು

ಹಲಗೂರು, ಫೆ.21– ಕರ್ತವ್ಯದ ವೇಳೆಯೇ ಗ್ರಾಪಂ ಬಿಲ್ ಕಲೆಕ್ಟರ್ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಶುಕ್ರವಾರ ಬೆಳಗ್ಗೆ ಇಲ್ಲಿಗೆ ಸಮೀಪದ ದಳವಾಯಿ ಕೋಡಿ ಹಳ್ಳಿ ಗ್ರಾಪಂನಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಹಾಗೂ ಬಿಲ್ ಕಲೆಕ್ಟರ್ ಅಜಯ್(34) ಸಾವನ್ನಪ್ಪಿದವರು. ಈತ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ತೆರಳಿ ಕರ ವಸೂಲಿ ಮಾಡಿಕೊಂಡು 11.30ರ ವೇಳೆಗೆ ಗ್ರಾಪಂ ಕಚೇರಿಗೆ ಆಗಮಿಸಿದ ವೇಳೆ ಇದ್ದಕ್ಕಿದ್ದಂತೆ ತಲೆ ಸುತ್ತು ಬಂದು ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ. ಈ ವೇಳೆ ಸಿಬ್ಬಂದಿ ತಕ್ಷಣ ಅವರನ್ನು ಹಲಗೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅಜಯ್ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜಾಟದಲ್ಲಿ ತೊಡಗಿದ್ದ 71 ಮಂದಿ ವಶಕ್ಕೆ

ಪಣಕ್ಕಿರಿಸಿದ್ದ 99,970 ರೂ. ಜಪ್ತಿ

ಮದ್ದೂರು: ಸದಸ್ಯರಲ್ಲದವರಿಗೆ ಪ್ರವೇಶ ನೀಡಿ ಅಕ್ರಮವಾಗಿ ಜೂಜಾಟ ಆಡಿಸುತ್ತಿದ್ದ ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಯ ಕ್ಲಬ್ ಮೇಲೆ ಮಳವಳ್ಳಿ ಗ್ರಾಮಾಂತರ ಪೊಲೀಸರು ದಾಳಿ ಮಾಡಿದ್ದು, 71 ಮಂದಿಯನ್ನು ವಶಕ್ಕೆ ಪಡೆದು ಪಣಕ್ಕಿರಿಸಿದ್ದ 99.970 ರೂಪಾಯಿ ಹಣವನ್ನು ಜಪ್ತಿ ಮಾಡಿದ್ದಾರೆ.

ಮದ್ದೂರು ತಾಲೂಕಿನ ನಿಡಘಟ್ಟ ಗ್ರಾಮದ ಶ್ರೀ ವರದರಾಜ ರೀ ಕ್ರಿಯೇಷನ್ ಕ್ಲಬ್ (ಕುಳ್ಳರಾಜ ಕ್ಲಬ್) ಮೇಲೆ ಭಾನುವಾರ ದಾಳಿ ಮಾಡಿರುವ ಮಳವಳ್ಳಿ ಗ್ರಾಮಾಂತರ ವೃತ್ತ ನಿರೀಕ್ಷಕ ಪಿ.ಜಿ.ಮಹೇಶ್ ಹಾಗೂ ಸಿಬ್ಬಂದಿಗಳು ರಾಮನಗರ, ತುಮಕೂರು ಹಾಗೂ ಮಂಡ್ಯ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿ ಕ್ಲಬ್ ಸದಸ್ಯರಲ್ಲದವರು ಜೂಜಾಟದಲ್ಲಿ ತೊಡಗಿದ್ದ 71 ಮಂದಿಯನ್ನು ವಶಕ್ಕೆ ಪಡೆದು 99 ಸಾವಿರದ 970 ರೂಪಾಯಿ ಹಣವನ್ನು ಜಪ್ತಿ ಮಾಡಲಾಗಿದೆ.

ಕ್ಲಬ್ ಆಡಳಿತ ಮಂಡಳಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಕರ್ನಾಟಕ ಪೊಲೀಸ್ ಕಾಯ್ದೆ 79, 80 ರ ಅನ್ವಯ ಪ್ರಕರಣ ದಾಖಲಿಸಿಕೊಂಡು 71 ಮಂದಿಗೆ ನೋಟೀಸ್ ಜಾರಿ ಮಾಡಲಾಗಿದೆ.

ಅನಾರೋಗ್ಯ: ನೇಣುಬಿಗಿದು ಆತ್ಮಹತ್ಯೆ

ಭಾರತೀನಗರ, ಫೆ.21– ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ವ್ಯಕ್ತಿಯೊಬ್ಬ ಅನಾರೋಗ್ಯ ಸಮಸ್ಯೆಯಿಂದ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜರುಗಿದೆ.



ಕಾಡುಕೊತ್ತನಹಳ್ಳಿ ಗ್ರಾಮದ ಕೆ.ಎಸ್.ರುದ್ರಸ್ವಾಮಿ (42) ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಈತ ಗಾರೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಈತ ತುಂಬಾ ದಿನಗಳಿಂದ ಬೆನ್ನು ನೋವಿನಿಂದ ಬಳಲುತ್ತಿದ್ದ. ಬೆನ್ನುನೋವು ತಾಳಲಾರದೆ ತಮ್ಮ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಕೆ.ಎಂ. ದೊಡ್ಡಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಈತನ ಮರಣೋತ್ತರ ಪರೀಕ್ಷೆ ನಡೆಸಿ ಮೃತ ದೇಹವನ್ನು ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಮನೆಗೆ ಹೋಗಿ...

ಬದಲಾವಣೆಗೆ ಸಂಬಂಧಿಸಿದಂತೆ ಈ ಸಚಿವರ ಪಡೆ ಬಹಿರಂಗವಾಗೇ ಅಪಸ್ವರ ಎತ್ತಿದ್ದವು. ಅಷ್ಟೇ ಅಲ್ಲ, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಆಗಿರಬೇಕು ಎಂಬ ಹೇಳಿಕೆ ನೀಡಿದ್ದಲ್ಲದೆ, ವರಿಷ್ಠರ ಮನವೊಲಿಸಲು ಈ ಸಚಿವರು ಒಬ್ಬರ ನಂತರ ಒಬ್ಬರು ದೆಹಲಿ ಯಾತ್ರೆಯನ್ನೂ ಮಾಡಿದರು. ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಡಾ.ಪರಮೇಶ್ವರ್, ವರಿಷ್ಠರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಖರ್ಗೆ ಮತ್ತು ವೇಣುಗೋಪಾಲ್ ಈ ಸಂದೇಶ ರವಾನೆ ಮಾಡಿದ್ದಾರೆ ಎನ್ನಲಾಗಿದೆ. ನಗರಕ್ಕೆ ಹಿಂತಿರುಗುತ್ತಿದ್ದಂತೆ ಡಾ.ಪರಮೇಶ್ವರ್ ಹಾಗೂ ರಾಜಣ್ಣ, ಮುಖ್ಯಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ಗೌಪ್ಯ ಮಾತುಕತೆ ನಡೆಸಿದರು. ಮುಖ್ಯಮಂತ್ರಿ ಭೇಟಿ ಮಾಡಿ ಹೊರಬಂದ ನಂತರ ಮಾಧ್ಯಮದವರ ಬಳಿ ಪಕ್ಷದ ಆಂತರಿಕ ವಿಚಾರ ಕುರಿತು ಯಾವುದೇ ಹೇಳಿಕೆ ನೀಡಲು ನಿರಾ ಕರಿಸಿದರು. ಸದಾ ವಿವಾದದ ಹೇಳಿಕೆ ನೀಡುವ ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ಕೂಡ ಇಂದು ಮಾಧ್ಯಮದವರ ಮುಂದೆ ಬಾಯಿ ಬಿಡಲೇ ಇಲ್ಲ. ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಸಚಿವರು ಗಳು, ವರಿಷ್ಠರು ನೀಡಿದ ಎಚ್ಚರಿಕೆ ಮತ್ತು ಸಂದೇಶದ ಬಗ್ಗೆಯೇ ಬಹುತೇಕ ಚರ್ಚೆ ಮಾಡಿದ್ದಾರೆನ್ನಲಾಗಿದೆ.

ವಿರೋಧಿಗಳ ವಿರುದ್ಧವಿರಬೇಕು; ನಮ್ಮೊಳಗಲ್ಲ

ಸಂಘಟನಾತ್ಮಕ ಹೋರಾಟವನ್ನು ನಾವು ಮುಂದುವರೆಸ ಬೇಕಿದೆ, ಜನರ ಆಶೀರ್ವಾದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಬೇಡ ಎಂದರು.

ಸದ್ಯದಲ್ಲೇ ಸ್ಥಳೀಯ ಚುನಾವಣೆ: ಮುಂದಿನ ಎರಡು–ಮೂರು ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಹಾಗೂ ಪಾಲಿಕೆ ಚುನಾವಣೆಗಳು ಎದುರಾಗುತ್ತಿದ್ದು ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದು, ಮೀಸಲಾತಿ, ಕ್ಷೇತ್ರ ಪುನರ್ ವಿಂಗಡಣೆ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಚುನಾವಣೆ ನಡೆಸುವ ದಿನಾಂಕಗಳನ್ನು ಕೋರ್ಟ್‌ಗೆ ತಿಳಿಸಲಿದ್ದೇವೆ.

ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.50 ಮೀಸಲಾತಿ ನೀಡಲಾಗುವುದು, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ನಾಯಕತ್ವ ಹೆಚ್ಚಾಗಿ ಬೆಳೆಸಬೇಕಿದೆ. ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ ಭಾನು ಅವರು, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಮಂಜುನಾಥ್‌ರನ್ನು ಆಯ್ಕೆ ಮಾಡಿದ್ದಾರೆ, ಚುನಾವಣಾ ಪ್ರಕ್ರಿಯೆಯಲ್ಲಿ ಕೆಪಿಸಿಸಿ ಹಸ್ತಕ್ಷೇಪ ಮಾಡಿಲ್ಲ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮುಖಂಡತ್ವ ಹಾಗೂ ರಾಹುಲ್ ಗಾಂಧಿ ನಾಯಕತ್ವದಲ್ಲಿ ಮಂಜುನಾಥ್‌ಗೆ ಯುವ ಕಾಂಗ್ರೆಸ್ ಅಧ್ಯಕ್ಷ ಜವಾಬ್ದಾರಿ ವಹಿಸಲಾಗುತ್ತಿದೆ.

ನೂತನ ಪದಾಧಿಕಾರಿಗಳು ಯಾವ ರೀತಿ ಕೆಲಸ ಮಾಡಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ಮಾರ್ಗದರ್ಶನ ನೀಡಲಾಗುವುದು ಎಂದರು.

ಫೈಲ್ ಕೊಂಡೊಯ್ಯಲು ಅದೇನು ಕಡ್ಲೆಪುರಿನಾ...

ಪ್ರಕರಣದಲ್ಲಿ ನಾನು ಏನು ತಪ್ಪು ಮಾಡಿಲ್ಲ. ಇದನ್ನು ಹಿಂದೆಯೂ ಹೇಳಿದ್ದೆ, ಈಗಲೂ ಹೇಳುತ್ತಿದ್ದೇನೆ. ಮುಡಾ ಪ್ರಕರಣ ಸಂಬಂಧ ಇಡಿ (ಜಾರಿ ನಿರ್ದೇಶನಾಲಯ) ಏನೇ ಕ್ರಮ ಕೈಗೊಂಡರೂ ನಾನು ಹೆದರುವುದಿಲ್ಲ. ನಾನಾಗಲೀ, ಸಿದ್ದರಾಮಯ್ಯ ಅವರಾಗಲೀ ಯಾವುದೇ ತಪ್ಪು ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು

ಲೋಕಾಯುಕ್ತರು ಸತ್ಯಾಸತ್ಯತೆ ಕಂಡು ಹಿಡಿದಿದ್ದಾರೆ. ಹಾಗಾಗಿ ಲೋಕಾಯುಕ್ತರಂತೆ ಇಡಿ ಕೂಡ ತನಿಖೆ ಮಾಡಲಿ. ಸಿದ್ದರಾಮಯ್ಯಗೆ ಲೋಕಾಯುಕ್ತರಿಂದ ಕ್ಲೀನ್ ಚಿಟ್ ಸಿಗುತ್ತದೆ ಎಂದು ಅಂದೇ ನಾನು ಸ್ಪಷ್ಟಪಡಿಸಿದ್ದೆ. ನಾವು ತಪ್ಪು ಮಾಡಿಲ್ಲ ಎಂದು ಆಣೆ ಮಾಡುತ್ತೇವೆ ಎಂದು ಸವಾಲು ಹಾಕಿದ್ದೆ. ಆದರೆ ಬಿಜೆಪಿಯ ಯಾವ ನಾಯಕನು ಪ್ರಮಾಣ ಮಾಡಲು ಬರಲಿಲ್ಲ ಎಂದರು.

ಲೋಕಾಯುಕ್ತಕ್ಕಿಂತ ಬಲವಾದ ಸಂಸ್ಥೆ ಯಾವುದಿದೆ ಹೇಳಿ ಎಂದು ಪ್ರಶ್ನಿಸಿದ ಬೈರತಿ ಸುರೇಶ್, ಲೋಕಾಯುಕ್ತ ಎಷ್ಟೋ ಕೇಸ್‌ಗಳಲ್ಲಿ ಶಿಕ್ಷೆ ಕೊಡಿಸಿದೆ. ಈಗ ಲೋಕಾಯುಕ್ತರು ನೀಡಿರುವ ವರದಿ ಸರಿಯಾಗಿದೆ ಎಂದು ಬೈರತಿ ಸುರೇಶ್ ಸಮರ್ಥಿಸಿಕೊಂಡರು.

ಶೇಕಡ 50:50 ಅನುಪಾತದಲ್ಲಿ ನಿವೇಶನ ತೆಗೆದುಕೊಂಡಿರುವುದು ಸರಿ ಅಥವಾ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಭೂಮಿ ಕಳೆದುಕೊಂಡವರಿಗೆ ಅನ್ಯಾಯ ಆಗಬಾರದು ಎಂಬುದು ನನ್ನ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಅನ್ಯಾಯ ಆಗದಂತೆ ಸರ್ಕಾರ ನೋಡಿಕೊಳ್ಳಲಿದೆ ಎಂದು ಅಭಯ ನೀಡಿದರು.

ಮುಡಾ ಸಂಬಂಧ ನಿಯಮಾವಳಿ ರೂಪಿಸಿಕೊಡಿ ಎಂದು ಮುಡಾ ಬಗ್ಗೆ ವಿಚಾರಣೆ ನಡೆಸುತ್ತಿರುವ ದೇಸಾಯಿ ಆಯೋಗಕ್ಕೆ ಮನವಿ ಮಾಡಿದ್ದೇವೆ. ಇದರಿಂದ ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ಬಗ್ಗೆ ಸ್ಪಷ್ಟತೆ ದೊರೆಯುತ್ತದೆ ಎಂದರು.

ಒಂದು ವೇಳೆ ಅಕ್ರಮ ನಿವೇಶನ ಪಡೆದಿದ್ದರೆ ಅವರನ್ನು ಬಿಡುವ ಪ್ರಶ್ನೆಯೇ ಇಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ ಎಂದು ಹೇಳಿದರು.

ಎಲ್ಲರೂ ನಮ್ಮವರೆ ಎಂಬುದು ಜೀವನದ ಮೌಲ್ಯವಾಗಬೇಕು

ಆಧ್ಯಾತ್ಮ ಚಿಂತಕ ಶಂಕರ ದೇವನೂರು ಆಶಯ



ದತ್ತಿ ಉಪನ್ಯಾಸ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮವನ್ನು ಆಧ್ಯಾತ್ಮ ಚಿಂತಕ ಶಂಕರ ದೇವನೂರು ಉದ್ಘಾಟಿಸಿದರು.

ಮೈಸೂರು, ಫೆ.21(ಎಂಕೆ)– ಜಾತಿ, ಕುಲ, ಧರ್ಮಗಳ ಎಲ್ಲೆಗಳನ್ನು ಮೀರಿ, ಎಲ್ಲರೂ ನಮ್ಮವರೇ ಎಂಬುದು ಜೀವನದ ಮೌಲ್ಯವಾಗಬೇಕು ಎಂದು ಆಧ್ಯಾತ್ಮ ಚಿಂತಕ ಶಂಕರ ದೇವನೂರು ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಬಿ.ವೀರಭದ್ರಯ್ಯ ಹಾಗೂ ಅಕ್ಕನಾಗರತ್ನಮ್ಮ ದತ್ತಿ ಉಪನ್ಯಾಸ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವ್ಯಕ್ತಿಯನ್ನು ಆರಾಧಿಸುವುದಕ್ಕಿಂತ ಆತನಲ್ಲಿರುವ ವ್ಯಕ್ತಿತ್ವವನ್ನು ಗೌರವಿಸಿ, ಅನುಸರಿಸಿದರೆ ಸಮಾಜದ ಉದ್ಧಾರ ಮತ್ತು ವ್ಯಕ್ತಿಯ ಉನ್ನತಿ ಸಾಧ್ಯ ಎಂದರು.

ಸಂಸ್ಕಾರ ಮಾನವನ ಮುಖ್ಯ ಮೌಲ್ಯವಾಗಿದ್ದು, ವಿದ್ಯೆ ನೀಡಿದ ಸಂಸ್ಥೆ, ಅಕ್ಷರ ಕಲಿಸಿದ ಗುರುಗಳನ್ನು ಸದಾ ನೆನೆಯಬೇಕು. ಬೇರಿನ ನೋವೇ ಹೂವಿನ ನಗುವಿಗೆ ಕಾರಣ ಎಂಬುದನ್ನು ಮರೆಯಬಾರದು. ಕಷ್ಟದಿಂದ ಸುಖ, ನೆಮ್ಮದಿ ದೊರೆಯುತ್ತದೆ. ಕಾಯಕವನ್ನು ರೂಢಿಸಿಕೊಂಡು ಬದುಕಿಗೆ ಶಿಸ್ತನ್ನು ಅಳವಡಿಸಿಕೊಳ್ಳಬೇಕೆಂಬುದು ಶರಣರ ಚಿಂತನೆಯಾಗಿದೆ. ನಾವು ಕೂಡ ಶರಣರ ದಾರಿಯಲ್ಲಿ ಸಾಗಬೇಕು. ಇಂದು ಆರ್ಥಿಕತೆ ಮೇಲಾಗಿ ನಿಸರ್ಗ ಹಾಳಾಗುತ್ತಿದೆ. ಆಧುನಿಕತೆಯ ಮಕ್ಕಳಿಗೆ ಪರಂಪರೆಯ ಅರಿವು ಇಲ್ಲವಾಗಿದೆ. ಈ ದಿಸೆಯಲ್ಲಿ ನಾವು ನೀವೆಲ್ಲರೂ ಆಲೋಚಿಸಬೇಕು ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಮಾತನಾಡಿ, ಕಾಯಕದಿಂದ ಕಾಯವನ್ನು ಉತ್ತಮಪಡಿಸಿಕೊಳ್ಳಬೇಕು. ಸಮಯವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಮೌಲ್ಯಗಳನ್ನು ಪಡೆದುಕೊಳ್ಳಬೇಕೇ ಹೊರತು ಕಳೆದುಕೊಳ್ಳಬಾರದು. ಬೆಳೆಯುವ ಪೈರಿಗೆ ಚಿಂತಕರ ಮಾತುಗಳು ಅಮೃತಬಲವಿದ್ದಂತೆ ಎಂದರು.

ಪ್ರಬಂಧ ಸ್ಪರ್ಧೆ: ವಿವಿಧ ಪದವಿ ಕಾಲೇಜುಗಳಿಂದ 30 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಎಸ್.ಎಂ.ಸಹನಾ (ಪ್ರಥಮ), ತಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎಂ.ಬಿ.ಪುನೀತ್ ಕುಮಾರ್(ದ್ವಿತೀಯ), ಮೈಸೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಜಿ.ಆಶಾ(ತೃತೀಯ) ಬಹುಮಾನ ಗೆದ್ದರು. ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಟಿ.ಜಿ.ಐಶ್ವರ್ಯ ಮತ್ತು ಜಯಲಕ್ಷ್ಮಿಪುರಂನ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ಎಂ.ಸೋನು(ಸಮಾಧಾನಕರ) ಬಹುಮಾನ ಪಡೆದುಕೊಂಡರು. ಸ್ಪರ್ಧಿಸಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಟಿ.ಎಸ್. ಕುಮಾರಸ್ವಾಮಿ ಇದ್ದರು.

ಅಭಿನಂದನೆ



ಮೈಸೂರಿನ ಗಾಂಧಿ ಚೌಕದಲ್ಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ಜಯಗಳಿಸಿದ ನಿರಂಜನ್.ಜಿ ಅವರನ್ನು ಯುವ ಮುಖಂಡ ಹಿಮಾನ್ ಕುಮಾರ್ ಅವರ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್.ಗೌಡ, ಟಿಕೆ ಲೇಔಟ್ ಕುಮಾರ್, ಆನಂದ್, ಕೆಂಚ, ಶ್ರೇಯಸ್, ವೆಂಕಟೇಶ್, ಶ್ರೀನಿವಾಸ್, ದೀಪಕ್, ಭರತ್, ನಾಗರಾಜ್ ಮುಂತಾದವರಿದ್ದರು.

ಸಿಇಟಿ, ಪಿಯುಸಿ ಪರೀಕ್ಷೆ ನಂತರವೂ ದಾಖಲೆ ಪರಿಶೀಲನೆ

ಬೆಂಗಳೂರು, ಫೆ.21– ಪ್ರಸಕ್ತ ಸಾಲಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ತೆಗೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ದಾಖಲೆಗಳನ್ನು ದ್ವಿತೀಯ ಪಿಯುಸಿ ಪರೀಕ್ಷೆ ನಂತರವೂ ತಮ್ಮ ಕಾಲೇಜುಗಳಲ್ಲಿ ಪರಿಶೀಲಿಸಿಕೊಳ್ಳಲು ಅವಕಾಶ ಇರುತ್ತದೆ. ಈ ವಿಷಯದಲ್ಲಿ ಆತಂಕಪಡುವ ಅಗತ್ಯ ಇಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಅವರು ಅಭಯ ನೀಡಿದ್ದಾರೆ.

ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ ಅವರು, ಸಿಇಟಿ ಪರೀಕ್ಷೆಗೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸುವ ಎಲ್ಲ ಅಭ್ಯರ್ಥಿಗಳಿಗೂ ಪ್ರವೇಶ ಪತ್ರವನ್ನು ನೀಡಲಾಗುತ್ತದೆ. ಕೇವಲ ದಾಖಲೆ ಪರಿಶೀಲನೆ ಮಾಡಿಸಿಕೊಂಡವರಿಗೆ ಮಾತ್ರ ಕೊಡಲಾಗುತ್ತದೆ ಎಂದು ಯಾರೂ ಭಾವಿಸುವುದು ಬೇಡ ಎಂದು ತಿಳಿಸಿದ್ದಾರೆ.

ಕರ್ನಾಟಕೇತರ ಅಭ್ಯರ್ಥಿಗಳು ಕೇವಲ ಬಿಎಸ್‌ಸಿ (ನರ್ಸಿಂಗ್) ಕೋರ್ಸಿಗೆ ಪ್ರವೇಶಾತಿಗೆ ಅರ್ಹತೆ ಪಡೆಯಲು ಸಿಇಟಿಯ ಭೌತವಿಜ್ಞಾನ, ರಸಾಯನವಿಜ್ಞಾನ ಮತ್ತು ಜೀವವಿಜ್ಞಾನ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಬೇಕು. ಆದರೆ, ಎಂಜಿನಿಯರಿಂಗ್ ಮುಂತಾದ ಕೋರ್ಸ್‌ಗಳ ಪ್ರವೇಶಕ್ಕೆ ಅವರು ಅರ್ಹರಾಗುವುದಿಲ್ಲ. ಹಾಗೆಯೇ ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಕೂಡ ಇರುವುದಿಲ್ಲ. ಈ ಕುರಿತ ಹೆಚ್ಚಿನ ವಿವರಗಳಿಗೆ 2025ರ ಜನವರಿ 22ರಂದು ಹೊರಡಿಸಿರುವ ಅಧಿಸೂಚನೆಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ನೋಡಬಹುದು ಎಂದಿದ್ದಾರೆ. ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಯುಜಿ ನೀಟ್–25ರಲ್ಲಿ ಅರ್ಹತೆ ಪಡೆಯಬೇಕು ಹಾಗೂ ಕಡ್ಡಾಯವಾಗಿ ಕೆಇಎನಲ್ಲಿ ನೋಂದಣಿ ಮಾಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಬೇಕು ಎಂದು ವಿವರಿಸಿದ್ದಾರೆ.

ಎಂಎಲ್‌ಎ ಕಪ್– 2025ಕ್ಕೆ ಚಾಲನೆ



ನಮ್ಮ ಟಿವಿ ಹಾಗೂ ಮೈಸೂರಿನ ಓಎಂಜಿ ವೆಂಚರ್ಸ್ ಆಯೋಜಿಸಿರುವ ಎಂಎಲ್‌ಎ ಕಪ್–2025ಕ್ಕೆ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಚಾಲನೆ ನೀಡಿದರು. ಶಾಸಕರಾದ ತನ್ವೀರ್ ಸೇಠ್, ರವಿಶಂಕರ್ ಶ್ರೀವತ್ಸ ಸೇರಿ ಹಲವರು ಉಪಸ್ಥಿತರಿದ್ದರು. ಮೂರು ದಿನ ಟೂರ್ನಿ ನಡೆಯಲಿದ್ದು, ಮೈಸೂರಿನ ಶಾಸಕರ ತಂಡ, ಪತ್ರಕರ್ತರು, ಪೊಲೀಸರು ಅಧಿಕಾರಿಗಳು, ವಕೀಲರ ತಂಡ ಭಾಗವಹಿಸಲಿದೆ.

ಚಿತ್ರ ನಿರ್ದೇಶಕ ಎಸ್.ಉಮೇಶ್ ನಿಧನ

ಬೆಂಗಳೂರು, ಫೆ.21– ಕಳೆದ ಕೆಲ ವರ್ಷಗಳಿಂದಲೂ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಕನ್ನಡ ಚಲನಚಿತ್ರ ರಂಗದ ಯಶಸ್ವಿ ನಿರ್ದೇಶಕ ಎಸ್.ಉಮೇಶ್ ನಿಧನ ಹೊಂದಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಯಶಸ್ವಿ ನಿರ್ದೇಶಕ ಎನಿಸಿಕೊಂಡಿದ್ದ ಉಮೇಶ್ ಅವರು, 'ಅವನೇ ನನ್ನ ಗಂಡ', 'ನನಗೂ ಹೆಂಡತಿ ಬೇಕು', 'ತುಂಬಿದ ಮನೆ', 'ರಾಜ ಕೆಂಪು ರೋಜ', 'ಅವಳೆ ನನ್ನ ಹೆಂಡ್ತಿ', ಎಲ್ಲರಂಥಲ್ಲ ನನ್ನ ಗಂಡ ಇನ್ನೂ ಕೆಲವು ಸಿನಿಮಾಗಳನ್ನ ನಿರ್ದೇಶಿಸಿದ್ದರು. ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿದ್ದ ಎಸ್ ಉಮೇಶ್ ಅವರು 2021ರಲ್ಲಿ ತಮಗೆ ಆರ್ಥಿಕ ಸಹಾಯದ ಅವಶ್ಯಕತೆ ಇದೆಯೆಂದು ಮನವಿ ಮಾಡಿದ್ದರು.



18 ವರ್ಷಗಳ ನಂತರ ಮೈಸೂರಲ್ಲಿ ಆಗಮ ಘಟಿಕೋತ್ಸವ

1919 ವಿದ್ಯಾರ್ಥಿಗಳಿಗೆ ಪ್ರವರ, ಪ್ರವೀಣ ಪ್ರಮಾಣ ಪತ್ರ ವಿತರಣೆ





ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಆಗಮ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು. ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಆಗಮ ವಿದ್ವಾಂಸರಿಗೆ ಸನ್ಮಾನ ಮಾಡಲಾಯಿತು.

ಮೈಸೂರು, ಫೆ.21(ಜಿಎ)–ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ, ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಮಿತಿ ವತಿಯಿಂದ 18 ವರ್ಷಗಳ ಬಳಿಕ ನಡೆದ ಆಗಮ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಪ್ರವರ ಮತ್ತು ಪ್ರವೀಣ ವಿಭಾಗಗಳಲ್ಲಿ ಉತ್ತೀರ್ಣರಾಗಿರುವ 1,919 ವಿದ್ಯಾರ್ಥಿಗಳಿಗೆ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಜಗದ್ಗುರು ಶ್ರೀ ಯದಗಿರಿ ಯತಿರಾಜ ನಾರಾಯಣ ಜೀಯರ್ ಸ್ವಾಮಿಗಳು, ನಾಡೋಜ ಡಾ. ಪ್ರೊ ಭಾಷ್ಯಂ ಸ್ವಾಮೀಜಿ ಪ್ರಮಾಣ ಪತ್ರ ವಿತರಿಸಿದರು.

ನಂತರ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಮಾತನಾಡಿ, ಧಾರ್ಮಿಕ ಪರಿಷತ್‌ನ ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮಾಡುತ್ತೇವೆ. ಆಗಮ ಘಟಿಕೋತ್ಸವ ಸುಮಾರು 18 ವರ್ಷಗಳಿಂದ ಆಗಿಲ್ಲ. 2007 ರಿಂದ ಪದವಿ ಪಡೆದಿರುವ ಎಲ್ಲರಿಗೂ ಪ್ರಮಾಣ ಪತ್ರ ನೀಡಲು ತಿಳಿಸಿದ್ದೆ. ಆದರೆ ಎಲ್ಲರನ್ನೂ ಸಂಪರ್ಕಿಸಲು ಸಮಯಾವಕಾಶ ಕೊರತೆಯಿಂದ ಆಗಲಿಲ್ಲ. ಮುಂದಿನ 3 ತಿಂಗಳಲ್ಲಿ ಕಾರ್ಯಕ್ರಮ ಆಯೋಜನೆ ಮಾಡಿ ಅವರೆಲ್ಲರಿಗೂ ಪ್ರಮಾಣ ಪತ್ರ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಅರ್ಚಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ವಿದೇಶ ಪ್ರವಾಸಕ್ಕೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. 65 ವರ್ಷ ಮೇಲ್ಪಟ್ಟವರಿಗೆ ದೇವಸ್ಥಾನಗಳಲ್ಲಿ ಸಾಲಿನಲ್ಲಿ ನಿಲ್ಲದೆ ನೇರವಾಗಿ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. 1,200 ಜನ ಅರ್ಚಕರಿಗೆ ದೇಶದ ವಿವಿಧ ಭಾಗದ ಪುಣ್ಯ ಸ್ಥಳಗಳಿಗೆ ಭೇಟಿ ನೀಡಲು ಉಚಿತ ವ್ಯವಸ್ಥೆ ಮಾಡಲಾಗಿದೆ. ದೇವಸ್ಥಾನಗಳ ಒತ್ತುವರಿಯನ್ನು ತೆರವುಗೊಳಿಸಲು ಸರ್ವೇ ಮಾಡಿಸಲಾಗುತ್ತಿದೆ. ಈಗಾಗಲೇ ಸಾವಿರಾರು ಎಕರೆ ಪ್ರದೇಶವನ್ನು ಧಾರ್ಮಿಕ ದತ್ತಿ ಇಲಾಖೆಯ ವಶಕ್ಕೆ ಪಡೆಯಲಾಗಿದೆ. ಪೂರ್ಣ ಸರ್ವೇ ಆದರೆ ಇನ್ನೂ ಸಾವಿರಾರು ಎಕರೆ ಮುಜರಾಯಿ ಇಲಾಖೆಗೆ ಸೇರ್ಪಡೆಯಾಗಲಿದೆ ಎಂದು ಸಚಿವರು ನುಡಿದರು.

ನಾಡೋಜ ಡಾ. ಪ್ರೊ ಭಾಷ್ಯಂ ಸ್ವಾಮೀಜಿ ಘಟಿಕೋತ್ಸವದ ಭಾಷಣ ಮಾಡಿ, ದೇವಾಲಯದಲ್ಲಿ ಪೂಜೆಯನ್ನು ಸಲ್ಲಿಸುವ ಅರ್ಚಕರು ಕೇವಲ ಅರ್ಚಕರಾಗಿ ಮಾತ್ರ ಇರುವುದಿಲ್ಲ, ಅವಶ್ಯಕವಾದ ಜ್ಞಾನವನ್ನು ಅರ್ಚಕರು ಪಡೆದಿರಬೇಕಾಗುತ್ತದೆ. ತಿಳಿಯಬೇಕಾದ ಅಂಶವನ್ನು ತಿಳಿದು ಕೊಳ್ಳದೇ ಸಾರ್ವಜನಿಕರಿಗೆ ಸಲಹೆ ಸೂಚನೆಗಳನ್ನು ಅರ್ಚಕರು ನೀಡಿದರೆ ಅದು ಸಮಾಜಕ್ಕೆ ಮಾಡುವ ವಂಚನೆಯಾಗುತ್ತದೆ. ಆದ್ದರಿಂದ ಅರ್ಚಕರು ಸಂಸ್ಕೃತ ಭಾಷೆ, ವೇದಮಂತ್ರಗಳು, ರಾಮಾಯಣ ಮುಂತಾದವುಗಳ ಪ್ರಾರಂಭಿಕ ಪರಿಚಯ, ಜ್ಯೋತಿಷ್ಯ ಮುಂತಾದ ಶಾಸ್ತ್ರಗಳ ಯಥೋಚಿತ ಜ್ಞಾನ ಇವುಗಳೆಲ್ಲವನ್ನೂ ಪಡೆದಿರಬೇಕಾಗುತ್ತದೆ. ಇದರ ಜೊತೆಗೆ ಅರ್ಚಕರು ತಮ್ಮಲ್ಲಿ ಸತ್ಯಪರತೆ, ಅನುಕಂಪ, ದಯೆ, ಸೌಜನ್ಯ, ಶೀಲವಂತಿಕೆ ಮುಂತಾದ ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಹೀಗಿದ್ದಾಗ ಮಾತ್ರ ಅರ್ಚಕರು ಸಮಾಜಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಲು ಸಾಧ್ಯವಾಗುತ್ತದೆ ಎಂದರು.

ಆಗಮ ಶಾಸ್ತ್ರಗಳಲ್ಲಿ ಹೇಳಿರುವ ವಿಷಯವನ್ನು ವೈಜ್ಞಾನಿಕ ದೃಷ್ಟಿಯಿಂದ ಸಂಶೋಧನೆಗಳ ಮೂಲಕ ಸಂಶೋಧಿಸಿ ಅದರ ಸತ್ಯಾಂಶಗಳನ್ನು ಜಗತ್ತಿಗೆ ಸಾರಬೇಕಾದಂತಹ ಒಂದು ಕಾಲ ಒದಗಿಬಂದಿದೆ. ಇದರ ಜೊತೆಗೆ ಆಗಮ ಶಾಸ್ತ್ರಕ್ಕೆ ಸೇರಿದ ಅಪ್ರಕಟಿತವಾದ ತಾಳೆ ಗರಿಗಳ ರೂಪದಲ್ಲಿ ಗ್ರಂಥಗಳನ್ನು ಉದ್ಧರಿಸಿ ಸಂಪಾದಿಸಿ ಭಾಷಾಂತರಿಸಿ ಪ್ರಕಟಪಡಿಸುವ ಒಂದು ಮಹತ್ಕಾರ್ಯವೂ ಸಹ ಆಗಬೇಕಾಗಿದೆ. ಈ ಎಲ್ಲಾ ಕಾರ್ಯಗಳು ಯಾವುದೇ ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ನಮ್ಮ ಕರ್ನಾಟಕ ಸರ್ಕಾರವು 'ಆಗಮ ಸಂಶೋಧನ ಸಂಸತ್' ಎಂಬ ಆಗಮಶಾಸ್ತ್ರದ ಸಂಶೋಧನೆಗೇ ಮೀಸಲಾದ ಒಂದು ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿ ಅದರ ಅಡಿಯಲ್ಲಿ ಈ ಕೆಲಸಗಳನ್ನು ಕೈಗೊಳ್ಳುವುದು ಸೂಕ್ತವಾಗಿದೆ ಹಾಗೂ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೂ ಇದು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಕಾರ್ಯ ಪ್ರವೃತ್ತವಾಗಬೇಕು. -ಭಾಷ್ಯಂ ಸ್ವಾಮೀಜಿ

ಆದರ್ಶ ಅರ್ಚಕರಾಗಿರುವವರು ಲೋಹಶಾಸ್ತ್ರ, ತಂತ್ರಶಾಸ್ತ್ರ, ಶಿಲ್ಪಶಾಸ್ತ್ರ, ಮುಂತಾದ ವಿಷಯಗಳಲ್ಲಿಯೂ ಸಹ ನಿಪುಣರಾಗಿರಬೇಕಾಗುತ್ತದೆ. ಪ್ರತಿ ದಿನವೂ ಪೂಜೆಯನ್ನು ಮಾಡುವ ಮೊದಲು 'ಭೂತಶುದ್ಧಿ' ಯೆಂಬ ಕ್ರಮವನ್ನು ಅನುಸರಿಸಿ ತನ್ನ ಪಾಂಚಭೌತಿಕವಾದ ಶರೀರವನ್ನು ಲಯಗೊಳಿಸಿ ಮತ್ತೆ ದಿವ್ಯ ಶರೀರವನ್ನು ಪಡೆದು ಅನಂತರದಲ್ಲಿ ಪೂಜೆಯನ್ನು ನಿರ್ವಹಿಸುವುದು ಆಗಮ ಶಾಸ್ತ್ರೋಕ್ತವಾದ ಕ್ರಮ. ಈ ಎಲ್ಲ ಶಾಸ್ತ್ರೀಯವಾದ ವಿಷಯ ಗಳನ್ನು ಅರಿತು ಅರ್ಚಕರಾದವರು ಪೂಜೆಯನ್ನು ನಿರ್ವಹಿಸಬೇಕಾಗುತ್ತದೆ. ಹಾಗೆ ಮಾಡಿದಾಗ ಮಾತ್ರ ದೇವಸ್ಥಾನದಲ್ಲಿ ದೇವರ ಸಾನ್ನಿಧ್ಯವು ಎಲ್ಲರಿಗೂ ತಿಳಿಯುವಂತಾಗಿ ದೇವರ ಕೃಪೆಯು ಎಲ್ಲಾ ಜನರ ಮೇಲೆ ಹರಿಯುವಂತಾಗುವುದು ಎಂದು ಸಲಹೆ ನೀಡಿದರು.

ಕರ್ನಾಟಕದಲ್ಲಿ ಇದುವರೆವಿಗೂ ಎಲ್ಲಾ ಆಗಮಗಳ ಅಧ್ಯಯನ– ಅಧ್ಯಾಪನವೂ ಅನವರತವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಕಾರಣ ಈ ವಿಷಯದಲ್ಲಿ ಮೈಸೂರಿನ ರಾಜಮನೆತದವರು ತೋರಿದ ಒಲವು. ಮೈಸೂರು ವಿಶ್ವವಿದ್ಯಾಲಯವು ಆರಂಭವಾಗುವುದಕ್ಕೆ ಸುಮಾರು 50 ವರ್ಷಗಳ ಹಿಂದೆಯೇ ಮಹಾರಾಜರು 'ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಯನ್ನು ಸ್ಥಾಪಿಸಿ ಒಂದೇ ಸೂರಿನಡಿಯಲ್ಲಿ ವೇದ–ಶಾಸ್ತ್ರ–ಆಗಮ ಇವೆಲ್ಲವುಗಳನ್ನು ಬೋಧಿಸಲು ವಿಶೇಷ ಪ್ರೋತ್ಸಾಹವನ್ನು ನೀಡಿ ಅನುವು ಮಾಡಿಕೊಟ್ಟರು. ಇದನ್ನು ಸ್ವಾತಂತ್ರದ ನಂತರ ಕರ್ನಾಟಕ ಘನ ಸರ್ಕಾರವು ಮುಂದುವರಿಸಿಕೊಂಡು ಬಂದಿರುವುದು ಬಹಳ ಸಂತೋಷದ ವಿಷಯ. ಅನೇಕ ವರ್ಷಗಳಿಂದ ನಿಂತು ಹೋಗಿದ್ದಂತಹ ಈ ಘಟಿಕೋತ್ಸವವನ್ನು ಮತ್ತೆ ಪ್ರಾರಂಭಿಸಿರುವುದು ಬಹಳ ಸೂಕ್ತ ಮತ್ತು ಸಂವಿಧಾನಕ್ಕೆ ಅನುಗುಣವಾಗಿರುತ್ತದೆ. ಇದನ್ನು ಪ್ರತಿ ವರ್ಷವೂ ಸಹ ನಡೆಸಿಕೊಂಡು ಹೋಗುವುದು ಅತ್ಯವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿಗಳಾದ ಡಾ.ಪಿ.ಶಿವರಾಜು, ಮುಜರಾಯಿ ಇಲಾಖೆ ಆಯುಕ್ತ ವೆಂಕಟೇಶ್ ಸೇರಿದಂತೆ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು, ವಿದ್ವಾಂಸರು ಉಪಸ್ಥಿತರಿದ್ದರು.

ರಾಜ್ಯದ ಮೂಲ ಅಸ್ಮಿತೆ ಉಳಿಸಿಕೊಳ್ಳುವ ಸಲುವಾಗಿ ಕಠಿಣ ಭೂ ಕಾನೂನು

ಉತ್ತರಾಖಂಡ ಸಂಪುಟ ಅಸ್ತು



ಪುಷ್ಕರ್ ಸಿಂಗ್

ಡೆಹ್ರಾಡೂನ್: ಉತ್ತರಾಖಂಡ ರಾಜ್ಯದ ಮೂಲ ಅಸ್ಮಿತೆಯನ್ನು ಉಳಿಸಿಕೊಳ್ಳುವ ಉದ್ದೇಶದ, ಜನ ಮಿತಿಯಿಲ್ಲದೆ ಜಮೀನು ಖರೀದಿಸುವುದನ್ನು ನಿರ್ಬಂಧಿಸುವ ಕಠಿಣ ಭೂ ಕಾನೂನಿಗೆ ರಾಜ್ಯದ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ ಜನ ಜಮೀನು ಖರೀದಿಸುವುದರ ಮೇಲೆ ಮಿತಿ ಇರಬೇಕು ಎಂಬ ಬೇಡಿಕೆಯು ಸಾರ್ವಜನಿಕರಿಂದ ಬಹುಕಾಲದಿಂದ ಇತ್ತು. ಕಠಿಣವಾದ ಭೂ ಕಾನೂನು ಜಾರಿಗೆ ತರುವ ಇರಾದೆಯನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವ್ಯಕ್ತಪಡಿಸಿದ್ದರು.

'ಈ ಐತಿಹಾಸಿಕ ಹೆಜ್ಜೆಯು ರಾಜ್ಯದ ಸಂಪನ್ಮೂಲಗಳನ್ನು, ಸಾಂಸ್ಕೃತಿಕ ಪರಂಪರೆಯನ್ನು ಮತ್ತು ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ. ಇದು ರಾಜ್ಯದ ಮೂಲ ಅಸ್ಮಿತೆಯನ್ನು ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ' ಎಂದು ಧಾಮಿ ಅವರು ಬುಧವಾರ ಎಕ್ಸ್ ಮೂಲಕ ಹೇಳಿದ್ದಾರೆ.

ಹೊರಗಿನವರು ಉತ್ತರಾಖಂಡದಲ್ಲಿ ಖರೀದಿಸಬಹುದಾದ ಜಮೀನಿಗೆ ಇದ್ದ ಮಿತಿಯನ್ನು 2018ರಲ್ಲಿ ತೆರವು ಮಾಡಲಾಗಿತ್ತು. ಆದರೆ ಮಿತಿಯನ್ನು ತೆರವು ಮಾಡಿದ ಪರಿಣಾಮವಾಗಿ ರಾಜ್ಯದ ಕೃಷಿ ಜಮೀನಿನ ವ್ಯಾಪ್ತಿಯು ಕುಗ್ಗುತ್ತಿದೆ ಎಂಬ ಕಳವಳ ಸ್ಥಳೀಯರಲ್ಲಿದೆ.

ಭೀಕರ ಅಪಘಾತ: ಮಹಾ ಕುಂಭಮೇಳದಲ್ಲಿ ಸ್ನಾನ ಮುಗಿಸಿ ಕಾಶಿಗೆ ತೆರಳುತ್ತಿದ್ದ ಬೀದರ್‌ನ ಐವರು ಸಾವು

ಲಕ್ನೋ, ಫೆ.21– ಪ್ರಯಾಗ್‌ರಾಜ್ ಕುಂಭಮೇಳಕ್ಕೆ ತೆರಳಿದ್ದ ಬೀದರ್ ಮೂಲದ ಒಂದೇ ಕುಟುಂಬದ ಐವರು ಅಪಘಾತದಲ್ಲಿ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಉತ್ತರ ಪ್ರದೇಶದ ಕಾಶಿ ಬಳಿ ನಡೆದಿದೆ.

ಲಾರಿ ಮತ್ತು ಕ್ರೂಸರ್ ನಡುವೆ ಇಂದು ಬೆಳಗ್ಗೆ ಮಿರಜಾಪೂರ್ ಜಿಲ್ಲೆಯ ರೂಪಾಪೂರ ಬಳಿ ಅಪಘಾತ ಸಂಭವಿಸಿದೆ. 5 ಮಂದಿ ಸಾವನ್ನಪ್ಪಿದ್ದು 7 ಮಂದಿ ಗಾಯಗೊಂಡಿದ್ದಾರೆ.

ಬೀದರ್ ನಗರದ ಲಾಡಗೇರಿ ಬಡಾವಣೆಯ ನಿವಾಸಿಗಳಾದ ಸುನೀತಾ(35) ಸಂತೋಷ್ (43) ನೀಲಮ್ಮ (60) ಸೇರಿದಂತೆ ಆರು ಮಂದಿ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಮಗು ಕೂಡ ಮೃತ ಪಟ್ಟಿದೆ. ಒಂದೇ ವಾಹನದಲ್ಲಿ ಒಟ್ಟು 14 ಮಂದಿ ಕುಂಭಮೇಳಕ್ಕೆ ತೆರಳಿದ್ದರು. ಪುಣ್ಯ ಸ್ನಾನ ಮಾಡಿದ ಬಳಿಕ ಪ್ರಯಾಗ್‌ರಾಜ್‌ನಿಂದ ಕಾಶಿ ಕಡೆಗೆ ಕ್ರೂಸರ್‌ನಲ್ಲಿ ತೆರಳುತ್ತಿದ್ದರು.

ಇಂದು ಬೆಳಗ್ಗೆ ಕಾಶಿಯಿಂದ 20 ಕಿಲೋಮೀಟರ್ ದೂರದಲ್ಲಿ ಲಾರಿಗೆ ಹಿಂದಿನಿಂದ ಕ್ರೂಸರ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ 5 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದರೆ ಉಳಿದವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.

ಅಭಿನಂದನೆ



ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕಿನ ನೂತನ ಅಧ್ಯಕ್ಷ ಜೆ.ಯೋಗೇಶ್ ಮತ್ತು ಉಪಾಧ್ಯಕ್ಷ ಟೆಂಟ್ ರವಿ ಅವರನ್ನು ಒಂಟಿಕೊಪ್ಪಲ್ ಗುರುರಾಜ್, ವಿಜಯನಗರ ಮಂಜು, ಕೆಜಿ ಕೊಪ್ಪಲ್ ದೀಪಕ್, ಪ್ರಕಾಶ್, ಮಂಜು ಮತ್ತು ಜಗದೀಶ್ ಅಭಿನಂದಿಸಿದರು.

ಒಳ ಮೀಸಲಾತಿ ಜಾರಿಗೊಳಿಸಿ ನಂತರ ಹೊಸ, ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಿ

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯಿಂದ ಪ್ರತಿಭಟನೆ

ಮೈಸೂರು, ಫೆ.21(ಜಿಎ)– ಮೊದಲು ಒಳ ಮೀಸಲಾತಿ ಜಾರಿಗೊಳಿಸಿ ನಂತರ ಹೊಸ ನೇಮಕಾತಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.



ಒಳ ಮೀಸಲಾತಿ ಜಾರಿಗೊಳಿಸಿ ನಂತರ ಹೊಸ ನೇಮಕಾತಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಪರಿಶಿಷ್ಟ ಜಾತಿಯವರಿಗೆ ನೀಡುವ ಒಳ ಮೀಸಲಾತಿ ಸಂವಿಧಾನದ ಆಶಯ ಗಳಿಗೆ ವಿರುದ್ಧವಾಗಿಯೂ ಇಲ್ಲ, ಭಾರತೀಯ ಸಂವಿಧಾನದ ಆರ್ಟಿಕಲ್ 341ರ ಉಲ್ಲಂಘನೆಯೂ ಆಗುವುದಿಲ್ಲ. ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯೊಳಗಿನ ಪ್ರಾಯೋಗಿಕ ದತ್ತಾಂಶಗಳನ್ನು ಸಂಗ್ರಹಿಸಲು 2005ರಲ್ಲಿ ನಿವೃತ್ತ ನ್ಯಾಯಮೂರ್ತಿಗಳಾದ ಎ.ಜೆ.ಸದಾಶಿವ ನೇತೃತ್ವದಲ್ಲಿ ಆಯೋಗ ರಚಿಸಿತು. ಸಮಗ್ರ ಸಮೀಕ್ಷೆ ನಡೆಸಿ, ಎಲ್ಲಾ ಆಯಾಮಗಳನ್ನೂ ಪರಾಮರ್ಶಿಸಿ, ರಾಜ್ಯದ ಸರ್ಕಾರಿ ಇಲಾಖೆಗಳಿಂದ ಮಾಹಿತಿ ಪಡೆದು ಪರಿಶಿಷ್ಟ ಜಾತಿಯೊಳಗಿನ ಹಿಂದುಳಿದ ಹಾಗೂ ಅತೀ ಹಿಂದುಳಿದ ವರ್ಗಗಳ ವಿವರ ಸಂಗ್ರಹಿಸಿತ್ತು. ಇದಲ್ಲದೆ ಪರಿಶಿಷ್ಟ ಜಾತಿಗಳ ಪ್ರತಿಯೊಂದು ಸಮುದಾಯಗಳ ಜನಸಂಖ್ಯೆಯನ್ನೂ ದಾಖಲಿಸಿದ ಆಯೋಗ ಸುಮಾರು 7 ವರ್ಷಗಳ ನಿರಂತರ ಕಾರ್ಯ ನಿರ್ವಹಣೆಯ ಬಳಿಕ 2012ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು ಎಂದು ಪ್ರತಿಭಟನಾಕಾರರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ನ್ಯಾ.ಸದಾಶಿವ ಆಯೋಗ ನೀಡಿರುವ ವರದಿಯನ್ನು ಬಿಜೆಪಿ ಸರ್ಕಾರ 2023ರಲ್ಲಿ, ಕಾಂಗ್ರೆಸ್ ಸರ್ಕಾರ 2024ರಲ್ಲಿ ಅಂಗೀಕರಿಸುವ ಮೂಲಕ ಸದರಿ ವರದಿ ಅನುಷ್ಠಾನಗೊಳಿಸುವಲ್ಲಿ ತಮಗೆ ಯಾವುದೇ ಅಭ್ಯಂತರವಿಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ. ಒಳ ಮೀಸಲಾತಿ ಜಾರಿಯಾಗುವವರೆಗೂ ಯಾವುದೇ ಹುದ್ದೆಗಳ ನೇಮಕಾತಿ ಮತ್ತು ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಮಾಡುವುದಿಲ್ಲ ಎಂದು 2024ರ ಅ.28 ರಂದು ನಡೆದ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದೆ. ಆದರೆ, ಈಗ ತರಾತುರಿಯಲ್ಲಿ ನೇಮಕಾತಿಗಾಗಿ 2024ರ ಆ.1ರ ಒಳ ಮೀಸಲಾತಿಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ನಡೆದ ಸಚಿವ ಸಂಪುಟದ ದಿನಾಂಕದ ಹಿಂದೆಯೇ ಅಧಿಸೂಚನೆ ಹೊರಡಿಸಿರುವಂತೆ ಮಾಡಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಸಲು ಹೊರಟಿರುವುದು ಖಂಡನೀಯ. ಕೂಡಲೇ ಸರ್ಕಾರ ನಾಗಮೋಹನ್ ದಾಸ್, ನ್ಯಾ.ಎ.ಜೆ. ಸದಾ ಶಿವ ಆಯೋಗದ ವರದಿ ಪರಿಗಣಿಸಿ ಅದರ ಅನ್ವಯ ಮಧ್ಯಂತರ ವರದಿ ಪಡೆದುಕೊಂಡು ತುರ್ತಾಗಿ ಒಳ ಮೀಸಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಎಸ್.ಅರುಣ್ ಕುಮಾರ್, ಉಪಾಧ್ಯಕ್ಷ ಎಂ.ದಾಸಯ್ಯ, ಶಿವಕುಮಾರ್ ಎಂ.ಬೆಳ್ತೂರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮರಾಠಿಯಲ್ಲಿ ಮಾತಾಡುವಂತೆ ಕೆಎಸ್‌ಆರ್‌ಟಿಸಿ ಕಂಡಕ್ಟರ್‌ಗೆ ಮರಾಠಿ ಪುಂಡರ ಥಳಿತ

ಬೆಳಗಾವಿ, ಫೆ. 21– ಮಹಾರಾಷ್ಟ್ರದ ಗಡಿಯಲ್ಲಿರುವ ಬೆಳಗಾವಿಯ ಹೊರ ವಲಯದಲ್ಲಿ ಶುಕ್ರವಾರ ಮಧ್ಯಾಹ್ನ ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ಕೆಎಸ್‌ಆರ್‌ಟಿಸಿ ಬಸ್ಸಿನ ಕಂಡಕ್ಟರ್ ಮೇಲೆ ಮರಾಠಿ ಪುಂಡರು ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸುಳೇಭಾವಿ ಗ್ರಾಮದಲ್ಲಿ ಯುವಕನ ಜೊತೆ ಬಸ್ ಹತ್ತಿದ ಯುವತಿ ಟಿಕೆಟ್ ಪಡೆಯಲು ಮರಾಠಿಯಲ್ಲಿ ಮಾತಾಡಿದ್ದಳು. ಆಗ ನನಗೆ ಮರಾಠಿ ಬರಲ್ಲ ಎಂದು ನಾನು ಹೇಳಿದ್ದಕ್ಕೆ ಯುವತಿ ಮರಾಠಿ ಕಲಿಯಬೇಕು ಎಂದು ಹೇಳಿ ನನಗೆ ನಿಂದಿಸಿದರು. ಇದ್ದಕ್ಕಿದ್ದಂತೆ ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿ ನನ್ನ ಮೇಲೆ ಹಲ್ಲೆ ನಡೆಸಿದರು ಎಂದು ಕಂಡಕ್ಟರ್ ಹೇಳಿದರು.

ಗಾಯಗೊಂಡ ಬಸ್ ಕಂಡಕ್ಟರ್ ಅನ್ನು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾಖಲಿಸಲಾಗಿದ್ದು ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರೋಹಿಣಿ–ರೂಪಾ ಗಲಾಟೆ ಪ್ರಕರಣ; ಸಿಂಧೂರಿಗೆ ರಿಲೀಫ್ ನೀಡಿದ ಹೈಕೋರ್ಟ್



ಬೆಂಗಳೂರು, ಫೆ.21– ಮಾನನಷ್ಟ ಪ್ರಕರಣದಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ದಾಖಲಿಸಿದ್ದ ಕೇಸ್‌ಗೆ ಮಧ್ಯಂತರ ತಡೆಯಾಜ್ಞೆ ನೀಡಿ ಹೈಕೋರ್ಟ್ ವಿಚಾರಣೆ ಮುಂದೂಡಿದೆ.

ಮಾ.12 ರವರೆಗೆ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿ, ಅರ್ಜಿ ವಿಚಾರಣಾ ಸಂದರ್ಭದಲ್ಲಿ ರಾಜಿ ಸಂಧಾನಕ್ಕೆ ಪ್ರಯತ್ನಿಸುವಂತೆ ನ್ಯಾ. ಮೊಹಮ್ಮದ್ ನವಾಜ್ ಸಲಹೆ ನೀಡಿದ್ದಾರೆ.

ಈ ಮೊದಲು ಬೆಂಗಳೂರಿನ 7ನೇ ಎಸಿಎಂಎಂ ಕೋರ್ಟ್‌ಗೆ ರೂಪಾ ಖಾಸಗಿ ದೂರು ಸಲ್ಲಿಸಿದ್ದರು. ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಗೆ ಕೋರ್ಟ್ ನೋಟಿಸ್ ನೀಡಿತ್ತು. 2023ರ ಫೆ.19 ರಂದು ರೋಹಿಣಿ ಸಿಂಧೂರಿ ಮಾಧ್ಯಮ ಹೇಳಿಕೆ ನೀಡಿದ್ದಾರೆ. ನಂತರ ಅದನ್ನು ಎಕ್ಸ್ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಈ ಹೇಳಿಕೆಯಲ್ಲಿ ತಮ್ಮ ವಿರುದ್ಧ ಅವಹೇಳನಕಾರಿ ಆರೋಪ ಮಾಡಿದ್ದಾರೆ. ಈ ಹೇಳಿಕೆಯನ್ನು 1.8 ಲಕ್ಷ ಜನರು ವೀಕ್ಷಣೆ ಮಾಡಿದ್ದಾರೆ. ರೋಹಿಣಿ ಸಿಂಧೂರಿ ಅವರ ಅವಹೇಳನಕಾರಿ ಹೇಳಿಕೆ ನಂತರ ತಮ್ಮ ವರ್ಗಾವಣೆಯಾಗಿದೆ. 6 ತಿಂಗಳವರೆಗೆ ಸಂಬಳ ನೀಡದೇ ಹುದ್ದೆ ಇಲ್ಲದೇ ವರ್ಗಾಯಿಸಿದ್ದರು. ಈ ಹೇಳಿಕೆಯಿಂದ ನನ್ನ ತಂಗಿ, ಪತಿ, ಮಕ್ಕಳೂ ಮಾನಸಿಕ ಯಾತನೆ ಅನುಭವಿಸಿದ್ದಾರೆ ಎಂದು ರೋಹಿಣಿ ವಿರುದ್ಧ ರೂಪಾ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಶಾಸಕರಿಂದ ಅಭಿನಂದನೆ



ದಿ ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನ ನೂತನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ರವಿ(ಟೆಂಟ್), ನಿರ್ದೇಶಕರುಗಳಾದ ಶ್ರೀಮತಿ ರಾಜೇಶ್ವರಿ, ಗಿರೀಶ್, ಚಂದ್ರಶೇಖರ್, ಹರೀಶ್, ನಿರಂಜನ್ ಅವರುಗಳನ್ನು ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ತಮ್ಮ ಕಚೇರಿಯಲ್ಲಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಎಂಡೋಸ್ಕೋಪಿಕ್ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಸಾಧನೆ

ಶಸ್ತ್ರಚಿಕಿತ್ಸೆ ಅಗತ್ಯವಿಲ್ಲದೆ ನಿಖರ ಚಿಕಿತ್ಸೆ



ಮೈಸೂರು, ಫೆ21(ಜಿಎ)–ಮೈಸೂರಿನ ಶಾಂತವೇರಿ ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆಯು 3ನೇ ಸ್ಪೇಸ್ ಎಂಡೋಸ್ಕೋಪಿಕ್ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಮಹತ್ವದ ಸಾಧನೆ ಮಾಡಿದೆ. ಆಸ್ಪತ್ರೆಯ ಪ್ರಸಿದ್ಧ ಗ್ಯಾಸ್ಟ್ರೋ ಎಂಟರೋಲಾಜಿಸ್ಟ್ ಮತ್ತು ಹೆಪಟೋಲಾಜಿಸ್ಟ್ ತಜ್ಞ ಡಾ.ಟಿ.ಆರ್.ವಿಜಯ್ ಕುಮಾರ್ ನೇತೃತ್ವದಲ್ಲಿ ವೈದ್ಯಕೀಯ ತಜ್ಞರ ತಂಡವು ಎರಡು ಜಟಿಲ ಪ್ರಕರಣಗಳಲ್ಲಿ ಅತ್ಯಾಧುನಿಕ ಎಂಡೋಸ್ಕೋಪಿಕ್ ತಂತ್ರಜ್ಞಾನವನ್ನು ಬಳಸಿ ಸುಧಾರಿತ 3ನೇ ಸ್ಪೇಸ್ ಎಂಡೋಸ್ಕೋಪಿಕ್ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದು, ಕಡಿಮೆ ಆಕ್ರಮನ ಶೀಲ (ಮಿನಿಮಲಿ ಇನ್ವೇಸಿವ್) ಚಿಕಿತ್ಸೆಗೊಂದು ಹೊಸ ಆಯಾಮ ನೀಡಿದೆ.


ಈ ಪ್ರಕ್ರಿಯೆಯಿಂದ ರೋಗಿಗಳಿಗೆ ವೇಗವಾಗಿ ಚೇತರಿಕೆ ಸಾಧ್ಯವಾಗಿದ್ದು, ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಯ ಅಗತ್ಯತೆಯನ್ನು ಗಣನೀಯವಾಗಿ ಕಡಿಮೆ ಮಾಡಿದೆ. ಈ ಸುಧಾರಿತ 3ನೇ ಸ್ಪೇಸ್ ಎಂಡೋಸ್ಕೋಪಿಕ್ ತಂತ್ರಗಳು ಜಠರ–ಆಂತರಕ ಗೋಡೆಯ ಸಮಸ್ಯೆಗಳನ್ನು ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲದೇ ನಿಖರವಾಗಿ ತೆಗೆದುಹಾಕಲು ನೆರವಾಗುತ್ತವೆ. ಇದರಿಂದ ರೋಗಿಗಳಿಗೆ ಕಡಿಮೆ ನೋವು, ಚುಟುಕು ಆಸ್ಪತ್ರೆ ವಾಸ್ತವ್ಯ ಮತ್ತು ವೇಗವಾದ ಚೇತರಿಕೆ ಸಿಗುತ್ತದೆ.

ಡಾ.ಟಿ.ಆರ್.ವಿಜಯ್ ಕುಮಾರ್ ಯಶಸ್ವಿ ಶಸ್ತ್ರ ಚಿಕಿತ್ಸೆ ಕುರಿತು ಮಾತನಾಡಿ, ನಾವು ಇಂತಹ ಸಂಕೀರ್ಣ ಹಸ್ತಕ್ಷೇಪಗಳನ್ನು ಎಂಡೋಸ್ಕೋಪಿಯ ಮೂಲಕ ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ನಮ್ಮ ಆಸ್ಪತ್ರೆಯ ತಂತ್ರಜ್ಞಾನ, ಪರಿಣತಿ ಮತ್ತು ಮೂಲ ಸೌಕರ್ಯದ ಉನ್ನತ ಮಟ್ಟವನ್ನು ತೋರಿಸುತ್ತದೆ. ಈ ಪ್ರಕ್ರಿಯೆಗಳು ರೋಗಿಗಳ ಉತ್ತಮ ಆರೋಗ್ಯ ಫಲಿತಾಂಶಗಳನ್ನು ಸುಧಾರಿಸುವುದಲ್ಲದೆ, ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ ಸುರಕ್ಷಿತ ಮತ್ತು ಕಡಿಮೆ ಆಕ್ರಮಣಶೀಲವಾದ ಪರ್ಯಾಯವನ್ನು ಒದಗಿಸುತ್ತವೆ ಎಂದರು.

ಈ ಮಹತ್ವದ ಸಾಧನೆಗಳ ಮೂಲಕ ಶಾಂತವೇರಿ ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ ಸುಧಾರಿತ ಗ್ಯಾಸ್ಟ್ರೋ ಎಂಟರೋಲಾಜಿ ಮತ್ತು ಮಿನಿಮಲಿ ಇನ್ವೇಸಿವ್ ಥೆರಪ್ಯುಟಿಕ್ ಎಂಡೋ ಸ್ಕೋಪಿಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಮೈಸೂರು ಮತ್ತು ಸುತ್ತಮುತ್ತಲಿನ ರೋಗಿಗಳಿಗೆ ಉತ್ತಮ ಚಿಕಿತ್ಸೆಯನ್ನು ಒದಗಿಸುತ್ತಿದೆ ಎಂದು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ದೇಶ - ವಿದೇಶ

ಇಸ್ರೇಲ್‌ನಲ್ಲಿ ಬಾಂಬ್ ಸ್ಫೋಟ: ಇರಾನ್–ಹಮಾಸ್ ಕೈವಾಡದ ಶಂಕೆ



ಇಸ್ರೇಲ್: ಗುರುವಾರ ರಾತ್ರಿ ಇಸ್ರೇಲ್‌ನ ಬ್ಯಾಟ್ ಯಾಮ್ ನಗರದಲ್ಲಿ ಮೂರು ಬಸ್‌ಗಳಲ್ಲಿ ನಡೆದ ಸರಣಿ ಬಾಂಬ್ ಸ್ಫೋಟಗಳು ಇಡೀ ಇಸ್ರೇಲ್ ದೇಶವನ್ನೇ ಬೆಚ್ಚಿ ಬೀಳಿಸಿದೆ. ಈ ಸ್ಫೋಟಗಳಲ್ಲಿ ಬಸ್‌ಗಳು ಚೂರು ಚೂರಾಗಿದ್ದು, ಅದೇ ಸಮಯದಲ್ಲಿ ಎರಡು ಬಸ್‌ಗಳಲ್ಲಿದ್ದ ಬಾಂಬ್‌ಗಳನ್ನು ಸಕಾಲದಲ್ಲಿ ನಿಷ್ಕ್ರಿಯಗೊಳಿಸಲಾಗಿದೆ.

ಭದ್ರತಾ ಸಂಸ್ಥೆಗಳು ಇದು ಪೂರ್ವ ಯೋಜಿತ ಭಯೋತ್ಪಾದಕ ದಾಳಿಯಾಗಿದ್ದು, ಇರಾನ್ ಮತ್ತು ಹಮಾಸ್ ಜಂಟಿಯಾಗಿ ಇದನ್ನು ನಡೆಸಿವೆ ಎಂದು ಶಂಕೆ ವ್ಯಕ್ತಪಡಿಸಿದೆ. ಶುಕ್ರವಾರ ಬೆಳಿಗ್ಗೆ 9 ರಿಂದ 10 ಗಂಟೆಯ ನಡುವೆ ಬಸ್‌ಗಳಲ್ಲಿ ಅಳವಡಿಸಲಾಗಿದ್ದ ಬಾಂಬ್‌ಗಳನ್ನು ಸ್ಫೋಟಿಸಲು ನಿರ್ಧರಿಸಲಾಗಿತ್ತು, ಇದರಿಂದ ಗರಿಷ್ಠ ಸಂಖ್ಯೆಯ ಜನರು ಸಾಯುತ್ತಾರೆ ಎಂದು ಹೇಳಲಾಗಿತ್ತು. ಆದರೆ ತಪ್ಪಾದ ಟೈಂ ಸೆಟ್ಟಿಂಗ್‌ನಿಂದಾಗಿ ಈ ಬಾಂಬ್‌ಗಳು ಗುರುವಾರ ರಾತ್ರಿಯೇ ಸ್ಫೋಟಗೊಂಡಿವೆ. ಇದರಿಂದಾಗಿ ಯಾರೂ ಪ್ರಾಣ ಕಳೆದುಕೊಳ್ಳಲಿಲ್ಲ. ಇಸ್ರೇಲಿ ಅಧಿಕಾರಿಗಳ ಪ್ರಕಾರ, ಈ ಬಾಂಬ್‌ಗಳು ಪ್ರಮಾಣಿತವಲ್ಲದ ಸ್ಫೋಟಕ ವಸ್ತುಗಳಿಂದ ಮಾಡಲ್ಪಟ್ಟಿದ್ದು, ಇದು ದೊಡ್ಡ ಪ್ರಮಾಣದ ಸಾವುನೋವುಗಳಿಗೆ ಕಾರಣವಾಗುತ್ತಿತ್ತು.

ಭಾರತದ ಚುನಾವಣೆಗೆ ಅಮೆರಿಕದ ಹಣ: 'ಕಿಕ್ ಬ್ಯಾಕ್ ಸ್ಕೀಮ್' ಎಂದ ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಭಾರತದ ಚುನಾವಣೆಗೆ 21 ಮಿಲಿಯನ್ ಡಾಲರ್ ಅಮೆರಿಕ ಸರ್ಕಾರದ ನೆರವನ್ನು ಮತ್ತೆ ಪ್ರಶ್ನಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅದನ್ನು ಕಿಕ್ ಬ್ಯಾಕ್ ಯೋಜನೆ ಎಂದು ಕರೆದಿದ್ದಾರೆ.

ರಿಪಬ್ಲಿಕನ್ ಗವರ್ನರ್ಸ್ ಅಸೋಸಿಯೇಷನ್ ಸಭೆಯನ್ನುದ್ದೇಶಿಸಿ ಮಾತನಾಡಿದ ಟ್ರಂಪ್, ಭಾರತದಲ್ಲಿ ಚುನಾವಣೆಗಾಗಿ 21 ಮಿಲಿಯನ್ ಡಾಲರ್ ಕಳುಹಿಸಲಾಗಿದೆ. ಭಾರತದಲ್ಲಿನ ಚುನಾವಣೆ ಬಗ್ಗೆ ನಾವೇಕೆ ತಲೆಕೆಡಿಸಿಕೊಳ್ಳಬೇಕು. ನಮ್ಮಲ್ಲಿಯೇ ಸಾಕಷ್ಟು ಸಮಸ್ಯೆಯಿದೆ. ನಮಗೆ ನಮ್ಮದೇ ಮತದಾನ ಬೇಕು ಅಲ್ಲವೇ? ಇಷ್ಟೆಲ್ಲಾ ಹಣ ಭಾರತಕ್ಕೆ ಹೋಗಿದೆ ಎಂಬುದನ್ನು ನೀವು ಊಹಿಸಬಲ್ಲಿರಾ? ಅದನ್ನು ಪಡೆದಾಗ ಅವರು ಯಾವ ರೀತಿ ಯೋಚಿಸುತ್ತಾರೆ ಎಂಬುದು ನನಗೆ ಆಶ್ಚರ್ಯವನ್ನುಂಟು ಮಾಡಿತು. ಇದು ಕಿಕ್‌ಬ್ಯಾಕ್ ಯೋಜನೆಯಾಗಿದೆ. ಅದನ್ನು ಅವರು ಪಡೆದು ಖರ್ಚು ಮಾಡುವುದಿಲ್ಲ. ಅದನ್ನು ಜನರಿಗೆ ಕಳುಹಿಸಿದ್ದಾರೆ ಎಂದರು.

ಎಫ್‌ಬಿಐ ನಿರ್ದೇಶಕ ಸ್ಥಾನಕ್ಕೆ ಭಾರತೀಯ ಮೂಲದ ಕಶ್ ಪಟೇಲ್ ಆಯ್ಕೆ



ಅಮೆರಿಕ: ಭಾರತೀಯ ಮೂಲದ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. 51 ಮತ ಪಡೆಯುವ ಮೂಲಕ ಪ್ರಮುಖ ಹುದ್ದೆಗೆ ಆಯ್ಕೆಯಾಗಿದ್ದಾರೆ.

ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಎಫ್‌ಬಿಐನಲ್ಲಿ ಈಗಾಗಲೇ ಸಾಕಷ್ಟು ಬದಲಾವಣೆಗಳಾಗಿವೆ. ಜನವರಿ 6ರ ಕ್ಯಾಪಿಟಲ್ ಗಲಭೆಯ ತನಿಖೆಯಲ್ಲಿ ಭಾಗಿಯಾದ ಅಧಿಕಾರಿಗಳನ್ನು ವಜಾಗೊಳಿಸಲಾಗಿದೆ. ಈ ಸೂಕ್ಷ್ಮ ಸಮಯದಲ್ಲಿ ಕಶ್ ಪಟೇಲ್ ಎಫ್‌ಬಿಐ ನಿರ್ದೇಶಕರಾಗಿ ನೇತೃತ್ವ ವಹಿಸಿಕೊಳ್ಳುತ್ತಿದ್ದಾರೆ.

ಡೊನಾಲ್ಡ್ ಟ್ರಂಪ್ 2017ರಲ್ಲಿ ಎಫ್‌ಬಿಐ ನಿರ್ದೇಶಕ ಸ್ಥಾನಕ್ಕೆ ಕ್ರಿಸ್ಟೋಫರ್ ರೇ ಅವರನ್ನು ನೇಮಿಸಿದ್ದರು. ನಂತರದಲ್ಲಿ ಇಬ್ಬರ ನಡುವೆ ಭಿನ್ನಾಭಿಪ್ರಾಯಗಳು ಸೃಷ್ಟಿಯಾಗಿದ್ದವು. ಇದೀಗ ಕ್ರಿಸ್ಟೋಫರ್ ರೇ ಅವರಿಂದ ತೆರವಾಗುತ್ತಿರುವ ಸ್ಥಾನಕ್ಕೆ ಭಾರತೀಯ ಮೂಲದ ಕಶ್ ಪಟೇಲ್ ಆಯ್ಕೆಯಾಗಿದ್ದಾರೆ. ತನಿಖೆ ವಿಚಾರಗಳಲ್ಲಿ ಯಾವುದೇ ರಾಜಕೀಯ ಪ್ರಭಾವ ಬೀರಬಾರದು ಎಂಬ ಕಾರಣದಿಂದ ಎಫ್‌ಬಿಐ ನಿರ್ದೇಶಕರ ಅಧಿಕಾರಾವಧಿ ಸಾಮಾನ್ಯವಾಗಿ 10 ವರ್ಷಗಳು ಇರುತ್ತವೆ.

ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿಯ 'ಬಿ' ಟೀಮ್ ಆಗಿತ್ತು



ಲಖನೌ: ಇತ್ತೀಚಿಗೆ ನಡೆದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿಯ 'ಬಿ' ಟೀಮ್ ಆಗಿ ಸ್ಪರ್ಧಿಸಿತ್ತು ಎಂದು ಬಿಎಸ್ಪಿ ಅಧ್ಯಕ್ಷೆ ಮಾಯಾವತಿ ಅವರು ಶುಕ್ರವಾರ ತಮ್ಮ ಪಕ್ಷದ ಪ್ರಸ್ತುತ ರಾಜಕೀಯ ವಿಧಾನವನ್ನು ಪ್ರಶ್ನಿಸಿದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರಿಗೆ ತಿರುಗೇಟು ನೀಡಿದ್ದಾರೆ.

ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷ(ಬಿಎಸ್ಪಿ) ಲೋಕಸಭಾ ಚುನಾವಣೆಯಲ್ಲಿ ಇಂಡಿಯಾ ಮೈತ್ರಿಕೂಟ ಸೇರದಿರುವುದರಿಂದ ನಿರಾಶೆಗೊಂಡಿದೆ ಎಂದು ಮಾಜಿ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ನಿನ್ನೆ ಹೇಳಿದ್ದರು.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಮಾಯಾವತಿ, ಈ ಬಾರಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಿಜೆಪಿಯ 'ಬಿ' ಟೀಮ್ ಆಗಿ ಹೋರಾಡಿತು, ಇದರಿಂದಾಗಿ ಬಿಜೆಪಿ ಅಲ್ಲಿ ಅಧಿಕಾರಕ್ಕೆ ಬಂತು ಎಂಬುದು ಸಾಮಾನ್ಯ ಚರ್ಚೆಯಾಗಿದೆ ಎಂದು ಟೀಕಿಸಿದ್ದಾರೆ. ಇಲ್ಲದಿದ್ದರೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಹೆಚ್ಚಿನ ಅಭ್ಯರ್ಥಿಗಳು ಠೇವಣಿಯನ್ನು ಸಹ ಉಳಿಸಿಕೊಳ್ಳಲು ಸಾಧ್ಯವಾಗದಂತಹ ಕೆಟ್ಟ ಸ್ಥಿತಿಯಲ್ಲಿರುತ್ತಿರಲಿಲ್ಲ ಎಂದು ಮಾಜಿ ಮುಖ್ಯಮಂತ್ರಿ ವಾಗ್ದಾಳಿ ನಡೆಸಿದ್ದಾರೆ.

ಗಂಗೂಲಿ ಕಾರು ಅಪಘಾತ: ಕೂದಲೆಳೆ ಅಂತರದಲ್ಲಿ ಪಾರು



ಕೋಲ್ಕೊತ್ತ: ಟೀಂ ಇಂಡಿಯಾ ಮಾಜಿ ನಾಯಕ ಸೌರವ್ ಗಂಗೂಲಿ ಅವರ ಕಾರು ಅಪಘಾತಕ್ಕೀಡಾಗಿದೆ. ಬುರ್ದ್ವಾನ್‌ನಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ಪ್ರಯಾಣಿಸುತ್ತಿದ್ದ ವೇಳೆ ಘಟನೆ ಸಂಭವಿಸಿದೆ.

ಸೌರವ್ ಗಂಗೂಲಿ ಅವರ ಕಾರು ದುರ್ಗಾಪುರ ಎಕ್ಸ್‌ಪ್ರೆಸ್‌ವೇ ಮೂಲಕ ಹಾದು ಹೋಗುವಾಗ ಸಿಂಗೂರ್ ಬಳಿ ಇದ್ದಕ್ಕಿದ್ದಂತೆ ವೇಗವಾಗಿ ಬಂದ ಲಾರಿ ಅವರ ಕಾರಿಗೆ ಡಿಕ್ಕಿ ಹೊಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಆದರೆ ಗಂಗೂಲಿ ಅವರ ಬೆಂಗಾವಲು ವಾಹನಗಳಿಗೆ ಹಾನಿಯಾಗಿದೆ.

ಲಾರಿ ಡಿಕ್ಕಿಯಾಗುತ್ತಿದ್ದಂತೆಯೇ ಗಂಗೂಲಿ ಅವರ ಕಾರಿನ ಚಾಲಕ ತಕ್ಷಣ ಬ್ರೇಕ್ ಹಾಕಿದರು. ಆಗ ಹಿಂದೆಯಿದ್ದ ಬೆಂಗಾವಲು ಪಡೆಯ ವಾಹನಗಳು ಒಂದಕ್ಕೊಂದು ಡಿಕ್ಕಿ ಹೊಡೆದವು ಎಂದು ವರದಿಯಾಗಿದೆ. ಸೌರವ್ ಈ ಭೀಕರ ಅಪಘಾತದಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದಾರೆ.

ಸ್ವಲ್ಪ ಹೊತ್ತು ರಸ್ತೆಯಲ್ಲಿ ಕಾದ ನಂತರ ಗಂಗೂಲಿ ಬೇರೆ ವಾಹನದಲ್ಲಿ ಸಮಾರಂಭಕ್ಕೆ ತೆರಳಿದ್ದಾರೆ. ದಾರಿಯಲ್ಲಿ ಅಪಘಾತದಿಂದಾಗಿ ಆತಂಕಕ್ಕೊಳಗಾಗಿದ್ದರೂ, ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸಿ ಗಂಗೂಲಿ ಮಾತನಾಡಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ

ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ



ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಬಡ ವಿದ್ಯಾರ್ಥಿಗಳಿಗೆ ಕೊಡವ ದೀನಬಂಧು ಚಾರಿಟಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿವೇತನ ವಿತರಿಸಲಾಯಿತು.

ಮಡಿಕೇರಿ, ಫೆ.21–ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಬಡ ವಿದ್ಯಾರ್ಥಿಗಳಿಗೆ ಕೊಡವ ದೀನಬಂಧು ಚಾರಿಟಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ಕಟ್ಟೇರ ಎ.ಅಯ್ಯಪ್ಪ, ಟ್ರಸ್ಟ್ ವತಿಯಿಂದ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅಗತ್ಯವಾದ ಶುಲ್ಕ ಪಾವತಿ ಅಥವಾ ಪುಸ್ತಕ ಕೊಳ್ಳಲು ಇನ್ನಿತರ ಶೈಕ್ಷಣಿಕ ಉಪಯೋಗಕ್ಕೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಸಮಯ ಪಾಲನೆಯೊಂದಿಗೆ ವಿದ್ಯಾಭ್ಯಾಸ ಮುಗಿಸಿ, ಜೀವನದ ಉತ್ತುಂಗಕ್ಕೆ ಏರಬೇಕು. ಹೆತ್ತವರು, ಗುರುಗಳು ಹಾಗೂ ಸರಿಯಾದ ಮಾರ್ಗ ತೋರಿದ ಹಿರಿಯರಿಗೆ ಗೌರವ ನೀಡಬೇಕು ಎಂದು ಸಲಹೆ ನೀಡಿದರು.

ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಪಟ್ಟಡ ಎ.ಜಯ ಕುಮಾರ್ ಮಾತನಾಡಿ, 1996ರಲ್ಲಿ ದೀನಬಂಧು ಚಾರಿಟಬಲ್ ಟ್ರಸ್ಟ್ ಪ್ರಾರಂಭಗೊಂಡಿದ್ದು, ನಂತರ ಕೊಡವ ದೀನಬಂಧು ಚಾರಿಟಬಲ್ ಟ್ರಸ್ಟ್ ಎಂದು ಮರುನಾಮಕರಣ ಮಾಡಲಾಯಿತು. ಇಲ್ಲಿಯವರೆಗೆ ಸುಮಾರು 3012 ಬಡವಿದ್ಯಾರ್ಥಿಗಳಿಗೆ ನೆರವಾಗಿದ್ದು, ನಮ್ಮೊಂದಿಗೆ ದಾನಿಗಳು ಕೂಡ ಕೈಜೋಡಿಸಿ ಸಹಕರಿಸುತ್ತಿದ್ದಾರೆ ಎಂದರು.

ಟ್ರಸ್ಟ್‌ನ ಖಜಾಂಚಿ ನಿವೃತ್ತ ವಿಂಗ್ ಕಮಾಂಡರ್ ಚೇಂದ್ರಿಮಡ ಜಿ.ಮಾದಪ್ಪ ಮಾತನಾಡಿ, ಇಂದಿನ ಪೀಳಿಗೆ ಆಹಾರ ಬೆಲೆ ತಿಳಿಯದಂತಾಗಿದೆ. ಕಣ್ಣಿಗೆ ಕಂಡದ್ದೆಲ್ಲಾ ಬೇಕು ಎನ್ನುವ ನಿಟ್ಟಿನಲ್ಲಿ ಎಲ್ಲವನ್ನು ತೆಗೆದುಕೊಂಡು ವ್ಯರ್ಥಮಾಡುವುದರೊಂದಿಗೆ ಅಗತ್ಯವಿರುವವರಿಗೆ ಆ ಆಹಾರ ಸಿಗದಂತೆ ಮಾಡುತ್ತಿದ್ದೇವೆ. ಆದ್ದರಿಂದ ಆಹಾರವನ್ನು ವ್ಯರ್ಥ ಮಾಡದೆ ಇತರರಿಗೂ ಊಟ ದೊರಕುವಂತೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭ ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಚೆಕ್ ವಿತರಿಸಲಾಯಿತು. ವಿದ್ಯಾರ್ಥಿಗಳು ದುಂದು ವೆಚ್ಚ, ಮಾದಕ ವಸ್ತು ಸೇವನೆ ಮತ್ತು ಆಹಾರ ಪೋಲು ಮಾಡುವುದಿಲ್ಲವೆಂದು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಕಾಲೇಜಿನ ಪ್ರಾಂಶುಪಾಲ ಮೇಜರ್ ಡಾ.ಬಿ.ರಾಘವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟಿಗಳಾದ ಕಳ್ಳಿಚಂಡ ಮುದ್ದುರಾಜ್, ಚಂಬಂಡ ಜಿ.ಸೋಮಣ್ಣ ಹಾಜರಿದ್ದರು.

7ನೇ ವೇತನ ಆಯೋಗದ ಶಿಫಾರಸ್ಸಿನ ಆರ್ಥಿಕ ಸೌಲಭ್ಯ ನೀಡುವಂತೆ ಆಗ್ರಹಿಸಿ

ಫೆ.28, ನಿವೃತ್ತ ಸರ್ಕಾರಿ ನೌಕರರ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಜಿಲ್ಲಾ ಪ್ರಧಾನ ಸಂಚಾಲಕ ಪಿ.ಎಸ್.ಜನಾರ್ಧನ ಮಾತನಾಡಿದರು.

ಮಡಿಕೇರಿ, ಫೆ.21–ನಿವೃತ್ತ ಸರ್ಕಾರಿ ಅಧಿಕಾರಿ ಮತ್ತು ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಆರ್ಥಿಕ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಫೆ.28ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ನಿವೃತ್ತ ನೌಕರರ ವೇದಿಕೆಯಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾ ಪ್ರಧಾನ ಸಂಚಾಲಕ ಪಿ.ಎಸ್.ಜನಾರ್ಧನ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2022ರ ಜು.1ರಿಂದ 2024ರ ಜು.31ರ ಅವಧಿ ಒಳಗೆ ನಿವೃತ್ತರಾದ ರಾಜ್ಯದ 26,700 ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗೆ 7ನೇ ವೇತನ ಆಯೋಗದ ಆರ್ಥಿಕ ಸೌಲಭ್ಯ ದೊರಕಿಲ್ಲ. ಸೂಚಿತ ಅವಧಿಯಲ್ಲಿ ನಿವೃತ್ತರಾದವರಿಗೆ 7ನೇ ವೇತನ ಆಯೋಗದ ಸೌಲಭ್ಯಗಳ ಬದಲಾಗಿ ಹಿಂದಿನ 6ನೇ ವೇತನ ಆಯೋಗದ ಸೌಲಭ್ಯವನ್ನಷ್ಟೇ ನೀಡಲಾಗಿದೆ. 7ನೇ ವೇತನ ಆಯೋಗದಂತೆ 'ಎ' ದರ್ಜೆಯಿಂದ 'ಸಿ' ದರ್ಜೆವರೆಗೆ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದವರಿಗೆ 12 ಲಕ್ಷ ರೂ.ಗಳಿಂದ 20 ಲಕ್ಷ ರೂ. ಅನ್ನು ರಾಜ್ಯ ಸರ್ಕಾರ ನೀಡಬೇಕು ಎಂದು ಒತ್ತಾಯಿಸಿದರು.

ನೌಕರರಿಗೆ ವೇತನ ಭತ್ಯೆ ಹಾಗೂ ಪಿಂಚಣಿಯನ್ನು ಪರಿಷ್ಕರಿಸಲು ಡಾ.ಸುಧಾಕರರಾವ್ ನೇತೃತ್ವದಲ್ಲಿ ಸರ್ಕಾರ 7ನೇ ವೇತನ ಆಯೋಗ ರಚಿಸಿತ್ತು. ಈ ಆಯೋಗ ನೀಡಿದ ವರದಿಯಂತೆ ಸರ್ಕಾರ 2024ರ ಆ.23ರಂದು ವೇತನ ಭತ್ಯೆ ಪರಿಷ್ಕರಿಸಿ ಆದೇಶ ಹೊರಡಿಸಿತ್ತು. ಈ ಆದೇಶದಲ್ಲಿ 2024ರ ಆ.1ರಿಂದ ಆರ್ಥಿಕ ಸೌಲಭ್ಯ ಮಂಜೂರು ಮಾಡಿದೆ. ವಾಸ್ತವವಾಗಿ 2022ರ ಜು.1ರಿಂದಲೇ ಜಾರಿಗೊಳಿಸಬೇಕಾದ್ದನ್ನು 2024ರ ಆ.1ರಿಂದ ಜಾರಿಗೊಳಿಸಿದೆ. ಇದರಿಂದ 2022ರ ಜು.1 ರಿಂದ 2024ರ ಜು.31ರ ಅವಧಿಯಲ್ಲಿ ನಿವೃತ್ತರಾದ ನೌಕರರು ಆಯೋಗದ ಶಿಫಾರಸ್ಸಿನ ನಿವೃತ್ತಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂಬಂಧ ಸರ್ಕಾರಕ್ಕೆ ಹಲವಾರು ಬಾರಿ ಮನವಿ ನೀಡಿದ್ದರೂ ಸೂಕ್ತ ಸ್ಪಂದನ ದೊರಕದ ಹಿನ್ನೆಲೆಯಲ್ಲಿ ಇದೀಗ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ಕೊಡಗಿನಲ್ಲಿ ಸೌಲಭ್ಯ ವಂಚಿತ 426 ನಿವೃತ್ತ ಸರ್ಕಾರಿ ನೌಕರರು ಇದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಜಿಲ್ಲಾ ಸಂಚಾಲಕರಾದ ಜಿ.ಎಂ.ಚಿನ್ನಯ್ಯ, ಕೆ.ಬಿ.ಮೋಹನ್, ಸೋಮವಾರಪೇಟೆ ತಾಲೂಕು ಸಂಚಾಲಕ ಅಂತೋಣಿ ಡಿಸೋಜ, ವಿರಾಜಪೇಟೆ ತಾಲೂಕು ಸಂಚಾಲಕ ಎಂ.ಎಸ್.ಸುಬ್ರಮಣಿ ಉಪಸ್ಥಿತರಿದ್ದರು.

ಇರ್ಪು ಜಲಪಾತದ ಬಳಿ ಸ್ವಚ್ಛತಾ ಕಾರ್ಯ



ಶ್ರೀಮಂಗಲ ಗ್ರಾಪಂ ವ್ಯಾಪ್ತಿ ಇರ್ಪು ಜಲಪಾತದ ಬಳಿ ಸ್ವಚ್ಛತೆ ನಡೆಸಲಾಯಿತು.

ಮಡಿಕೇರಿ: ಕೊಡಗು ಪತ್ರಕರ್ತರ ಸಂಘದ ಪೊನ್ನಂಪೇಟೆ ತಾಲೂಕು ಘಟಕದ ವತಿಯಿಂದ ಶ್ರೀಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಮೇಶ್ವರ ದೇವಸ್ಥಾನದ ಇರ್ಪು ಜಲಪಾತದ ಸುತ್ತಮುತ್ತ ಶ್ರಮದಾನದ ಮೂಲಕ ಸ್ವಚ್ಛತೆ ನಡೆಸಲಾಯಿತು.

ರಾಮೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಸಂಘದ ಸದಸ್ಯರು, ಸ್ವಚ್ಛತಾ ಕಾರ್ಯ ಕೈಗೊಂಡರು. ಸಂಘದ ಜಿಲ್ಲಾಧ್ಯಕ್ಷ ಎಸ್.ಎ.ಮುರಳೀಧರ್ ಮಾತನಾಡಿ, ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಹಾಗೆಯೇ ರಾಮೇಶ್ವರ ದೇವಸ್ಥಾನ ಮತ್ತು ಇರ್ಪು ಜಲಪಾತಕ್ಕೂ ಭೇಟಿ ನೀಡುತ್ತಾರೆ. ಪ್ರವಾಸಿಗರು ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯದೇ ಜಿಲ್ಲೆಯ ಸುಂದರ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವಂತಾಗಲಿ ಎಂಬ ಆಶಯದಿಂದ ಪ್ರವಾಸಿಗರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಸಂಘದ ಪೊನ್ನಂಪೇಟೆ ತಾಲೂಕು ಘಟಕದಿಂದ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಕಿರಿಯಮಾಡ ರಾಜ್ ಕುಶಾಲಪ್ಪ ಮಾತನಾಡಿದರು. ರಾಮೇಶ್ವರ ದೇವಸ್ಥಾನ ಹಾಗೂ ಇರ್ಪು ಜಲಪಾತದ ಬಳಿ ತ್ಯಾಜ್ಯಗಳನ್ನು ಶ್ರಮದಾನದ ಮೂಲಕ ತೆರವುಗೊಳಿಸಿ, ವಾಹನದ ಮೂಲಕ ವಿಲೇವಾರಿ ಮಾಡಲಾಯಿತು. ವಿರಾಜಪೇಟೆ ತಾಲೂಕು ಅಧ್ಯಕ್ಷ ಮುಧೋಶ್ ಪೂವಯ್ಯ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಹೆಚ್.ಆರ್.ಹರೀಶ್ ಕುಮಾರ್, ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳು, ಸದಸ್ಯರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಹಾಪ್‌ಕಾಮ್ಸ್ ಕಟ್ಟಡದ ಮುಂದುವರಿದ ಕಾಮಗಾರಿಗೆ 1 ಕೋಟಿ ಮಂಜೂರು



ಬೆಂಗಳೂರಿನಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಶಾಸಕ ಡಾ.ಮಂತರ್‌ಗೌಡ ನೇತೃತ್ವದಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ಸಮಿತಿ ಅಧ್ಯಕ್ಷರು ಹಾಗೂ ನಿರ್ದೇಶಕರು ಮನವಿ ಸಲ್ಲಿಸಿದರು.

ಮಡಿಕೇರಿ, ಫೆ.21–ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಕಟ್ಟಡದ ಮುಂದುವರಿದ ಅಭಿವೃದ್ಧಿ ಕಾಮಗಾರಿಗೆ ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ 1 ಕೋಟಿ ರೂ. ಮಂಜೂರು ಮಾಡಿದ್ದಾರೆ.

ಜಿಲ್ಲಾ ಹಾಪ್‌ಕಾಮ್ಸ್ ಸಮಿತಿ ಅಧ್ಯಕ್ಷರು ಹಾಗೂ ನಿರ್ದೇಶಕರು ಶಾಸಕ ಡಾ.ಮಂತರ್‌ಗೌಡ ನೇತೃತ್ವದಲ್ಲಿ ಬೆಂಗಳೂರಿನ ಗೃಹ ಕಚೇರಿಯಲ್ಲಿ ಸಚಿವರನ್ನು ಭೇಟಿ ಮಾಡಿದರು. ಮಡಿಕೇರಿಯಲ್ಲಿರುವ ಜಿಲ್ಲಾ ಹಾಪ್‌ಕಾಮ್ಸ್ ಕಟ್ಟಡದ ಮುಂದುವರಿದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಕೋರಿ ಮನವಿ ಸಲ್ಲಿಸಿದರು. ಮನವಿಗೆ ಸ್ಪಂದಿಸಿದ ಸಚಿವರು 1 ಕೋಟಿ ರೂ. ಅನುದಾನ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭ ಕೊಡಗು ಜಿಲ್ಲಾ ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಹೆಚ್.ಆರ್.ಯೋಗೇಶ್, ಹಾಪ್‌ಕಾಮ್ಸ್ ಅಧ್ಯಕ್ಷ ರಮೇಶ್ ಚಂಗಪ್ಪ, ಉಪಾಧ್ಯಕ್ಷ ಮಧುದೇವಯ್ಯ, ಪ್ರಮುಖರಾದ ಕಿಶನ್ ಮಡಿಕೇರಿ ಹಾಗೂ ಸಮಿತಿ ನಿರ್ದೇಶಕರು ಉಪಸ್ಥಿತರಿದ್ದರು.

ಕೊಡಗು ವಿವಿ ಮುಚ್ಚುವ ನಿರ್ಧಾರಕ್ಕೆ ಖಂಡನೀಯ



ಸುದ್ದಿಗೋಷ್ಠಿಯಲ್ಲಿ ನಾಗರಿಕ ಹೋರಾಟ ಸಮಿತಿ ಮುಖಂಡ ಡಾ.ಇ.ರ.ದುರ್ಗಾ ಪ್ರಸಾದ್ ಮಾತನಾಡಿದರು.


ವಿರಾಜಪೇಟೆ: ಕೊಡಗು ವಿಶ್ವವಿದ್ಯಾನಿಲಯ ಮುಚ್ಚಲು ನಿರ್ಧರಿಸಿರುವ ರಾಜ್ಯ ಸರ್ಕಾರದ ನಡೆ ಖಂಡನೀಯ ಎಂದು ನಾಗರಿಕ ಹೋರಾಟ ಸಮಿತಿಯ ಮುಖಂಡ ಡಾ.ಇ.ರ.ದುರ್ಗಾಪ್ರಸಾದ್ ಹೇಳಿದರು.

ನಾಗರಿಕ ಸಮಿತಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಹಣಕಾಸಿನ ಕೊರತೆ ನೆಪವೊಡ್ಡಿ ಯಾವುದೇ ಅನುದಾನ ನೀಡದೆ ಕೊಡಗು ವಿವಿ ಮುಚ್ಚಲು ಹೊರಟಿರುವುದು ಸರಿಯಲ್ಲ. ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ಗೌರವವಿದೆ. ಹಿಂದಿನ ಬಿಜೆಪಿ ಸರ್ಕಾರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದಲ್ಲಿ 9 ನೂತನ ವಿವಿಗಳನ್ನು ಸ್ಥಾಪಿಸಿ, ಉತ್ತಮ ರೀತಿ ನಡೆಸುತ್ತಿತ್ತು. ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಮುಚ್ಚುವ ನಿರ್ಧಾರ ಕೈಗೊಂಡಿರುವ ಕ್ರಮ ಸರಿಯಲ್ಲ. ಕೊಡಗಿನ ಗ್ರಾಮೀಣ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿವಿ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಸಮಿತಿ ಸದಸ್ಯ ವಕೀಲ ಸೋಮಲೋಕನಾಥ್ ಮಾತನಾಡಿ, ಸರ್ಕಾರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ವಿವಿಗಳನ್ನು ಮುಚ್ಚುವ ನಿರ್ಧಾರಕ್ಕೆ ಜನತೆಯ ವಿರೋಧವಿದ್ದು, ಒಂದು ವೇಳೆ ವಿಶ್ವವಿದ್ಯಾನಿಲಯಗಳನ್ನು ಮುಚ್ಚಿದರೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಎನ್.ಕೆ. ಶಫೀರ್ ಉಪಸ್ಥಿತರಿದ್ದರು.

ಕಲಿಯಂಡ ಕಾಳಪ್ಪ ನಿಧನ



ನಾಪೋಕ್ಲು, ಫೆ.21–ಸಮೀಪದ ಬೇತು ಗ್ರಾಮದ ನಿವಾಸಿ ಕಲಿಯಂಡ ಕಾಳಪ್ಪ (ಡಾಲು (86) ಶುಕ್ರವಾರ ನಿಧನರಾದರು.

ಮೃತರು ನಾಪೋಕ್ಲು ಮಂಡಲ ಪಂಚಾಯಿತಿ ಸದಸ್ಯರಾಗಿ, ಕೊಡಗು ದೈನಿಕ ಪತ್ರಿಕೆಯಲ್ಲಿ ಸಂಪಾದಕರಾಗಿ, ಕೊಳಕೇರಿ ಭಗವತಿ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ, ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಮೃತರು ಪತ್ನಿ ಗೌರಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ನಾಪೋಕ್ಲು ಕೊಡವ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೇದೆ ಮಂಜುನಾಥ್



ಕುಶಾಲನಗರ, ಫೆ.21–ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಪೇದೆ ಮಂಜುನಾಥ್(45) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಇಬ್ಬರು ಸಹೋದರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಶುಕ್ರವಾರ ಸ್ವಗ್ರಾಮ ಹೆಬ್ಬಾಲೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹಾಗೂ ಅಧಿಕಾರಿಗಳು ಅಂತಿಮ ದರ್ಶನ ಪಡೆದರು. ಪೊಲೀಸ್ ಇಲಾಖೆ ವತಿಯಿಂದ ಗೌರವ ವಂದನೆ ಸಲ್ಲಿಸಲಾಯಿತು.

ಅಪಘಾತಗಳ ತಡೆಗೆ ಸೂಕ್ತ ಕ್ರಮವಹಿಸಿ

● ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ ● ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

> ಎಲ್ಲೆಲ್ಲಿ ಸುರಕ್ಷತೆ, ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂಬ ಬಗ್ಗೆ ಈಗಾಗಲೇ ಸೂಚಿಸಲಾಗಿದೆ ಇನ್ನೂ ಹೆಚ್ಚಿನ ಸ್ಥಳಗಳಲ್ಲಿ ಮುಂಜಾಗ್ರತಾ ಕ್ರಮ ಹಾಗೂ ವಾಹನಗಳಿಗೆ ಮಾರ್ಗದರ್ಶನ ಫಲಕಗಳನ್ನು ಸ್ಪಷ್ಟವಾಗಿ ಕಾಣುವಂತೆ ಹಾಕಬೇಕಿದೆ. ಅಪಘಾತಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ರಸ್ತೆ ನಿರ್ಮಾಣ ಮಾಡುವ ಪ್ರಾಧಿಕಾರ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು.
>
> –ಡಾ.ಬಿ.ಟಿ.ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಚಾಮರಾಜನಗರ, ಫೆ.21–ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಇನ್ನಿತರ ಮುಖ್ಯ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಗಟ್ಟಲು ಸೂಕ್ತ ಸುರಕ್ಷಾ ಕ್ರಮ ವಹಿಸಲು ಕೂಡಲೇ ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸಬೇಕು. ನಾಮಫಲಕ, ಸೂಚನಾ ಫಲಕ, ಜೀಬ್ರಾ ಕ್ರಾಸಿಂಗ್ ಇರುವ ಕೆಲವು ಕಡೆ ರಸ್ತೆ ಅಗಲೀಕರಣಗೊಳಿಸಿ, ಮಿಡಿಯನ್‌ಗೆ ಬಣ್ಣ ಹಚ್ಚಬೇಕು. ರಸ್ತೆಗಳಲ್ಲಿ ಬ್ಲಾಕ್ ಸ್ಪಾಟ್ ಇರುವ ಕಡೆ ರಸ್ತೆ ಸುರಕ್ಷತೆ ಬ್ಲಿಂಕರ್‌ಗಳನ್ನು ಅಳವಡಿಸಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಜಂಕ್ಷನ್‌ಗಳಲ್ಲಿ ಬರುವ ಕೂಡು ರಸ್ತೆಗಳನ್ನು ಅಭಿವೃದ್ಧಿಪಡಿಸಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ಇಂತಹ ಕೂಡು ರಸ್ತೆಗಳ ಬಳಿ ವಾಹನಗಳ ಸವಾರರಿಗೆ ಯಾವುದೇ ಗೊಂದಲಗಳಾಗಬಾರದು. ವಾಹನಗಳ ಸಂಚಾರಕ್ಕೆ ಸೂಕ್ತ ಮಾರ್ಗದರ್ಶನ ಫಲಕಗಳನ್ನು ಅಗತ್ಯವಿರುವೆಡೆ ಶೀಘ್ರ ಅಳವಡಿಸಬೇಕೆಂದು ತಿಳಿಸಿದರು.

ಪಟ್ಟಣ ವ್ಯಾಪ್ತಿಯಲ್ಲಿ ದ್ವಿಚಕ್ರ ಹಾಗೂ ಇತರೆ ವಾಹನಗಳ ನಿಲುಗಡೆಗೆ ಸೂಕ್ತಪಾರ್ಕಿಂಗ್ ಪಾಯಿಂಟ್‌ಗಳನ್ನು ಗುರುತಿಸಬೇಕು. ಸಾರ್ವಜನಿಕರಿಗೆ ಸಂಚಾರ ನಿಯಮಗಳ ಜಾಗೃತಿ ಮೂಡಿಸಬೇಕು. ಅತಿವೇಗ ಸಂಚಾರ, ಹೆಲ್ಮೆಟ್ ಧರಿಸದೇ ಇರುವುದರಿಂದ ಆಗಬಹುದಾದ ಅನಾಹುತ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಹಿಟ್ ಅಂಡ್ ರನ್ ಪ್ರಕರಣಗಳನ್ನು ಇತ್ಯರ್ಥಪಡಿಸಿ ಬಾಧಿತರಿಗೆ ವಿಮೆ ಪಾವತಿಸುವ ಕಾರ್ಯ ಸಕಾಲದಲ್ಲಿ ಆಗಬೇಕು ಎಂದರು. ಹೆದ್ದಾರಿ ರಸ್ತೆಗಳ ಸೂಕ್ತವಿರುವ ಕಡೆ ಬಸ್ ಸ್ಟಾಪ್‌ಗಳು ನಿರ್ಮಾಣವಾಗಬೇಕು. ಕೆಎಸ್‌ಆರ್‌ಟಿಸಿ, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಮದಿಗೆ ಬಸ್ ಸ್ಟಾಪ್‌ಗಳಿಗೆ ಸ್ಥಳ ಗುರುತಿಸಬೇಕು. ವೈಜ್ಞಾನಿಕವಾಗಿ ಈ ಎಲ್ಲಾ ಕಾರ್ಯಗಳು ಆಗಬೇಕು. ರಸ್ತೆ ಸುರಕ್ಷತಾ ನಿಯಮಗಳು ಕಡ್ಡಾಯವಾಗಿ ಪಾಲನೆಯಾಗುವಂತೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಆದೇಶಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಮಹೇಶ್, ಕೆಶಿಪ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವಿನಾಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೆಂಕಟಲಕ್ಷ್ಮೀ, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಸುಧಾ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಆರ್. ಅಶೋಕ್ ಕುಮಾರ್ ಉಪಸ್ಥಿತರಿದ್ದರು.

ಚಾಮರಾಜನಗರ ವಿವಿ ರದ್ದುಗೊಳಿಸದಂತೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ ವಿವಿ ವಿಲೀನಗೊಳಿಸದಂತೆ ಆಗ್ರಹಿಸಿ ಬಿವಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ಚಾಮರಾಜನಗರ, ಫೆ.21–ಚಾಮರಾಜನಗರ ವಿಶ್ವವಿದ್ಯಾನಿಲಯ ರದ್ದುಗೊಳಿಸದೇ ಮುಂದುವರೆಸಬೇಕು ಎಂದು ಆಗ್ರಹಿಸಿ ಭಾರತೀಯ ವಿದ್ಯಾರ್ಥಿ ಸಂಘ (ಬಿವಿಎಸ್) ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಚಾಮರಾಜೇಶ್ವರ ದೇವಾಲಯ ಆವರಣದಿಂದ ಘೋಷಣಾ ಫಲಕಗಳನ್ನು ಹಿಡಿದು ಮೆರವಣಿಗೆ ಹೊರಟ ನಗರದ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದ ಆವರಣದಲ್ಲಿ ಸಮಾವೇಶಗೊಂಡು, ರಾಜ್ಯ ಸರ್ಕಾರದ ವಿರುದ್ಧ ಕೆಲ ಕಾಲ ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು.

ಬಿವಿಎಸ್ ಜಿಲ್ಲಾ ಸಂಯೋಜಕ ಪರ್ವತ್ ರಾಜ್ ಮಾತನಾಡಿ, ಹಿಂದುಳಿದ ಗಡಿ ಜಿಲ್ಲೆ ಎಂದು ಹಣೆಪಟ್ಟಿ ಹೊತ್ತುಕೊಂಡಿರುವ ಚಾಮ ರಾಜನಗರವನ್ನು ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಮಟ್ಟಕ್ಕೆ ಕೊಂಡೊಯ್ಯಬೇಕು ಎಂಬ ದೃಷ್ಟಿಯಿಂದ ಹಿಂದಿನ ಬಿಜೆಪಿ ಸರ್ಕಾರ ಚಾಮರಾಜನಗರಕ್ಕೆ ಪ್ರತ್ಯೇಕ ವಿವಿ ಮಂಜೂರು ಮಾಡಿದೆ. ಆದರೆ, ಕಾಂಗ್ರೆಸ್ ಸರ್ಕಾರ ಬೀದರ್ ಹೊರತುಪಡಿಸಿ, ಉಳಿದ ಹೊಸ ವಿವಿಗಳನ್ನು ರದ್ದುಪಡಿಸಲು ಮುಂದಾಗಿದೆ ಎಂದು ಆರೋಪಿಸಿದರು. ಚಾಮರಾಜನಗರ ವಿವಿ ರದ್ದುಗೊಳಿಸಲು ಸರ್ಕಾರ ಮುಂದಾದರೆ ಚಾಮರಾಜನಗರ ಜಿಲ್ಲೆಗೆ ಸಿಎಂ ಭೇಟಿ ನೀಡಿದಾಗ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು. ವಿದ್ಯಾರ್ಥಿಗಳ ಜತೆ ದೊಡ್ಡ ಮಟ್ಟದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ವಕೀಲ ಮಹೇಂದ್ರ, ಚಾಮರಾಜನಗರ ಸರ್ಕಾರಿ ಹಾಗೂ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಬಸವಣ್ಣ, ಉಪಾಧ್ಯಕ್ಷರಾಗಿ ನಿಂಗೇಗೌಡ ಆಯ್ಕೆ



ಚಾಮರಾಜನಗರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಹೆಚ್.ಎಂ.ಬಸವಣ್ಣ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾದ ನಿಂಗೇಗೌಡ ಅವರನ್ನು ಬಿಜೆಪಿ ಕಾರ್ಯಕರ್ತರು ಅಭಿನಂದಿಸಿದರು.


ಚಾಮರಾಜನಗರ, ಫೆ.21–ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ (ಪಿಎಲ್‌ಡಿ) ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಹರದನಹಳ್ಳಿ ಕ್ಷೇತ್ರದ ಹೆಚ್.ಎಂ.ಬಸವಣ್ಣ (ಸುಂದ್ರಪ್ಪ), ಉಪಾಧ್ಯಕ್ಷರಾಗಿ ಶಿವಪುರ ಕ್ಷೇತ್ರದ ನಿಂಗೇಗೌಡ ಆಯ್ಕೆಯಾದರು.

ನಗರದ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆವರಣದಲ್ಲಿ ಶುಕ್ರವಾರ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಆಯ್ಕೆ ಚುನಾವಣೆಯಲ್ಲಿ ನಾಮನಿರ್ದೇಶಿತರೊಬ್ಬರು ಸೇರಿ ಒಟ್ಟು 15 ನಿರ್ದೇಶಕರ ಪೈಕಿ ಹೆಚ್.ಎಂ. ಬಸವಣ್ಣ ಹಾಗೂ ನಿಂಗೇಗೌಡ ಅವರಿಗೆ ತಲಾ 10 ಮತಗಳು ಬಂದರೆ, ಕಾಂಗ್ರೆಸ್ ಬೆಂಬಲಿತ ರವಿ ಹಾಗೂ ಗೋವಿಂದಶೆಟ್ಟಿ ಅವರಿಗೆ ತಲಾ 5 ಮತಗಳು ಬಂದವು. ನಂತರ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಚುನಾವಣಾಧಿಕಾರಿ ಪಿ.ಶೋಭಾ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಘೋಷಿಸಿದರು.

ಇದೇ ವೇಳೆ ಅಧ್ಯಕ್ಷ ಹೆಚ್.ಎಂ.ಬಸವಣ್ಣ ಮಾತನಾಡಿ, ತಮ್ಮ ಅಧಿಕಾರಾವಧಿಯಲ್ಲಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಕಾಲಕ್ಕೆ ಸಾಲಸೌಲಭ್ಯ, ಸರ್ಕಾರದಿಂದ ಮಂಜೂರಾಗುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ವಿತರಿಸಲು ಕ್ರಮವಹಿಸಲಾಗುವುದು. ಬ್ಯಾಂಕ್ ಅನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಅಧ್ಯಕ್ಷ ಹೆಚ್.ಎಂ.ಬಸವಣ್ಣ, ಉಪಾಧ್ಯಕ್ಷ ನಿಂಗೇಗೌಡ ಅವರನ್ನು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಅಭಿನಂದಿಸಿದರು. ನಿರ್ದೇಶಕರಾದ ಹೆಚ್.ಎಂ.ಬಸವಣ್ಣ, ಬಿ.ಮಹದೇವಪ್ಪ ಮಹದೇವನಾಯಕ್, ಎ.ದೊರೆಸ್ವಾಮಿ, ರೇವಣ್ಣ ಎಂ.ಎಲ್, ನಿಂಗೇಗೌಡ, ನಂದೀಶ್, ಪಿ.ಶ್ರೀಕಂಠಪ್ರಸಾದ್, ಜಿ.ಪ್ರವೀಣ್‌ನಾಯ್ಕ, ಜ್ಯೋತಿ, ಮಾದಲಾಂಬಿಕೆ, ಬಸುಮರಿ ಬಿ.ಎನ್.ಶಂಕರಮೂರ್ತಿ ಹಾಗೂ ಗೋವಿಂದಶೆಟ್ಟಿ, ಬಿಜೆಪಿ ಮುಖಂಡರಾದ ಎಂ.ರಾಮಚಂದ್ರ, ನಿಜಗುಣ ರಾಜು, ವೃಷಭೇಂದ್ರಪ್ಪ, ಸಿ.ಎನ್.ಬಾಲರಾಜು, ಹೆಚ್.ಎಸ್.ಬಸವರಾಜು, ಗಣೇಶ್ ದೀಕ್ಷಿತ್, ದೊರೆಸ್ವಾಮಿ, ಕುಮಾರ್ ಇತರರು ಹಾಜರಿದ್ದರು.

ಬಿಳಿಗಿರಿರಂಗನಬೆಟ್ಟದಲ್ಲಿ ಕುಡಿಯುವ ನೀರಿನ ಘಟಕ ಉದ್ಘಾಟನೆ



ಬಿಳಿಗಿರಿರಂಗನಬೆಟ್ಟದ ಬಿಳಿಗಿರಿ ಭವನದ ಬಳಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಯಳಂದೂರು, ಫೆ.21–ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ವೋಲ್ವೋ ಕಂಪನಿ ವತಿಯಿಂದ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಸಿಎಸ್‌ಆರ್ ಫಂಡ್‌ನಿಂದ ಕಂಪನಿಗಳಿಗೆ ಬರುವ ಆದಾಯದ ಶೇ.2 ರಷ್ಟನ್ನು ಇಂತಹ ಸಮಾಜಮುಖಿ ಕಾರ್ಯಗಳಿಗೆ ದಾನವಾಗಿ ನೀಡಬೇಕೆಂಬ ನಿಯಮ ಜಾರಿಗೊಳಿಸಲಾಗಿತ್ತು. ದೇಶದಲ್ಲಿ 2023–24ನೇ ಸಾಲಿನಲ್ಲಿ 29 ಸಾವಿರ ಕೋಟಿ ರೂ. ಇದಕ್ಕೆ ಬಳಕೆಯಾಗಿರುವ ಮಾಹಿತಿ ಇದೆ. ಬೆಟ್ಟದಲ್ಲಿ ವೋಲ್ವೋ ಕಂಪನಿಯವರು ಶುದ್ಧ ಕುಡಿಯುವ ನೀರಿನ ಘಟಕವನ್ನು ಇದೇ ಯೋಜನೆಯಡಿ ನಿರ್ಮಿಸಿದ್ದಾರೆ ಎಂದರು.

ಬೆಟ್ಟದ ಮೆಟ್ಟಿಲು ನಿರ್ಮಾಣ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳ 4 ಕೋಟಿ ರೂ. ವಾಪಸ್ಸಾಗಿತ್ತು. ಮತ್ತೆ ಈ ಹಣವನ್ನು ವಾಪಸ್ ತಂದು ಅಭಿವೃದ್ಧಿ ಕೆಲಸಗಳಿಗೆ ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇಲ್ಲಿ ಸುಸಜ್ಜಿತ ದಾಸೋಹ ಭವನ, ಕಮರಿಯ ಅಭಿವೃದ್ಧಿ, ಪಾತ್ ವೇ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ವೋಲ್ವೋ ಕಂಪನಿಯ ಸಿಎಸ್‌ಆರ್ ವಿಭಾಗದ ನಿರ್ದೇಶಕ ಜಿ.ವಿ.ರಾವ್ ಮಾತನಾಡಿ, ಬಿಳಿಗಿರಿಂಗನಬೆಟ್ಟದಲ್ಲಿ ಕಂಪನಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಈಗಾಗಲೇ ಕಂಪನಿ ವತಿಯಿಂದ 33 ಘಟಕಗಳನ್ನು ನಿರ್ಮಿಸಲಾಗಿದೆ. ಮಹದೇಶ್ವರಬೆಟ್ಟದಲ್ಲಿ ಮತ್ತೊಂದು ನೀರಿನ ಘಟಕ ನಿರ್ಮಿಸಲಾಗುವುದು ಎಂದು ಮಾಹಿತಿ ನೀಡಿದರು.

ಇದೇ ವೇಳೆ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಗ್ಯಾರಂಟಿ ಯೋಜನೆ ಅನುಷ್ಠಾನ ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಗ್ರಾಪಂ ಉಪಾಧ್ಯಕ್ಷೆ ಕಮಲಮ್ಮ, ಪ್ರಜ್ವಲ್ ಟ್ರಸ್ಟ್‌ನ ಅನಂತ್, ದೇಗುಲದ ಇಓ ಮೋಹನ್ ಕುಮಾರ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಕೇತಮ್ಮ ಗುಂಬಳ್ಳಿ ರಾಜಣ್ಣ ಸಿದ್ದರಾಜು, ವೆಂಕಟರಾಮು, ವಿ.ನಾರಾಯಣಸ್ವಾಮಿ, ಸುರೇಶ್, ಎಸ್.ರವಿಕುಮಾರ್, ಪಿಎಸ್‌ಐ ಹನುಮಂತ ಉಪ್ಪಾರ್, ವೆಂಕಟೇಶ್, ನಿವೃತ್ತ ಶಿಕ್ಷಕ ಲಿಂಗರಾಜು, ರೂಪೇಶ್, ಸತೀಶ್ ಇದ್ದರು.

ಇಂದು ವಿವಿ ಅಭಿಯಾನ

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ರದ್ದುಗೊಳಿಸಬಾರದು, ಜಿಲ್ಲೆಯ ಶೈಕ್ಷಣಿಕ ದೃಷ್ಟಿಯಿಂದ ಅದನ್ನು ಉಳಿಸಬೇಕು ಎಂದು ಆಗ್ರಹಿಸಿ ಫೆ.22ರಂದು ನಗರದ ಕರಿನಂಜನಪುರ ರಸ್ತೆಯಲ್ಲಿರುವ ಅಂಬೇಡ್ಕರ್ ಭವನದಲ್ಲಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಪ್ರಗತಿಪರ ಸಂಘಟನೆಗಳ ವತಿಯಿಂದ 'ಚಾಮರಾಜನಗರ ವಿಶ್ವವಿದ್ಯಾನಿಲಯ ಉಳಿಸಿ ಅಭಿಯಾನ' ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಮಹಾಸಭೆ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿರುವ ವಿವಿ ಉಳಿಸುವ ಅಭಿಯಾನಕ್ಕೆ ವಿವಿಧ ಸಂಘ ಸಂಸ್ಥೆಗಳ ಮುಖಂಡರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ನಿಜಧ್ವನಿ ಗೋವಿಂದರಾಜು, ಸಿದ್ದಾರ್ಥ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ, ಗೌರಿಶಂಕರ್, ರಾಜಣ್ಣ, ಕೆಂಪರಾಜು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
West facing (30x40) Near Christ Public School
9980275884

ಬೇಕಾಗಿದ್ದಾರೆ
Pre-Kg ಮತ್ತು 3rd Std ಮಕ್ಕಳಿಗೆ ವಿಜಯನಗರ 4th Stage ಮನೆಗೆ ಬಂದು Tuition ಮಾಡಲು Teachers ಬೇಕಾಗಿದ್ದಾರೆ.
ಮನೆ ಕೆಲಸ ಮಾಡಲು ಬೇಕಾಗಿದ್ದಾರೆ.
7975269652

MUDA APPROVED 30X40 SITE FOR SALE
@ BVL Premia Reddy Layout T.Narasipura Road
Price : Rs.4900 Sqft
9108759569

Running CAR WASH Unit FOR RENT
with all equipment in Saraswathipuram
Mob: 94483 90745

WANTED TEACHERS
Baby Sitting LKG to UKG TEACHERS :- 05
Mob : 8105586679

ಬಾಡಿಗೆಗೆ ದೊರೆಯುತ್ತದೆ
100x40, 1st ಫ್ಲೋರ್ ಕಮರ್ಷಿಯಲ್ ಜಾಗ, ಲಕ್ಷ್ಮೀಪುರಂ, ಮೈಸೂರು.
Mob: 8892835885

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಎಲ್ಲಾ ತರಹದ ಕಾರ್‌ಗಳನ್ನು ರಿಪೇರಿ ಮಾಡಲು ಮೆಕಾನಿಕ್ ಬೇಕಾಗಿದ್ದಾರೆ ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಕಪಾಲಿ ಕಾರ್ ಕೇರ್, ವಸಂತನಗರ, ಮೈಸೂರು
9739826533, 9141345554

REQUIRED FOR A REPUTED DISTRIBUTOR COMPANY IN HEBBAL INDUSTRIAL AREA
MARKETING EXECUTIVES - 3NOS MALE CANDIDATES
(Must have Knowledge about Industries Products)
Education: Dip in Mech/Bsc
Salary: 15K to 25K (Based on Exp)
9972029007

ಬೇಕಾಗಿದ್ದಾರೆ
ಮೈಸೂರಿನ ಬಲ್ಲಾಳ್ ಸರ್ಕಲ್ ಬಳಿ ಇರುವ ರೆಸ್ಟೋರೆಂಟ್‌ಗೆ ನುರಿತ ದೋಸೆ ಮಾಸ್ಟರ್ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು. ಸಂಪರ್ಕಿಸಿ:
9900661620

GOKULAM RESTAURANT
Most Affordable VEG & Non Veg Restaurant in Vontikoppal and Gokulam
38/3, 1st main, VV Mohalla Opp. Nirmala Convent.
Speciality in Cakes, Since 1988
7899729892


ಮಾರುತಿ ಟ್ಯೂಬ್ ವೆಲ್ಸ್ (ರಿ)
ಬೋರ್‌ವೆಲ್ ಡ್ರಿಲ್ಲಿಂಗ್ @ ಸಿಟಿ - ₹75/- ಗ್ರಾಮೀಣ - ₹85/-
8184000444

ಮನೆ ಮಾರಾಟಕ್ಕಿದೆ
ಅಳತೆ 19x42 # 1926/K25, ಹಲ್ಲಿನ ಬೀದಿ ಅಗ್ರಹಾರ, ವಾಣಿ ವಿಲಾಸ ಮಾರ್ಕೆಟ್ ಹಿಂಭಾಗ
9980661768

LION'S FEST-2025 ಲಯನ್ಸ್ ಸಾಂಸ್ಕೃತಿಕ ಉತ್ಸವ
ದಿನಾಂಕ 15/03/2025ರ ಶನಿವಾರ ಸಂಜೆ 6.00ಗಂಟೆಗೆ ... ಲಯನ್ಸ್ ಕಿಲಾಡಿಗಳು ... stand up comedy ...
Dance Groups From Colleges are Welcome
Call - 9886697052

RENT
2 BHK HOUSE FOR RENT, AT PRITHVI PALACE APARTMENT, T.NARASIPURA MAIN ROAD, K C LAYOUT MYSORE.
CONTACT: 94480 81434

Nypunya School of Excellence
Dattagalli (CBSE) and R.T.Nagar (ICSE)
ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಲು ಅನುಭವಿ ಪುರುಷ/ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 70228 49855, 72046 32092
2) ಆಯಾ/ಅಟೆಂಡರ್ ಕೆಲಸ ಮಾಡಲು ...
ಸಂಪರ್ಕಿಸಿ : 90088 21772

SK CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕನಸಿನ ಮನೆ 3D Plan ನಲ್ಲಿ ಹೊಸ ಮನೆ ಮತ್ತು Altration Work ಮಾಡಿಕೊಡುತ್ತೇವೆ.
9620528490

ಸುವರ್ಣ ಯಾತ್ರಾ
9 ದಿನಗಳ ನೇಪಾಳ ಪ್ರವಾಸ 15/3/25, 9 ದಿನಗಳ ವೈಷ್ಣೋದೇವಿ ಮತ್ತು ಕಾಶ್ಮೀರ ಪ್ರವಾಸ 1/4/25, 14 ದಿನಗಳ ಚಾರ್ ಧಾಮ್ ಪ್ರವಾಸ 2/5/25
9019462508
6360146483

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

rapido ಬೇಕಾಗಿದ್ದಾರೆ
ರ್‍ಯಾಪಿಡೋ ಬೈಕ್ ಟ್ಯಾಕ್ಸಿ ಕ್ಯಾಪ್ಟನ್ ಆಗಿ ಸೇರಿ ದಿನಕ್ಕೆ 1000/- ವರೆಗೆ ಗಳಿಸಿ ಅಗತ್ಯವಿರುವ ದಾಖಲೆಗಳು RC, DL, Android ಮೊಬೈಲ್ ಆಧಾರ್/ Pan ಕಾರ್ಡ್, ಸಂಪರ್ಕಿಸಿ:
04048937617

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
9611028523 9343142258

ಸೈಟುಗಳು ಮಾರಾಟಕ್ಕೆ
ತಳೂರು ಸರ್ಕಲ್ ಬಳಿ ಡಿ.ಟಿ.ಸಿ.ಪಿ. ಅನುಮೋದಿತ 40x60 ದಕ್ಷಿಣ ದಿಕ್ಕಿನ ನಿವೇಶನಗಳು ಮಾರಾಟಕ್ಕಿವೆ. ಬೆಲೆ–1200/– ಚ.ಅಡಿ.
8197850616

SITE AVAILABLE
East Facing 30X40 Site is available Near bilikere, Mysore Next to silent zone hotel Highway attached
8762516100

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ಚಿಪಿನಗರ. ವಿದ್ಯಾರ್ಹತೆ : SSLC PASS or Fail
9538886328

ಹೊಸ ಮನೆ ಮಾರಾಟಕ್ಕಿದೆ
20x30 N/F 45 Lakhs ಗುರೂರು 4ನೇ ಬ್ಲಾಕ್, ಮೈಸೂರು AC, TV, Fridge, Solar, Washing Machine, 2 bed, 2 cot, fully ಅಡಿಗೆ ... ಮನೆ.
Mob: 9379056972

SITE FOR SALE
40x60 North Roopa Nagar
Mob: 9880273834

ಸ್ಫೂರ್ತಿಧಾರೆ ಸರ್ವೀಸ್
ಸಂಪು, ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಕಮರ್ಷಿಯಲ್ ಲ್ಯಾಂಡ್ ಮಾರಾಟಕ್ಕಿದೆ
ನಂಜನಗೂಡು, ಚಾಮರಾಜನಗರ 150ಅ ಹೈವೇ ಬದಿಯಲ್ಲಿ ಇಂಡಸ್ಟ್ರಿಯಲ್ ಏರಿಯಾ ದಿಂದ 500 ಮೀಟರ್ ದೂರ ಇರುವ ಹೈವೆ ರಸ್ತೆಯಲ್ಲಿ 21780 ಚದರ ಅಡಿ (20 ಗುಂಟೆ) ಆಲಿನೇಷನ್ ಆಗಿರುವ ಜಮೀನು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
9620495333, 9972596865

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

KSHATRIYA MOTORS
WE ARE HIRING
JOB POSITIONS
MARKETING TEAM LEADERS / SALES EXECUTIVES
LOCATION: MYSORE, KODAGU, CHAMARAJANAGARA, RAMANAGARA, MANDYA,
SEND YOUR CV TO :kshatriyaforcesales@gmail.com

0821-2404555,9632263202

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ TVS FACTORY ಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗೆ ಸಂಬಳ: 17500 26 Days (8 hours) ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
9620777819
9620667819

ಸ್ಕಂದ ಪ್ರಾಪರ್ಟೀಸ್ SKANDA PROPERTIES
Building Construction, Online Plan Approval, Building Plan & Design, Bank Loan Assistance, Site Supervision, Real Estate (Buy/Sale: House, Land & Site)
Ph : 9379888558

R S CONSTRUCTION ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

SITE FOR SALE
20/30 MUDA Site For Sale In Dattaghalli Near Triveni Circle Mysore
20/30,30/40, Sites For Sale Near Brahamaramba Choultry Vivekananda Nagara Mysore
PH: 9900464111

SITE FOR SALE
30x40 North Gayathri Layout
Mob: 9880273834

ಬೇಕಾಗಿದ್ದಾರೆ
ಫರ್ನಿಚರ್ ಶೋರೂಂಗೆ ಸೇಲ್ಸ್ – 2 ಹುದ್ದೆ (ಸೇಲ್ಸ್ ಅನುಭವ ಇರಬೇಕು) ಹೆಲ್ಪರ್ – 2 ಹುದ್ದೆ ಡ್ರೈವರ್ – 2 ಹುದ್ದೆ
Mob: 9611417014

NEW HOUSE FOR SALE
20x30 N/F Ground Floor, Roopa Nagara, 2nd Stage
9900111935
6362800658

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ವರುಣ/ವಾಜಮಂಗಲ/ ಜೆಎಸ್‌ಎಸ್/ಬಸವೇಶ್ವರ/ ನಿರ್ಮಾಣ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ/ಬನ್ನೂರು ರಸ್ತೆ
9686071750

HOUSE FOR SALE
30x40, N/F, 2 BHK, 3 Floors @ Vijayanagar 4th Stage, 2nd Phase, near Marimallappa School, Mysore.
9845814353, 9071219453

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

VILLA PLOTS FOR SALE
30X40 & 30X50
READY FOR CONSTRUCTION
Beside Narayan Guru Nagara, Bogadi-Gaddige Road, Mysore
Site Visit Call Now
MCIL 88614 40528 97314 00249
www.mcil.in

PAY 30 LAKHS & OWN YOUR DREAM HOME
Rest with Easy EMI
Vastu & Architectural Built
20X30 North Facing
3 BHK Duplex
4 BHK Triplex
Fully Furnished, Ready to Move in
50 Mtrs from Ring Road, Next to Police Layout
98800 65122 / 76193 99919

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು 1) ಹರ್ಷ ರೋಡ್ 2) ನಜರ್‌ಬಾದ್ 3) ಪಡುವಾರಹಳ್ಳಿ 4) ಹೆಬ್ಬಾಳ್ ಉಚಿತ ಊಟ/ ESI/PF/Good Salary
9686422400
9242406261

SITE FOR SALE
Jnanbharathi Layout Near Dadadahalli Corner & East Facing Sites MUDA KHATA and E-Khata ready. call:
9342123373


V-GUARD Solar Water Heater SALES & SERVICE, BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಉದ್ಯೋಗ ಅವಕಾಶ
ಬಂಡಿ ಪಾಳ್ಯ ಕೆಲಸ (ಹಾರ್ಡ್‌ವೇರ್ ಅಲ್ಲ) ಪ್ರತಿಷ್ಠಿತ MNC ಹಾಗೂ IT ಕಂಪನಿಯಲ್ಲಿ 4th, SSLC, PUC, ITI, Any Degree ಪಾಸ್/ ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ಸೌಲಭ್ಯ ... ಸಂಬಳ - ರೂ. 15200 - 86,100
7337645977, 7892046990

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

Pavaman Innovative School
TEACHERS REQUIRED
Nursery: 2, Primary School: 4 (All Subjects). Qualification: NST / D.Ed, B.Ed, B.Sc, M.Sc, BA, MA. English communication, computer knowledge is a must. #105/3, 7th Cross, 3rd Main, B.M. Shree Nagara, Metagalli, Mysore, Karnataka.
8197695840, 8431891316

Wanted 30x40 Site
We would like to buy 30x40 East or North facing site in INFOCITY Near Infosys, KBL SILICON CITY , Mysore.
7676439578, 8884616461

ಕಳೆದಿದೆ
KM ಪಾಲಾಕ್ಷ S/o ಮರೀಗೌಡರವರ Site No.208, ಮುಡಾ ಲಲಿತಾದ್ರಿನಗರ ಈ ಸ್ವತ್ತಿನ ಮೂಲ ಕ್ರಯಪತ್ರ ಕಳೆದು ಹೋಗಿರುತ್ತದೆ ಸಿಕ್ಕಿದವರು ತಲುಪಿಸಬೇಕಾಗಿ ಅಥವಾ ಕೆಳಗಿನ ನಂಬರಿಗೆ ಕರೆ ಮಾಡಿ ತಿಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.
9448739242

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

30x40 site for sale
Site for sale in Vishwaprajna attached layout in Hale Kesare, Mysore. Just 7 km from Mysore City bus stop. Just 2 km from Manipal Hospital. Price is 36 lakh.
8884616461, 9591544080

SITES WANTED
Vijayanagara, Yelwala, Mys-Hunsur Road, Brahmin's Layout, Mandakalli, Kadakola, TVS Factory surroundings. Quick Regn.
Mob: 93421-25252

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು Ex-Service Man - 35,000 - 26 days Civil Gunman - 30,000 - 26 days ವಯಸ್ಸು: 25 ರಿಂದ 55 ವಿದ್ಯಾರ್ಹತೆ: SSLC, PUC, Any Degree pass ESI-PF, Bonus ಸೌಲಭ್ಯವಿರುತ್ತದೆ.
9880116412, 9741300222

SITE FOR SALE
(30x40) "Olive Enclave" (Near Manuganahally) Mys-Hunsur Highway 9 km from Ring Road. DTCP Approved Rs. 15 Lakhs
Mob: 95388-39926

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
60x80 W/F SUNCITY Homes Layout Seegally Road Attach 1500/- (Negotiable)
9019746369

40X60 SITE FOR SALE
KBL GARDENIA MS Ramaiah Layout Vijayanagar 4th Stage & Mysore ilvala
8050245332

ಬೇಕಾಗಿದ್ದಾರೆ
ಮೈಸೂರಿನ ರಾಜರಾಜೇಶ್ವರಿ – ಶಾರದ ದೇವಿ ನಗರದ (ರಿಂಗ್ ರೋಡ್ ರಸ್ತೆ) ಹತ್ತಿರದ ಹೆಸರಾಂತ ಹೋಟೆಲ್ ಒಂದರಲ್ಲಿ ಕೆಲಸ ಮಾಡಲು ಓದು ಬರಹ ತಿಳಿದಿರುವ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ. ಸಂಪರ್ಕಿಸಿ:
9900212487, 9113654639

30x40 W/F SITE @ Rs.16 LAC
DTCP approved layout Bank Loan available. Ready to Register. Next to Marashettyhalli, Behind Chamundi Hill
Call: 9538583377

ಮನೆ ಮಾರಾಟಕ್ಕಿದೆ
ಮೈಸೂರು ಸಿಟಿ ಮಧುರ ನಗರ, ಮೇಟಗಳ್ಳಿ ಬಡಾವಣೆಯಲ್ಲಿರುವ 60x40 ಅಳತೆಯ ಮನೆ ಮಾರಾಟಕ್ಕಿದೆ.
8296698277
9663393580

COMMERCIAL property for sale
in Beerihundi Circle 2024 sq. meter (20 guntas).
Mob: 9740899516

SITE FOR SALE
60X40 S/F ROOPANAGAR, BOGADI 98 LAKHS FINAL
9742421313
9945779947

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು ಪಂ.ಪ್ರಮೋದ್ ಗುರೂಜಿ
84314 66891
ಇದರಲ್ಲಿ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯವಹಾರ, ಪ್ರೇಮ, ವಿವಾಹ, ಸಂತಾನ, ... ಸಮಸ್ಯೆಗಳಿಗೆ ಪರಿಹಾರ ...

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಯುವತಿಯರು ಬೇಕಾಗಿದ್ದಾರೆ. ಸಂಬಳ 8 ರಿಂದ 10 ಸಾವಿರ ಸಂಪರ್ಕಿಸಿ:
9379931883
8123771883

ಬೇಕಾಗಿದ್ದಾರೆ
ಮೈಸೂರಿನ ವಿವೇಕಾನಂದ ಸರ್ಕಲ್‌ನಲ್ಲಿರುವ ಕಾವೇರಿ ಫರ್ನಿಚರ್ & ಎಲೆಕ್ಟ್ರಾನಿಕ್ ಶೋರೂಂನಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಮ್ಯಾನ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
9980556642

ತಕ್ಷಣ ಬೇಕಾಗಿದ್ದಾರೆ
Medical Shopನಲ್ಲಿ PHARMA AIDE ಆಗಿ ಕೆಲಸ ಮಾಡುವವರು Exp : 2-15 Yrs Location: Bogadi
9880587586

ಮನೆ ಮಾರಾಟಕ್ಕಿದೆ
23x30 ದಕ್ಷಿಣ ದಿಕ್ಕು ಕೆಳಮಹಡಿ & ಮೊದಲ ಮಹಡಿ ಕುವೆಂಪುನಗರ 'M' ಬ್ಲಾಕ್ ಮನೆ ನಂ. 506, (ಹೆಳೆಮನೆ)
9663906666

ಜಮೀನುಗಳು ಮಾರಾಟಕ್ಕಿವೆ
ಮೈಸೂರು ತಾ. ಜಯಪುರ ಹೋ. ಹತ್ತಿರದ ಮುಖ್ಯರಸ್ತೆಯಲ್ಲಿ 9 ಗುಂಟೆ ... 12 ಗುಂಟೆ ... 32 ಗುಂಟೆ ಮತ್ತು 25 ಗುಂಟೆ ... 19 ಗುಂಟೆ 1 ಎಕರೆ 4 ಗುಂಟೆ ... 20 ಗುಂಟೆ 3 ಎಕರೆ 7 ಗುಂಟೆ ... ರಿಂಗ್ ರಸ್ತೆಯ ಹತ್ತಿರದಲ್ಲಿ ಮತ್ತು ಸೈಟ್ ಲ್ಯಾಟ್ ಸೀಟ್ ಬಡಾವಣೆಗಳು ಇರುತ್ತದೆ.
9945661696
9742666049,9663793666

ಸೈಟುಗಳು ಮಾರಾಟಕ್ಕಿವೆ
ದಟ್ಟಗಳ್ಳಿ ಅಟ್ಯಾಚ್ 40x60 ದಕ್ಷಿಣ ದಿಕ್ಕು ಚದುರ ಅಡಿಗೆ ಬೆಲೆ ರೂ.4900/– ಮತ್ತು ದಟ್ಟಗಳ್ಳಿ 'ಜೆ' ಬ್ಲಾಕ್ ನಲ್ಲಿ 20x30 ಉತ್ತರ ದಿಕ್ಕು ಎದುರುಗಡೆ ಪಾರ್ಕ್ ಇದೆ ಸೈಟು ಮಾರಾಟಕ್ಕಿವೆ.
9663793666

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಸಂಬಳ 10,000) (Incentives)
Field Executives ಬೇಕಾಗಿದ್ದಾರೆ. (ಸಂಬಳ: 15000) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
8150005111

SHARE MARKET
ಟ್ರೇಡಿಂಗ್ ಮಾಡುವುದನ್ನು ಹೇಳಿ ಕೊಡಲಾಗುವುದು, ತಿಂಗಳಿಗೆ 10,000 ರಿಂದ 20,000 ಸಾವಿರ ರೂಪಾಯಿ ಸಂಪಾದಿಸಬಹುದು.
8660734351

ಸೈಟುಗಳು ಮಾರಾಟಕ್ಕಿದೆ
20x30 E/F 30x40 W/F ನಾರಾಯಣಗುರು ನಗರ, ಕುಮಾರಬೀಡು (ದೀಪಾ ಹೌಸ್ ಸೊಸೈಟಿ)
9742421313
9945779947

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮಾ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡಬಹುದಾಗಿದೆ. ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಹತ್ತ, ಮೈಸೂರು
9916908454

LIFE PARTNER ಆಗಲು ಶ್ರೀಮಂತ ವಧುವಿಗೆ ವರ ಬೇಕಾಗಿದ್ದಾರೆ.
ಲಿಂಗಾಯತ Age: 49/5.6 ಡಾಕ್ಟರೇಟ್ ಪದವೀಧರ Indendent & Well Settled 5 ಲಕ್ಷಕ್ಕಿಂತ ಅಧಿಕ ಆದಾಯ ... (ಸರಳ ವಿವಾಹಕ್ಕೆ ಆದ್ಯತೆ)
9742458242

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಇಲ್ಲವೇ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸ್ಮಶಾನ ಕಲ್ಪಿಸುವುದಾಗಿ ಉಪವಿಭಾಗಾಧಿಕಾರಿ ಭರವಸೆ ಹಿನ್ನೆಲೆ

ಮಾದಿಗ ಸಮುದಾಯದ ಅನಿರ್ದಿಷ್ಟಾವಧಿ ಪ್ರತಿಭಟನೆ ಅಂತ್ಯ

ತಿ.ನರಸೀಪುರ, ಫೆ.21– ಮಾದಿಗ ಸಮುದಾಯದವರ ಶವ ಸಂಸ್ಕಾರಕ್ಕೆ ಸ್ಮಶಾನ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಬನ್ನೂರು ಪುರಸಭೆ ಎದುರು ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆ ಉಪ ವಿಭಾಗಾಧಿಕಾರಿಗಳು ತಿಂಗಳೊಳಗೆ ಸ್ಮಶಾನ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸಮುದಾಯದ ಮುಖಂಡರು ಪ್ರತಿಭಟನೆ ಅಂತ್ಯಗೊಳಿಸಿದರು.

ಬನ್ನೂರಿನ ಸುಭಾಷ್ ನಗರ ಸೇರಿದಂತೆ ತಾಲೂಕಿನಲ್ಲಿ ಮಾದಿಗ ಸಮುದಾಯ ವಾಸಿಸುವ ವಿವಿಧ ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ನಿನ್ನೆಯಿಂದ(ಗುರುವಾರ) ಪುರಸಭೆ ಎದುರು ಮಳವಳ್ಳಿ ಆದಿಜಾಂಬವ ವಿಚಾರ ವೇದಿಕೆ, ಕರ್ನಾಟಕ ರಾಜ್ಯ ಡಾ.ಎನ್.ಮೂರ್ತಿ ಸ್ಥಾಪಿತ ದಲಿತ ಸಂಘರ್ಷ ಸಮಿತಿ, ತಾಲೂಕು ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘ ಹಾಗೂ ಸುಭಾಷ್ ನಗರದ ನಿವಾಸಿಗಳು ಮಲಿಯೂರು ಶಂಕರ್ ಮತ್ತು ಪುರಸಭೆ ಸದಸ್ಯ ಶಿವಣ್ಣ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದರು.

ಶುಕ್ರವಾರ ಗ್ರಾಮದಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ಯುವಕ ಮೃತಪಟ್ಟ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಪ್ರತಿಭಟನೆ ಮತ್ತಷ್ಟು ತೀವ್ರಗೊಳಿಸಿ, ಶವವನ್ನು ಕಾವೇರಿ ಸರ್ಕಲ್‌ನಲ್ಲಿ ಹೂಳಬಹುದೆಂಬ ಆತಂಕದಿಂದ ಸ್ಥಳಕ್ಕೆ ಭೇಟಿ ನೀಡಿದ ಉಪ ವಿಭಾಗಾಧಿಕಾರಿ ರಕ್ಷಿತ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್



ಪ್ರತಿಭಟನಾ ಸ್ಥಳಕ್ಕೆ ಎಸಿ ರಕ್ಷಿತ್ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮೇಗೌಡ ಪ್ರತಿಭಟನಾ ನಿರತರ ಸಮಸ್ಯೆ ಆಲಿಸಿದರು.

ಬನ್ನೂರು ಪುರಸಭಾ ಸದಸ್ಯ ಬಿ.ಶಿವಣ್ಣ ಮಾತನಾಡಿ, ಮಾದಿಗ ಸಮಾಜದ ಸ್ಮಶಾನಕ್ಕಾಗಿ ಪ್ರತಿಭಟನೆ, ರಸ್ತೆ ತಡೆ ನಡೆಸಿ ತಹಸೀಲ್ದಾರ್, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪರಿಹಾರ ದೊರಕಿಲ್ಲ. ಮಾದಿಗ ಸಮುದಾಯ ಎಂಬ ಕಾರಣಕ್ಕೆ ಅಧಿಕಾರಿಗಳು ಅಸಡ್ಡೆಯಿಂದ ವರ್ತಿಸುತ್ತಿದ್ದಾರೆ. ಸಚಿವ ಮಹದೇವಪ್ಪ ಜಿಲ್ಲಾಡಳಿತಕ್ಕೆ ಸಮಸ್ಯೆ ಬಗೆಹರಿಸುವಂತೆ ಆದೇಶಿಸಿದ್ದರೂ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಸುಭಾಷ್ ನಗರ ನಿವಾಸಿಗಳ ಸ್ಮಶಾನ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆಗೆ 26 ಲಕ್ಷ, ಸ್ಮಶಾನದ ಅಭಿವೃದ್ಧಿಗೆ 20 ಲಕ್ಷ ಹಾಗೂ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಂಕ್ರೀಟ್ ಮಾಡಲು 16.50 ಲಕ್ಷ ರೂ.ಗಳನ್ನು ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡಿದ್ದರೂ ಅಧಿಕಾರಿಗಳ ನಿರ್ಲಕ್ಷದಿಂದ ದಲಿತರಿಗೆ ಶವ ಸಂಸ್ಕಾರಕ್ಕೆ ತೊಂದರೆ ಎದುರಾಗಿದೆ ಎಂದು ಆರೋಪಿಸಿದರು.

ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಮಾತನಾಡಿ, ತಾಲೂಕಿನ 30 ಗ್ರಾಮಗಳಲ್ಲಿ 24 ಸಾವಿರಕ್ಕೂ ಹೆಚ್ಚು ಮಾದಿಗ ಸಮಾಜದವರಿದ್ದು, 13 ಹಳ್ಳಿಗಳಲ್ಲಿ ಸ್ಮಶಾನವಿಲ್ಲ. ಸ್ಮಶಾನ ನೀಡುವಂತೆ ಆಗ್ರಹಿಸಿ 35 ವರ್ಷಗಳಿಂದಲೂ ಸತತವಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ. ಆದರೆ ಜಿಲ್ಲಾಡಳಿತ ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ. ಹಾಗಾಗಿ ಮುಂದೆ ಸ್ಮಶಾನಗಳಿಲ್ಲದ ಗ್ರಾಮಗಳಲ್ಲಿ ಸಾವು ಸಂಭವಿಸಿದರೇ ಅಧಿಕಾರಿಗಳಿಗಾಗಲೀ, ಸರ್ಕಾರಕ್ಕಾಗಲೀ ಮನವಿ ಸಲ್ಲಿಸದೇ ನೇರವಾಗಿ ಹೆಣ ಹೊತ್ತು ತಂದು ತಾಲೂಕು ಕಚೇರಿ ಮುಂದೆ ಶವ ಸಂಸ್ಕಾರ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದರೂ ಸಹ ಸ್ಮಶಾನ ಕಲ್ಪಿಸಲು ಉದಾಸೀನ ತೋರುತ್ತಿದೆ ಎಂದು ಆರೋಪಿಸಿದರು.

ಎಸಿ ರಕ್ಷಿತ್ ಮಾತನಾಡಿ ಯಾವುದೇ ಭೂ ಸ್ವಾಧೀನಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಲು ವರ್ಷಾನುಗಟ್ಟಲೆ ಸಮಯ ಬೇಕಾಗುತ್ತೆ ಆದರೆ ಸಚಿವ ಮಹದೇವಪ್ಪನವರು ಕೇವಲ 1 ತಿಂಗಳಲ್ಲಿ 60 ಲಕ್ಷ ರೂ. ರಿಲೀಸ್ ಮಾಡಿದ್ದಾರೆ. ನೋಟಿಫಿಕೇಷನ್ ಆಗಿದೆ. 15 ದಿನ ನೋಟಿಸ್ ಅವಧಿ ಇರುತ್ತದೆ. ನೋಟೀಸ್ ಪೀರಿಯಡ್ ಮುಗಿಯುತ್ತಿದ್ದಂತೆ ಸ್ಮಶಾನ ಅಭಿವೃದ್ಧಿ ಕಾಮಗಾರಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆರಂಭಗೊಳ್ಳಲಿದೆ. ನಮಗೆ ತಿಂಗಳ ಕಾಲಾವಕಾಶ ಕೊಡಿ. ಅದರೊಳಗೆ ಕೆಲಸ ಆರಂಭವಾಗದಿದ್ದಲ್ಲಿ ನಿಮ್ಮೊಂದಿಗೆ ಮಾತನಾಡಲು ನಮಗೆ ಯಾವುದೇ ನೈತಿಕತೆ ಇಲ್ಲ. ಅಲ್ಲದೇ ನೀವು ಯಾವುದೇ ನಿರ್ಧಾರ ಕೈಗೊಳ್ಳಲು ಸ್ವತಂತ್ರರಾಗಿರುತ್ತೀರಿ ಎಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಆದರೆ ತಿಂಗಳ ಕಾಲಾವಕಾಶದಲ್ಲಿ ಕಾಮಗಾರಿ ಆರಂಭಗೊಳ್ಳದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಲಾಯಿತು.

ವಿಜೃಂಭಣೆಯ ಶ್ರೀ ಪಟ್ಟಲದಮ್ಮ ದೇವಿ ಪೂಜಾ ಕಾರ್ಯಕ್ರಮ



ಶ್ರೀ ಪಟ್ಟಲದಮ್ಮ ದೇವಿಯ 11ನೇ ಪೂಜಾ ಕಾರ್ಯಕ್ರಮ ನಡೆಯಿತು.

ಹುಣಸೂರು, ಫೆ.21– ನಗರದಲ್ಲಿ ಶ್ರೀ ಪಟ್ಟಲದಮ್ಮ ದೇವಿಯ 11ನೇ ಪೂಜಾ ಕಾರ್ಯಕ್ರಮ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯೇ ದೇವಿಗೆ ಅಭಿಷೇಕ, ಪೂಜೆ, ಅಲಂಕಾರ ಹಾಗೂ 10 ಗಂಟೆಗೆ ಮಹಾ ಮಂಗಳಾರತಿ ನೆರವೇರಿಸಿ ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಾಯಿಗೆ ಪೂಜೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿದರು. 5 ಸಾವಿರಕ್ಕೂ ಹೆಚ್ಚು ಭಕ್ತರು ಅನ್ನದಾನದಲ್ಲಿ ಭಾಗವಹಿಸಿದ್ದರು.

ಈ ವೇಳೆ ಶ್ರೀಪಟ್ಟಲದಮ್ಮ ಜೀರ್ಣೋದ್ಧಾರ ಯುವಕರ ಸಂಘದ ಗೌರವಾಧ್ಯಕ್ಷ ಕೆಂಪಯ್ಯ, ಅಧ್ಯಕ್ಷ ಮಹಾದೇವ್, ಉಪಾಧ್ಯಕ್ಷ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಖಜಾಂಚಿ ಶ್ರೀನಿವಾಸ್, ಸಹ ಕಾರ್ಯದರ್ಶಿ ಚಂದ್ರಶೇಖರ್, ಸಹ ಖಜಾಂಚಿ ಶಿವಕುಮಾರ್, ಸದಸ್ಯರಾದ ಪ್ರಕಾಶ್ ನಾಯಕ, ಶಿವಾನಂದ, ಶಿವಣ್ಣ, ಮಹದೇವ್, ಲೋಕೇಶ್, ರೇಣುಕ, ರವಿಕುಮಾರ್, ನಾರಾಯಣ್, ಮಂಜು, ಬೀರೇಶ್, ದೊಡ್ಡಯ್ಯ, ಪ್ರದೀಪ್, ಸುಜಯ್, ಸಂಚಾಲಕ ಪ್ರಸನ್ನ, ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಸಮಸ್ಯೆಗಳ ಶೀಘ್ರ ಬಗೆಹರಿಸಲು ಕ್ರಮ

ಕುಂದುಕೊರತೆ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ಫೆ.21– ಪರಿಶಿಷ್ಟ ಜಾತಿ ಆದಿಜಾಂಬವ ಸಮುದಾಯದವರ ಸಮಸ್ಯೆ ಆಲಿಸಿ ತ್ವರಿತವಾಗಿ ಬಗೆಹರಿಸುವ ದೃಷ್ಟಿಯಿಂದ ಪ್ರತ್ಯೇಕ ಸಭೆ ನಡೆಸಿ ಅಹವಾಲುಗಳಿಗೆ ಸ್ಪಂದಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದೇನೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಆದಿಜಾಂಬವ ಸಮುದಾಯದ ಕುಂದುಕೊರತೆ ಸಭೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಕಳೆದ ಬಾರಿ ಎಸ್‌ಸಿ, ಎಸ್ಟಿ ಕುಂದುಕೊರತೆ ಸಭೆಯಲ್ಲಿ ಆದಿಜಾಂಬವ ಸಮುದಾಯದವರ ಸಮಸ್ಯೆಗಳಿಗೆ ಸಕರಾತ್ಮಕವಾಗಿ ಅಧಿಕಾರಿಗಳು ಸ್ಪಂದಿಸದೆ ಅನುಪಾಲನಾ ವರದಿಯಿಂದ ಬೇಡಿಕೆ ಕೈ ಬಿಟ್ಟಿದ್ದ ಬಗ್ಗೆ ಅಸಮಾಧಾನ ಹೊರ ಹಾಕಿ ಸಭೆಯಿಂದ ಹೊರ ನಡೆದಿದ್ದರು. ಈ ಸಮಸ್ಯೆಗೆ ಪರಿಹಾರವಾಗಿ ಆದಿಜಾಂಬವ ಸಮುದಾಯದ ಮುಖಂಡ ಎಂಎಲ್‌ಸಿ ಡಾ.ತಿಮ್ಮಯ್ಯ ಅವರೊಂದಿಗೆ ಪ್ರಸ್ತಾಪಿಸಿ ಪ್ರತ್ಯೇಕ ಸಭೆ ನಡೆಸಿದ್ದೇನೆ ಎಂದರು.



ಸಭೆಯಲ್ಲಿ ಎಂಎಲ್‌ಸಿ ಡಾ. ತಿಮ್ಮಯ್ಯ ಮಾತನಾಡಿದರು.

ಇದೇ ವೇಳೆ ಸಭೆಯಲ್ಲಿ ಸಾಗುವಳಿ, ನಿವೇಶನ, ಸ್ಮಶಾನ ಮತ್ತು ಅಂಗನವಾಡಿ ಕೇಂದ್ರಕ್ಕೆ ನಿವೇಶನ ಮಂಜೂರು ಕೋರಿ ಅರ್ಜಿಗಳು ಬಂದಿದ್ದವು. ಸಮುದಾಯದವರ ಸ್ಮಶಾನಕ್ಕೆ ಮೀಸಲಿಟ್ಟ ನಿವೇಶನ ಅನ್ಯರಿಂದ ಒತ್ತುವರಿ ಮಾಡಿದ ಬಗ್ಗೆ ಪ್ರಸ್ತಾಪಿಸಿದರು.

ಸಮುದಾಯ ಭವನಕ್ಕೆ ನಿವೇಶನ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಪಿಡಿಓ ಸಮರ್ಪಕ ಸ್ಪಂದನೆ ಇಲ್ಲದೆ ಅರ್ಜಿ ಧೂಳು ಹಿಡಿಯುತ್ತಿದೆ ಎಂದು ಸಮಾಜದ ಮುಖಂಡ ಶಿವಣ್ಣ ಡಿ.ಕುಮಾರ್ ಪ್ರಸ್ತಾಪಿಸಿದರು.

ಎಂಎಲ್‌ಸಿ ಡಾ.ತಿಮ್ಮಯ್ಯ ಮಾತನಾಡಿ, ವಿಧಾನ ಪರಿಷತ್ ಸದಸ್ಯನಾದ ಬಳಿಕ 2 ವರ್ಷದಲ್ಲಿ ಹುಣಸೂರು ಕ್ಷೇತ್ರಕ್ಕೆ 75 ಲಕ್ಷ ಅನುದಾನ ನೀಡಿದ್ದು, ಆದಿಜಾಂಬವ ಸಮುದಾಯ ಭವನ ನಿರ್ಮಾಣಕ್ಕೆ 25 ಲಕ್ಷ ಬಿಳಿಗೆರೆ, ಜಾಬಗೆರೆ, ರಂಗಯ್ಯನ ಕೊಪ್ಪಲು, ಕರ್ಣಕುಪ್ಪೆ ಗ್ರಾಮಗಳಲ್ಲಿ ಆದಿಜಾಂಬವ ಸಮುದಾಯದ ಕೇರಿ ಅಭಿವೃದ್ಧಿಗೆ 50 ಲಕ್ಷ ನೀಡಲಾಗಿದೆ ಎಂದು.

ಸೋಮನಾಥಪುರ ಪಿಎಸಿಎಸ್ ಚುನಾವಣೆ

ಎಸ್.ನಾಗರಾಜು ಅಧ್ಯಕ್ಷ, ಸುಂದರಮ್ಮ ಉಪಾಧ್ಯಕ್ಷೆ

ತಿ.ನರಸೀಪುರ, ಫೆ.21– ತಾಲೂಕಿನ ಸೋಮನಾಥಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್.ನಾಗರಾಜು, ಉಪಾಧ್ಯಕ್ಷರಾಗಿ ಸುಂದರಮ್ಮ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ನಾಗರಾಜು (ನಾಗಣ್ಣ) ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸುಂದರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಅಶ್ವಿನ್ ಕುಮಾರ್ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ನಿರ್ದೇಶಕರಾದ ಮಾಜಿ ಅಧ್ಯಕ್ಷ ಹಾಲಿ ನಿರ್ದೇಶಕ ಆರ್‌ಟಿಓ ಡಿ.ಶಿವಣ್ಣ, ಕೆ.ಎಂ.ಚಂದ್ರಶೇಖರ್, ಮರಮ್ಮ, ಅನುಸೂಯ, ಸಿ.ನಂಜುಂಡಯ್ಯ ಹಾಗೂ ಉಷಾ ಚೌಡಯ್ಯ ಚುನಾವಣಾ ಸಭೆಯಲ್ಲಿ ಹಾಜರಿದ್ದು, ಅಧ್ಯಕ್ಷ –ಉಪಾಧ್ಯಕ್ಷರ ಆಯ್ಕೆಗೆ



ಅಧ್ಯಕ್ಷರಾಗಿ ಎಸ್.ನಾಗರಾಜು, ಉಪಾಧ್ಯಕ್ಷೆಯಾಗಿ ಸುಂದರಮ್ಮ ಆಯ್ಕೆಯಾದರು.

> ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರಿಂದ ಹೆಚ್ಚಿನ ಅನುದಾನ ಪಡೆದು ಸಂಘದ ಮುಂದೆ ಇರುವ ಖಾಲಿ ಜಾಗವನ್ನು ಅಭಿವೃದ್ಧಿಪಡಿಸಲು ಸಹಕಾರಿಸುತ್ತೇನೆ ಮತ್ತು ಸವಲತ್ತುಗಳನ್ನು ಬಡ ರೈತರಿಗೆ ತಲುಪಿಸುವ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.
> -ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ.

ಅನುಮೋದನೆ ನೀಡಿದರೆ, ನಿರ್ದೇಶಕರಾದ ರಂಗಸ್ವಾಮಿ, ಗಿರೀಶ್ ಗೌಡ, ಎಂ.ಸಿದ್ದರಾಜು, ಮಹದೇವು ಗೈರಾಗಿದ್ದರು.

ಎಪಿಎಂಸಿ ಮಾಜಿ ಅಧ್ಯಕ್ಷ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಸಹಕಾರ ಸಂಘಗಳಿಗೆ ಸರ್ಕಾರ ಕೋಟ್ಯಾಂತರ ರೂ. ಅನುದಾನ ನೀಡುತ್ತಿದೆ. ನೂತನ ಅಧ್ಯಕ್ಷರು ಸರ್ಕಾರದ ಅನುದಾನದ ಸದ್ಬಳಕೆಗೆ ಮುಂದಾಗಬೇಕು. ಅನುಭವ ಇಲ್ಲದಿದ್ದರೂ, ಸಂಘದ ಕಾರ್ಯದರ್ಶಿ ಹಾಗೂ ಸೂಪರ್‌ವೈಸರ್ ಅವರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಿ ಕೆಲಸ ಮಾಡಬೇಕು. ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ತಲುಪಿಸಬೇಕೆಂದು ತಿಳಿಸಿದರು. ನೂತನ ಅಧ್ಯಕ್ಷ ಎಸ್. ನಾಗರಾಜು ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಮತ್ತು ಸ್ಥಳೀಯ ಕಾಂಗ್ರೆಸ್ ಮುಖಂಡ ವಜ್ರೇಗೌಡರ ಸಹಕಾರದಿಂದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಅವರ ನಂಬಿಕೆಗೆ ಯಾವುದೇ ಚ್ಯುತಿ ಬಾರದಂತೆ ಈ ಭಾಗದ ಎಲ್ಲಾ ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ ಸಂಘದ ಅಭಿವೃದ್ಧಿ ಶ್ರಮಿಸುತ್ತೇನೆ ಎಂದರು.

ಈ ವೇಳೆ ತಾಪಂ ಮಾಜಿ ಸದಸ್ಯ ರಾಮಲಿಂಗು, ಮುಖಂಡ ಸಿದ್ದರಾಮು, ಗ್ರಾಪಂ ಅಧ್ಯಕ್ಷ ರಾಜಣ್ಣ, ಮಾಜಿ ಅಧ್ಯಕ್ಷರಾದ ಪುಟ್ಟಸ್ವಾಮಿ, ಅಶೋಕ್, ಮಹದೇವಣ್ಣ, ಮಾಜಿ ಸದಸ್ಯ ಮಹದೇವಣ್ಣ, ರಾಮಣ್ಣ, ಶೇಖರಪ್ಪ, ಮಾಜಿ ಉಪಾಧ್ಯಕ್ಷ ಸೋಮನಾಥಪುರ ಕೃಷ್ಣಮೂರ್ತಿ, ಕಾಂತರಾಜು, ಕಗ್ಗಲೀಪುರ ಮಹೇಶ್, ಕಪಾಲಿ ಮಂಜು, ದಿನೇಶ್, ಧರ್ಮೇಂದ್ರ, ರಾಜ ಕುಮಾರ್, ಬಾಲರಾಜು, ಕಗ್ಗಲೀಪುರ ಮಹದೇವಸ್ವಾಮಿ, ಸಿಇಓ ಪ್ರದೀಪ್, ಲೆಕ್ಕಾಧಿಕಾರಿ ರಾಜಣ್ಣ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ನಿಲಸೋಗೆ ಡೈರಿಗೆ ಲಿಂಗರಾಜು ಅಧ್ಯಕ್ಷ, ಬಸವರಾಜು ಉಪಾಧ್ಯಕ್ಷ



ನಿಲಸೋಗೆ ಡೈರಿ ಅಧ್ಯಕ್ಷರಾಗಿ ಲಿಂಗರಾಜು, ಉಪಾಧ್ಯಕ್ಷರಾಗಿ ಬಸವರಾಜು ಆಯ್ಕೆಯಾಗಿದ್ದಾರೆ.

ತಿ.ನರಸೀಪುರ, ಫೆ.21– ತಾಲೂಕಿನ ನಿಲಸೋಗೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಲಿಂಗರಾಜು ಹಾಗೂ ಉಪಾಧ್ಯಕ್ಷರಾಗಿ ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಲಿಂಗರಾಜು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಸವರಾಜು ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಅಮೀದಾ ಘೋಷಿಸಿದರು.

ನೂತನ ಅಧ್ಯಕ್ಷ ಲಿಂಗರಾಜು ಮಾತನಾಡಿ, ಪಶು ಸಂಗೋಪನೆಯಿಂದ ಆರ್ಥಿಕವಾಗಿ ಸ್ವಾವಲಂಬಿ ಬದುಕನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಹೀಗಾಗಿ ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕು. ಸರ್ಕಾರ ಹಾಗೂ ಮೈಮುಲ್ ವತಿಯಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ವೇಳೆ ನಿರ್ದೇಶಕರಾದ ಎನ್.ಎಸ್.ಚಂದ್ರಶೇಖರ್, ಮಹದೇವ, ದೇವರಾಜು, ಮರಿಸ್ವಾಮಿ, ಸುದರ್ಶನ ಕುಮಾರ್, ಸುಬ್ಬಮ್ಮ, ಶಿವಮ್ಮ, ಎನ್.ಎಂ.ಗೋಪಾಲರಾಜು, ನಾಗರಾಜ ನಾಯಕ, ಸಿ.ಕೃಷ್ಣಮೂರ್ತಿ, ಕಾರ್ಯದರ್ಶಿ ಎನ್.ಎಲ್.ನಂಜುಂಡಸ್ವಾಮಿ, ಮಲ್ಲಪ್ಪ ಸ್ವಾಮಿ, ಜಿಲ್ಲಾ ಅಖಿಲ ಭಾರತ ವೀರಶೈವ ಮಹಾಸಭಾ ನಿರ್ದೇಶಕ ಮಹದೇವ ಪ್ರಸಾದ್, ತಾಪಂ ಮಾಜಿ ಸದಸ್ಯ ಬಸವರಾಜು, ಮಲ್ಲಿಕಾರ್ಜುನ್ ಸ್ವಾಮಿ, ಎನ್.ಜಿ.ಶಿವಸ್ವಾಮಿ, ಮುಖಂಡರಾದ ಮರಿಸ್ವಾಮಿ, ಗ್ರಾಪಂ ಸದಸ್ಯ ಮಹದೇವ ಪ್ರಸಾದ್, ರೇವಣ್ಣ, ಸಣ್ಣ ಮಾದನಾಯಕ, ಸುರೇಶ್, ಮರಿಸ್ವಾಮಿ, ರಾಜು ಮತ್ತಿತರರಿದ್ದರು.

ಫೆ.28ರವರೆಗೆ ತಪಾಸಣಾ ಶಿಬಿರ

ಮೈಸೂರು, ಫೆ.21– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.28 ರವರೆಗೆ ಮಹಿಳೆಯರಲ್ಲಿ ಅಸಹಜ ಮತ್ತು ಅತಿಯಾದ ರಕ್ತಸ್ರಾವ ತೊಂದರೆಗಳಿಗೆ ತಪಾಸಣೆ, ಸಲಹೆ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9591810699, ದೂ.0821–2548231 ಸಂಪರ್ಕಿಸಬಹುದು.

1.85 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಫೆ.21– ತಾಲೂಕಿನ ವಿವಿಧ ಗ್ರಾಮಗಳಲ್ಲಿ 1.85 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಮಸಗೆ, ಎಚಗುಂಡ್ಲ, ಕೆರೆಹುಂಡಿ, ಮುದ್ದಹಳ್ಳಿ, ನವಿಲೂರು, ಹೊಸಪುರ, ಸೂರಳ್ಳಿ ಗ್ರಾಮಗಳಲ್ಲಿ ಸಾಮಾನ್ಯ ಬೀದಿಯ ಸಿಸಿ ರಸ್ತೆ, ಚರಂಡಿ ಹಾಗೂ ಅಂಬೇಡ್ಕರ್ ಸಮುದಾಯ ಭವನ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.



ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಕಾಂಗ್ರೆಸ್ ಸರ್ಕಾರ ಸಂವಿಧಾನದ ಆಶಯದಂತೆ 5 ಗ್ಯಾರಂಟಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಿದ್ದು, ಇದರಿಂದ ರಾಜ್ಯದ ಬಡ ಜನರು ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಸಿಎಂ ಸಿದ್ದರಾಮಯ್ಯನವರು ಕ್ಷೇತ್ರದ ಅಭಿವೃದ್ಧಿ ಕಡೆಗಣಿಸದೆ ವಿವಿಧ ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸಲು 25 ಕೋಟಿ ವಿಶೇಷ ಅನುದಾನ ಬಿಡುಗಡೆಗೊಳಿಸಿದ್ದಾರೆ. ಈ ಪೈಕಿ 20 ಕೋಟಿಯನ್ನು ವಿವಿಧ ಗ್ರಾಮಗಳ ಸಾಮಾನ್ಯ ಬೀದಿಯಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಮೀಸಲಿಟ್ಟಿದ್ದೇವೆ. 5 ಕೋಟಿಯನ್ನು ಸಮುದಾಯ ಭವನ ನಿರ್ಮಾಣಕ್ಕೆ ಮೀಸಲಿಡಲಾಗಿದೆ. ಅಲ್ಲದೇ ಎಸ್‌ಇಪಿ ಯೋಜನೆಯಲ್ಲಿ ಎಸ್ಸಿ ಬೀದಿಯಲ್ಲಿ ಚರಂಡಿ ಮತ್ತು ಸಿಸಿ ರಸ್ತೆ, ಟಿಎಸ್ಪಿ ಯೋಜನೆ ಅಡಿ ಪ.ವರ್ಗದ ಬೀದಿಯಲ್ಲಿ ಸಿಸಿ ರಸ್ತೆ, ಚರಂಡಿಗೆ ಅನುದಾನ ನಿಯೋಜಿಸಲಾಗಿದೆ. ಕಳೆದ ಅಕ್ಟೋಬರ್‌ನಲ್ಲಿ 8 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಎರಡನೇ ಅವಧಿಯಲ್ಲಿ 3.45 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಇಂದು 1.85 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡುವ ಮೂಲಕ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಸಾಗಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸಲಾಗುವುದು ಎಂದರು.

ಆಶ್ರಯ ಮನೆಗಳಿಗೆ ಆದ್ಯತೆ: ಎಲ್ಲೆಡೆ ಆಶ್ರಯ ಮನೆ ವಿತರಿಸುವಂತೆ ಬೇಡಿಕೆ ಹೆಚ್ಚಾಗಿದೆ. ಸರ್ಕಾರ ಕಳೆದ ಬಾರಿ ಆಶ್ರಯ ಮನೆ ಯೋಜನೆಗೆ 5 ಲಕ್ಷ ನಿಗದಿಪಡಿಸಿತ್ತು. ಈ ಬಾರಿ 1 ಲಕ್ಷ 20 ಸಾವಿರ ನಿಗದಿಪಡಿಸಿರುವುದರಿಂದ ಆಶ್ರಯ ಮನೆ ಯೋಜನೆಗೆ ಜನರು ಆಸಕ್ತಿ ತೋರುವುದಿಲ್ಲ. ಮೊದಲಿನಂತೆ 5 ಲಕ್ಷ ವಿತರಿಸುವಂತೆ ಬೇಡಿಕೆ ಹೆಚ್ಚಿದೆ. ಜೊತೆಗೆ ಆಶ್ರಯ ಮನೆಗಳನ್ನು ಶೀಘ್ರ ವಿತರಿಸುವಂತೆ ಎಲ್ಲೆಡೆ ಗ್ರಾಮಸ್ಥರು ಮನವಿ ಸಲ್ಲಿಸುತ್ತಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಈ ಬಗ್ಗೆ ಚರ್ಚಿಸಿ ಸೂರು ಇಲ್ಲದವರಿಗೆ ಸೂರು ಕಲ್ಪಿಸಲು ಕ್ರಮ ವಹಿಸುತ್ತೇನೆ ಎಂದರು.

ನವಿಲೂರಲ್ಲಿ ಕೆರೆ ಹಾಗೂ ಸ್ಮಶಾನ ಒತ್ತುವರಿ ತೆರವುಗೊಳಿಸುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಅವರಿಗೆ ಸೂಚನೆ ನೀಡಲಾಗಿದೆ. ನವಿಲೂರು ಗ್ರಾಮದ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಮನವಿ ಸಲ್ಲಿಸಲಾಗಿದೆ. ಬಜೆಟ್ ಮುಗಿದ ನಂತರ ಮುಖ್ಯಮಂತ್ರಿಗಳ ವಿಶೇಷ ಅನುದಾನ ಪಡೆದು ದೇವಾಲಯದ ಅಭಿವೃದ್ಧಿ ಕಾರ್ಯ ನಡೆಸಲಾಗುವುದು. ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿದ್ದು, ಪ್ರತಿ ವಾರ ಜನಸಂಪರ್ಕ ಸಭೆ ನಡೆಸಿ ಜನರ ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಶ್ರೀಕಂಠನಾಯಕ, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ನವಿಲೂರು ಗ್ರಾಪಂ ಅಧ್ಯಕ್ಷ ಮಹದೇವು, ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ಮುಖಂಡರಾದ ಕುಳ್ಳಯ್ಯ, ರಾಜೇಶ್, ರಾಜೇಶ್, ತಗಡೂರು ನಾಯಕ, ಲಕ್ಷ್ಮಣ, ಶಿವಪ್ಪ, ಗ್ರಾಪಂ ಸದಸ್ಯ ಚಂದ್ರು, ಮರಿಶೆಟ್ಟಿ, ಶಿವಣ್ಣ, ಸಿದ್ದರಾಜು, ಸಿದ್ದರಾಜು, ಲೋಕೇಶ್, ಸಿದ್ದಮ್ಮ, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯ್ ಕುಮಾರ್, ದೀಪು, ಕೆಆರ್ ಐಡಿಎಲ್ ಎಇಇ ಶೋಭಾ, ಪಂಚಾಯತ್ ರಾಜ್ ಇಲಾಖೆಯ ಎಇಇ ರಾಜು ಸೇರಿದಂತೆ ಇತರರಿದ್ದರು.

ದೀಪಕ್ ನಿಧನ



ಬೆಟ್ಟದಪುರ, ಫೆ.21– ಗ್ರಾಮದ ನಿವಾಸಿ ದೀಪಕ್ (28) ಶುಕ್ರವಾರ ಮುಂಜಾನೆ ಅನಾರೋಗ್ಯದಿಂದ ನಿಧನರಾದರು. ಮೃತರು ತಂದೆ, ತಾಯಿ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕ ಕೆರೆಯೂರು ಡೈರಿಗೆ ಮಂಜೇಗೌಡ ಅಧ್ಯಕ್ಷ, ಜಯಮ್ಮ ಉಪಾಧ್ಯಕ್ಷೆ

ಹೆಚ್.ಡಿ.ಕೋಟೆ, ಫೆ.21– ತಾಲೂಕಿನ ಚಿಕ್ಕ ಕೆರೆಯೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯ ಮಂಜೇಗೌಡ, ಉಪಾಧ್ಯಕ್ಷೆಯಾಗಿ ಜಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಅವಿನಾಶ್ ಘೋಷಿಸಿದರು.



ಡೈರಿ ಅಧ್ಯಕ್ಷರಾಗಿ ಮಂಜೇಗೌಡ, ಉಪಾಧ್ಯಕ್ಷೆಯಾಗಿ ಜಯಮ್ಮ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿದ ಮೈಮುಲ್ ನಿರ್ದೇಶಕ ಈರೇಗೌಡ, ಚಿಕ್ಕಕೆರೆಯೂರು ಡೈರಿಯಲ್ಲಿ ನಿರ್ದೇಶಕರು ಒಮ್ಮತದಿಂದ ಅಧ್ಯಕ್ಷ, ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇದೇ ರೀತಿ ಒಮ್ಮತದಿಂದ ಸಂಘದ ಅಭಿವೃದ್ಧಿಗೆ ಎಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು. ಈಗಾಗಲೇ ಗ್ರಾಮದಲ್ಲಿ ಡೈರಿ ಕಟ್ಟಡ, ಹಾಲು ಶಿಥಲೀಕರಣ ಘಟಕ ನಿರ್ಮಿಸಲಾಗಿದ್ದು, ಮುಂದಿನ ದಿನಗಳಲ್ಲಿ ಶಾಸಕ ಅನಿಲ್ ಅವರ ಅನುದಾನದಲ್ಲಿ ಪಶು ಆಹಾರದ ಘಟಕ ಹಾಗೂ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಿಸಿ ಕೊಡಲಾಗುವುದು ಎಂದರು.

18 ರಿಂದ 60 ವರ್ಷದೊಳಗಿನ ರೈತರು ಮೃತಪಟ್ಟರೇ ಮೈಮುಲ್ ವತಿಯಿಂದ 1 ಲಕ್ಷ ವಿಮೆ ನೀಡಲಾಗುವುದು. 60 ವರ್ಷ ಮೇಲ್ಪಟ್ಟವರು ಸಾವನ್ನಪ್ಪಿದರೇ ರೈತ ಕಲ್ಯಾಣ ಟ್ರಸ್ಟ್‌ನಿಂದ 15 ಸಾವಿರ ನೀಡಲಾಗುವುದು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ರೈತರ ಮಕ್ಕಳಿಗೆ ಗೌರವಧನ ನೀಡುವ ಜೊತೆಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸ ಲಾಗಿದ್ದು, ತಾಲೂಕಿನ 30ಕ್ಕೂ ಹೆಚ್ಚು ಹೆಣ್ಣು ಮಕ್ಕಳು ಇದರ ಸದುಪಯೋಗ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಮೈಮುಲ್ ನಿರ್ದೇಶಕ ಈರೇಗೌಡರನ್ನು ಸಂಘದಿಂದ ಸನ್ಮಾನಿಸಲಾಯಿತು. ಈ ವೇಳೆ ಅಕ್ರಮ ಸಕ್ರಮ ಸಮಿತಿ ಸದಸ್ಯ ಕೆಂಡಗಣ್ಣೇಗೌಡ, ಡೈರಿ ನಿರ್ದೇಶಕರಾದ ಡಿ.ಕುಮಾರ್, ಸಿ.ಕೆ.ಲೋಕೇಶ್, ನಾಗೇಂದ್ರ, ಮಂಜು, ಎಂ.ಆರ್.ಮಹೇಶ್, ಸಿದ್ದಶೆಟ್ಟಿ, ಪುಟ್ಟಮ್ಮ, ರತ್ನಮ್ಮ, ಸಿದ್ದರಾಜು, ಕೃಷ್ಣೇಗೌಡ, ಗ್ರಾಪಂ ಸದಸ್ಯ ಮಹೇಶ್, ರಮೇಶ್, ತಾಪಂ ಮಾಜಿ ಅಧ್ಯಕ್ಷ ಬಾಲಚಂದ್ರ ವಿಎಸ್‌ಎಸ್‌ಎನ್ ಅಧ್ಯಕ್ಷ ಮಹೇಶ್, ಮುಖಂಡರಾದ ಸಿ.ಎನ್.ರವಿ, ಎಂ.ಲೋಕೇಶ್, ವಿಜೇಂದ್ರಗೌಡ, ಪ್ರಕಾಶ್, ನಾಗರಾಜು, ಬಸವರಾಜ್, ಸಿ.ಟಿ.ವೆಂಕಟೇಶ್, ಸುರೇಶ್, ಕುಮಾರ್, ಕೆಂಡಗಣ್ಣಪ್ಪ, ಪ್ರಭು, ಸೋಮೇಗೌಡ, ಕಂಸರಾಜ್, ಸುಪ್ರಿತ್, ಬಿಳಿಯಯ್ಯ, ವೆಂಕಟೇಗೌಡ, ಗೋವಿಂದೇಗೌಡ, ರಾಜೇಗೌಡ, ಲೋಕೇಶ್, ಮಹದೇವಪ್ಪ, ಕೆ.ಟಿ.ಶ್ರೀನಿವಾಸ್, ಕರುಣಾಕರನ್, ರವಿಬೆಟ್ಟಯ್ಯ, ಶಿವರಾಜು, ಕುಂಟಶಿಂಗ್ರಯ್ಯ, ಕಾರ್ಯದರ್ಶಿ ರಾಜೇಶ್, ಹಾಲು ಪರೀಕ್ಷಕ ಶ್ರೀನಿವಾಸ್ ಇತರರಿದ್ದರು.

> ಎಲ್ಲರ ಸಹಕಾರದಿಂದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಸಂಘದ ಎಲ್ಲಾ ನಿರ್ದೇಶಕರು, ಮೈಮುಲ್ ನಿರ್ದೇಶಕ ಈರೇಗೌಡರ ಮಾರ್ಗದರ್ಶನದಲ್ಲಿ ಡೈರಿಯನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಲು ಶಕ್ತಿಮೀರಿ ಶ್ರಮಿಸುತ್ತೇನೆ.
> - ಮಂಜೇಗೌಡ, ಡೈರಿ ಅಧ್ಯಕ್ಷ.

ಮಕ್ಕಳ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ

●ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾಯಾಧೀಶ ಬಿ.ಜಿ.ದಿನೇಶ್ ಕುಮಾರ್ ಅಭಿಮತ ●ಮಕ್ಕಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ನಾನಾ ಇಲಾಖೆ ಅಧಿಕಾರಿಗಳಿಗೆ ಕಾರ್ಯಾಗಾರ

ಮೈಸೂರು,ಫೆ.21(ಎಂಟಿವೈ)– ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ಹಾಗೂ ಶೋಷಣೆ ಗೊತ್ತಿದ್ದರೂ ಸುಮ್ಮನಿರುವುದು ಅಪರಾಧವಾಗಿದ್ದು, ಮಕ್ಕಳ ರಕ್ಷಣೆ ಪ್ರತಿಯೊಬ್ಬರ ಹೊಣೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ನ್ಯಾಯಾಧೀಶ ಬಿ.ಜಿ. ದಿನೇಶ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಶಿಕ್ಷಣ ಹಕ್ಕು ಕಾಯಿದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಪೋಕ್ಸೊ ಕಾಯ್ದೆ ಮತ್ತು ಭಿಕ್ಷಾಟನೆ ನಿರ್ಮೂಲನೆ ಅನುಷ್ಠಾನ ಗೊಳಿಸುವಲ್ಲಿ ಅಧಿಕಾರಿಗಳ ಪಾತ್ರ' ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮಕ್ಕಳ ರಕ್ಷಣೆಯ ಜವಾಬ್ದಾರಿ ಕೇವಲ ಪೊಲೀಸ್ ಮತ್ತು ಮಕ್ಕಳ ರಕ್ಷಣಾ ಇಲಾಖೆಗೆ ಮಾತ್ರ ಸೀಮಿತವಾಗಿಲ್ಲ. ಸರ್ಕಾರದ ವಿವಿಧ ಇಲಾಖೆಯ ಸಾಮೂಹಿಕ ಕರ್ತವ್ಯವೂ ಆಗಿದೆ ಎಂದರು.

ನಮ್ಮಲ್ಲಿರುವ ಕಾನೂನು ಮಾನವೀಯ ಮೌಲ್ಯಗಳಿಂದ ಕೂಡಿದೆ. ಆದರೆ, ಡಾ.ಬಿ.ಆರ್.ಅಂಬೇಡ್ಕರ್ ಹೇಳಿರುವಂತೆ ಕಾನೂನುಗಳನ್ನು ಅನುಷ್ಠಾನ ಮಾಡುವವರ ಇಚ್ಛಾಶಕ್ತಿಯ ಮೇಲೆ ನಿಂತಿದೆ. ಬಾಲ್ಯ ವಿವಾಹ, ಭಿಕ್ಷಾಟನೆ, ಲೈಂಗಿಕ ದೌರ್ಜನ್ಯದಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಅಧಿಕಾರಿಗಳು ಕೇವಲ ಒಂದು ದಿನ ಅಥವಾ ಕರೆ ಬಂದಾಗ ಮಾತ್ರ ಕಾರ್ಯಾಚರಣೆ ನಡೆಸಬಾರದು. ಪ್ರತಿದಿನ ಕಾರ್ಯಾಚರಣೆಯಲ್ಲಿ ತೊಡಗಿಕೊಳ್ಳಬೇಕು. ಯಾವುದೇ ಮಗುವಿನ ಮೇಲೆ ಶೋಷಣೆ, ದೌರ್ಜನ್ಯವಾದಾಗ ನಮಗೆ ಗೊತ್ತಿದ್ದೂ ಗೊತ್ತಿಲ್ಲದಂತಿರುವುದೂ ಅಪರಾಧ. ದೌರ್ಜನ್ಯ ಕಂಡ ಕೂಡಲೇ ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡುವುದು ಎಲ್ಲರ ಜವಾಬ್ದಾರಿ. ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ ಘಟನೆ ನಡೆದಾಗ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಸರ್ಕಾರ ಪ್ರತಿ ಶಾಲೆಯಲ್ಲಿ ಮಕ್ಕಳ ಆಪ್ತ ಸಮಾಲೋಚಕರನ್ನು ನಿಯೋಜಿಸಲಿದೆ. ಇಲ್ಲವಾದರೆ ಶಿಕ್ಷಕರಿಗೆ ತರಬೇತಿ ನೀಡಬೇಕು. ಮಕ್ಕಳ ಹಕ್ಕುಗಳ ಉಲ್ಲಂಘನೆಯೂ ಮಾನವನ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಎಚ್ಚರಿಸಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣ ಗೌಡ ಮಾತನಾಡಿ, ಬಾಲ್ಯ ವಿವಾಹ ತಡೆಯಲು ಗ್ರಾಮ ಲೆಕ್ಕಿಗ, ಶಾಲಾ ಮುಖ್ಯ ಶಿಕ್ಷಕರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಆದರೂ, ಬಾಲ್ಯ ವಿವಾಹಗಳು ನಡೆಯುತ್ತಿವೆ. ಹೀಗಾಗಿ ಆಶಾ, ಅಂಗನವಾಡಿ ಕಾರ್ಯಕರ್ತರು, ಶಿಕ್ಷಕರ ತಂಡ ರಚಿಸಿ ತಳ ಮಟ್ಟದಲ್ಲಿ ಕೆಲಸ ಮಾಡಿ ಬಾಲ್ಯ ವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತಡೆಗೆ ಕ್ರಮ ಕೈಗೊಳ್ಳಲಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ಅಂಕಗಳಿಸುವ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಮನೆಗಳಲ್ಲಿ ಮಕ್ಕಳೊಂದಿಗೆ ಪಾಲಕರು ಮಾತನಾಡುತ್ತಿಲ್ಲ. ಶಿಕ್ಷಕರು ಪಠ್ಯಕಷ್ಟೆ ಸೀಮಿತವಾಗಿದ್ದಾರೆ. ಹೀಗಾಗಿ ಮಕ್ಕಳು ಮೊಬೈಲ್ ಮತ್ತು ದೂರದರ್ಶನದ ಹೆಚ್ಚು ವೀಕ್ಷಣೆ ಮಾಡುವಂತಹ ದುಸ್ಥಿತಿ ತಲುಪಿದ್ದು, ಇದರಿಂದ ಹೊರ ತರುವ ಸವಾಲು ಎದುರಾಗಿದೆ. ಮೊಬೈಲ್ ಬಳಕೆ ನಿಯಂತ್ರಿಸಲು ತಜ್ಞರ ಸಲಹೆ ಪಡೆಯಲಾಗುತ್ತಿದೆ. ಮೊಬೈಲ್ ಬಳಕೆಯಲ್ಲಿ ಮುಳುಗಿರುವ ಮಕ್ಕಳಿಂದ ಪಾಲಕರು ಮೊಬೈಲ್ ಕಸಿದುಕೊಂಡರೆ ಮಗು ಶಾಲೆ ಬಿಡುವುದು, ಮನೆಯಿಂದ ತಪ್ಪಿಸಿಕೊಳ್ಳುವುದು ಅಥವಾ ಪ್ರಾಣ ಕಳೆದುಕೊಳ್ಳುವ ಹಂತಕ್ಕೂ ತಲುಪುತ್ತಿವೆ. ಕೊರೊನಾದ ನಂತರ ಆನ್‌ಲೈನ್ ತರಗತಿಗಳ ಪ್ರಭಾವದಿಂದ ಮೊಬೈಲ್ ಬಳಕೆ ಹೆಚ್ಚಾಗಿದೆ ಎಂದು ವಿಷಾದಿಸಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮಕ್ಕಳ ರಕ್ಷಣೆ ಹಾಗೂ ವಿವಿಧ ಕಾನೂನುಗಳ ಕುರಿತು ವಿಭಾಗೀಯ ಮಟ್ಟದ ಜಿಲ್ಲಾ, ತಾಲೂಕು ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಮಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಉದ್ಘಾಟಿಸಿದರು.

ಇದಕ್ಕೂ ಮುನ್ನ ಕಾರ್ಯಾಗಾರವನ್ನು ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಉದ್ಘಾಟಿಸಿ ಮಾತನಾಡಿ, ಮಕ್ಕಳ ಸಂಬಂಧಿತ ಕಾನೂನುಗಳನ್ನು ಅನುಷ್ಠಾನ ಮಾಡಬೇಕಿದೆ. ಈ ನಿಟ್ಟಿನಲ್ಲಿ ಹೆತ್ತವರು, ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ. ಮಕ್ಕಳ ಮೇಲೆ ಪೋಷಕರು ನಿಗಾ ವಹಿಸಬೇಕು. ಶಿಕ್ಷಕರು ಮಕ್ಕಳ ಮೇಲೆ ಕಣ್ಣು ಇರಿಸಬೇಕು. ನಂತರ ಮಕ್ಕಳ ಮೇಲಿನ ದೌರ್ಜನ್ಯಗಳು ನಡೆದಾಗ ಕಾನೂನು ಚೌಕಟ್ಟಿನಲ್ಲಿ ಕ್ರಮ ವಹಿಸಲು ವಿವಿಧ ಇಲಾಖೆಗಳಿವೆ ಎಂದರು.

ಇದೇ ವೇಳೆ ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಸವಿತಾ, ಡಿಸಿಪಿ ಎಸ್. ಜಾಹ್ನವಿ, ರಾಜ್ಯ ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಎಸ್. ಮಂಜು, ವೆಂಕಟೇಶ್, ಅಪರ್ಣಾ ಎಂ. ಕೊಳ್ಳಾ, ನ್ಯೂಟ್ರಿಷಿಯನ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಘಟಕದ ಅಧ್ಯಕ್ಷೆ ಡಾ.ಸಿ. ಅನಿತಾ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಟಿ. ಯೋಗೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ತಂಡೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗೇಮ್ ಚೇಂಜರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ನಿಲವುಕು ಎನಮೇಲ್ ಎನ್ನಡಿ ಕೋಪಂ(ತ)	4 ಪ್ರದರ್ಶನಗಳು
ಸಂಗಂ	
ವಿಷ್ಣುಪ್ರಿಯ (ಕ)	4 ಪ್ರದರ್ಶನಗಳು
ಲಿಡೋ	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಇದಮೊಯರ್ಚಿ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಭಿನಂದನೆ


ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾದ ಜೆಯೋಗೇಶ್, ಉಪಾಧ್ಯಕ್ಷರಾಗಿ ಆಯ್ಕೆಯಾದ ಟೆಂಟ್ ರವಿ ಅವರನ್ನು ಚಾಮರಾಜ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕೇಬಲ್ ನಾಗರಾಜ್, ಮೋಹನ್ ಮುಂತಾದವರಿದ್ದರು.

ಡಿಸಿ ಕಚೇರಿ ಬಳಿ ಪೇಪರ್ ಕಾರ್ಖಾನೆ ನೌಕರರ ಪ್ರತಿಭಟನೆ

ನೌಕರರಿಗೆ ಸೂಕ್ತ ಪರಿಹಾರ ನೀಡುವವರೆಗೂ ಕಾರ್ಖಾನೆ ಮುಚ್ಚಲು ಅವಕಾಶ ಬೇಡ



ಗ್ರಾಮೋಕ್ಸ್ ಪೇಪರ್ ಅಂಡ್ ಬೋರ್ಡ್ಸ್ ಕಂಪನಿಯು ಕಾರ್ಮಿಕರಿಗೆ ಸೂಕ್ತ ಪರಿಹಾರ ಕೊಡುವವರೆಗೂ ಮುಚ್ಚಲು ಅವಕಾಶ ನೀಡಬಾರದೆಂದು ಒತ್ತಾಯಿಸಿ ಕಾರ್ಖಾನೆ ನೌಕರರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.21(ಜಿಎ)–ಲಾಭದಲ್ಲಿ ನಡೆಯುತ್ತಿರುವ ಬಂಚಳ್ಳಿಹುಂಡಿಯ ಗ್ರಾಮೋಕ್ಸ್ ಪೇಪರ್ ಅಂಡ್ ಬೋರ್ಡ್ಸ್ ಕಂಪನಿಯನ್ನು ಆಡಳಿತ ವರ್ಗದವರು ದುರುದ್ದೇಶದಿಂದ ಏಕಾಏಕಿ ಮುಚ್ಚಿದ್ದು, ಕಾರ್ಮಿಕರಿಗೆ ಸೂಕ್ತ ಪರಿಹಾರ ಸಿಗುವವರೆಗೂ ಮುಚ್ಚಲು ಅವಕಾಶ ನೀಡಬಾರದೆಂದು ಒತ್ತಾಯಿಸಿ ಕಾರ್ಖಾನೆ ನೌಕರರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಕಾರ್ಖಾನೆಯಲ್ಲಿ ಸುಮಾರು 120ಕ್ಕೂ ಹೆಚ್ಚು ಖಾಯಂ ನೌಕರರು, 175 ಗುತ್ತಿಗೆ ಕಾರ್ಮಿಕರು 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುತ್ತಿಗೆ ಕಾರ್ಮಿಕರಿಗೆ ಸರಿಯಾಗಿ ಭವಿಷ್ಯನಿಧಿ ವಂತಿಗೆ, ಕಳೆದ 20 ವರ್ಷಗಳಿಂದ ಬೋನಸ್ ಪಾವತಿ ಮಾಡಿಲ್ಲ. ಕಂಪನಿ 20 ವರ್ಷಗಳಿಂದಲೂ ಉತ್ತಮ ಲಾಭಗಳಿಸುತ್ತಾ ಬಂದಿದ್ದರೂ ಕನಿಷ್ಠ ಸೌಲಭ್ಯವನ್ನೂ ನೀಡದೆ ಬಾಕಿ ಉಳಿಸಿಕೊಂಡಿದ್ದಾರೆ. ಕಂಪನಿ ನಡೆಸಲು ಎಲ್ಲಾ ಸಾಧ್ಯತೆಗಳು ಇದ್ದಾಗಲೂ ಸಾರಿಗೆ ವೆಚ್ಚ ಹೆಚ್ಚಾಗಿದೆ ಎಂಬ ನೆಪ ಹೇಳಿ ಕಾರ್ಮಿಕರಿಗೆ ಅತ್ಯಲ್ಪ ಪರಿಹಾರ ನೀಡಿ ವಜಾಗೊಳಿಸುವ ತಂತ್ರ ಹೂಡಿದ್ದಾರೆ ಎಂದು ಆರೋಪಿಸಿದರು.

ಕಂಪನಿ ಇದುವರೆಗೂ ಯಾವುದೇ ಸಾಲ ಮಾಡಿಲ್ಲ. ಕಂಪನಿಯ ಒಟ್ಟು ಆಸ್ತಿ 150 ಕೋಟಿಗೂ ಹೆಚ್ಚು ಬೆಲೆ ಬಾಳುತ್ತದೆ. ಆಡಳಿತ ವರ್ಗದವರು ಕಂಪನಿ ಮುಚ್ಚಿ ಕಾರ್ಮಿಕರಿಗೆ ಪರಿಹಾರವಿಲ್ಲದೇ ವಜಾಗೊಳಿಸಿ ಬೇರೆ ಹೆಸರಿನಲ್ಲಿ ಪ್ರಾರಂಭ ಮಾಡುವ ಉದ್ದೇಶ ಹೊಂದಿದ್ದಾರೆ. ಹೀಗಾಗಿ ಕಾರ್ಮಿಕರಿಗೆ ಸೂಕ್ತ ಪರಿಹಾರ ಹಾಗೂ ಮುಂದೆ ಬರುವ ಕಂಪನಿಯಲ್ಲಿ ಕೆಲಸ ಮುಂದುವರೆಸುವ ಲಿಖಿತ ಭರವಸೆ ಸಿಗದ ಹೊರತು ಕಾರ್ಖಾನೆಗೆ ಸಂಬಂಧಿಸಿದ ಆಸ್ತಿಯ ವಿಷಯದಲ್ಲಿ ಯಾವುದೇ ರೀತಿ ಖಾತಾ ವರ್ಗಾವಣೆ, ತಿದ್ದುಪಡಿ, ವಿಂಗಡಣೆಗಳಿಗೆ ಅವಕಾಶ ನೀಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಕಾರ್ಖಾನೆಯ ಆಡಳಿತ ವರ್ಗ ಹಾಗೂ ನಮ್ಮ ಸಂಘದೊಂದಿಗೆ ಹೆಚ್ಚಿನ ಪರಿಹಾರದ ಕುರಿತು ಚರ್ಚಿಸಲು ಸಭೆ ಕರೆಯಬೇಕೆಂದು ಆಗ್ರಹಿಸಿದರು. ಲಾಭದಲ್ಲಿ ನಡೆಯುತ್ತಿದ್ದ ಕಾರ್ಖಾನೆಯನ್ನು ಏಕಾಏಕಿ ಮುಚ್ಚಿರುವುದರಿಂದ ಕಾರ್ಮಿಕರಿಗೆ ಹೆಚ್ಚಿನ ಪರಿಹಾರ ನೀಡಬೇಕು. ಕಾರ್ಖಾನೆಯ ಸ್ಥಳದಲ್ಲಿ ಮುಂದೆ ಇದೇ ಮಾದರಿಯ ಯಾವುದೇ ಕಾರ್ಖಾನೆ ಅಥವಾ ಇದೇ ಕಾರ್ಖಾನೆ ಮರು ಪ್ರಾರಂಭಿಸಿದರೆ ಹಾಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಹಾಲಿ ವೇತನದೊಂದಿಗೆ ಕೆಲಸದಲ್ಲಿ ಮುಂದುವರೆಸುವ ಕುರಿತು ಲಿಖಿತ ಒಪ್ಪಂದ ಮಾಡಿಕೊಡಬೇಕು. ಕಾರ್ಮಿಕರ ಬೇಡಿಕೆಗಳು ಈಡೇರುವವರೆಗೂ ಕಾರ್ಖಾನೆಯ ಜಮೀನಿನ ದಾಖಲೆಗಳಲ್ಲಿ ಯಾವುದೇ ಬದಲಾವಣೆ ಮಾಡಿಕೊಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಬಿ.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಮುದ್ದುಕೃಷ್ಣ.ಎನ್, ಉಪಾಧ್ಯಕ್ಷ ಬಸವರಾಜ ನಾಯಕ, ಜಂಟಿ ಕಾರ್ಯದರ್ಶಿಗಳಾದ ಗಂಗಾಧರ್.ಎಚ್.ಎಸ್, ನಾಗೇಂದ್ರ ಖಜಾಂಚಿ ಶಿವಣ್ಣ.ಪಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವರಾಮು, ಪಿ.ಡಿ.ವಿಜಯಕುಮಾರ್, ಸುರೇಶ್, ಸಂತೋಷ್, ಅಭಿಲಾಷ್, ರವಿಕುಮಾರ್, ಲೋಕೇಶ್, ನಿಂಗರಾಜು, ಸಿದ್ದರಾಜು, ಗೋಪಾಲ, ಎಐಯುಟಿಯುಸಿ ಜಿಲ್ಲಾ ಸಮಿತಿ ಸದಸ್ಯೆ ಸಂಧ್ಯಾ.ಪಿ.ಎಸ್, ಆಕಾಶ್ ಕುಮಾರ್.ಬಿ.ಎನ್ ಸೇರಿದಂತೆ ಹಲವರು ಪಾಲ್ಗೊಂಡಿದರು.

ಕಾಂಗ್ರೆಸ್ ಮುಖಂಡ ರವಿಶಂಕರ್‌ಗೆ ನುಡಿ ನಮನ



ಇತ್ತೀಚೆಗೆ ನಿಧನರಾದ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಟಿ.ಎಸ್.ರವಿಶಂಕರ್ ಅವರಿಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕಾಂಗ್ರೆಸ್ ಮುಖಂಡರು ನುಡಿ ನಮನ ಸಲ್ಲಿಸಿದರು.


ಮೈಸೂರು, ಫೆ.21(ಜಿಎ)–ಇತ್ತೀಚೆಗೆ ನಿಧನರಾದ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಟಿ.ಎಸ್.ರವಿಶಂಕರ್ ಅವರಿಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕಾಂಗ್ರೆಸ್ ಮುಖಂಡರು ನುಡಿ ನಮನ ಸಲ್ಲಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ರವಿಶಂಕರ್ ಅವರು ಅಧಿಕಾರ ಇದ್ದಾಗಲೂ, ಇಲ್ಲದಿದ್ದಾಗಲೂ ಜನಸೇವೆ ಮಾಡುತ್ತಿದ್ದರು. ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದ ಅವರು ಅಜಾತಶತ್ರುವಾಗಿದ್ದರು. ಬದುಕಿನುದ್ದಕ್ಕೂ ಸಮಾಜ ಸೇವೆಗೆ ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು. ಇಂತಹ ಜನಸೇವಕರನ್ನು ಕಳೆದುಕೊಂಡಿದ್ದು ಸಮಾಜ ಮತ್ತು ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ಸಂತಾಪ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಮಾತನಾಡಿ, ಟಿ.ಎಸ್. ರವಿಶಂಕರ್ ಅವರ ಕುಟುಂಬಸ್ಥರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಹಿನ್ನೆಲೆಯಲ್ಲಿ ಸೇವೆ ಎಂಬ ಅಂಶ ಅವರಿಗೆ ಕರಗತವಾಗಿತ್ತು ರಾಜ್ಯ ಸರ್ಕಾರ ಅವರ ಸೇವೆ ಗುರುತಿಸಿ ನಗರದ ಯಾವುದಾದರೂ ಐತಿಹಾಸಿಕ ಸ್ಥಳ ಅಥವಾ ಪ್ರಮುಖ ರಸ್ತೆಗೆ ಅವರ ಹೆಸರಿಡಬೇಕು. ಜೊತೆಗೆ ಕಾರ್ಯಕರ್ತರ ಆರೋಗ್ಯ ಸುಧಾರಣೆಗಾಗಿ ಕಾಂಗ್ರೆಸ್ ಪಕ್ಷ ತುರ್ತು ನಿಧಿಯನ್ನು ಸ್ಥಾಪಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಕಾಂಗ್ರೆಸ್ ಮುಖಂಡರಾದ ಈಶ್ವರ್ ಚಕ್ಕಡಿ, ಡೈರಿ ವೆಂಕಟೇಶ್, ರಾಹುಲ್ ಕುಂಬರಹಳ್ಳಿ, ಮಹೇಶ್ ಸೇರಿದಂತೆ ಟಿ.ಎಸ್.ರವಿಶಂಕರ್ ಅವರ ಕುಟುಂಬ ವರ್ಗದವರು, ಅಭಿಮಾನಿಗಳು ಮತ್ತಿತರರು ಉಪಸ್ಥಿತರಿದ್ದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ – ಆಪರೇಟಿವ್ ಸೊಸೈಟಿಯ 2025–2029ನೇ ಸಾಲಿನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಬಿ.ಎಸ್.ಶ್ರೀನಾಥ್, ಹಾಗೂ ಉಪಾಧ್ಯಕ್ಷರಾಗಿ ಡಿ.ಎಸ್.ವಿಶ್ವನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ನೂತನವಾಗಿ ನಿರ್ದೇಶಕರುಗಳಾಗಿ ಆಯ್ಕೆಯಾದ ಎಸ್. ಮಹೇಶ್, ಎಸ್ ಶ್ರೀಧರ್, ಎನ್.ಜಿ.ಕಾರ್ತಿಕ್, ಶ್ರೀಮತಿ ಆರ್.ಮಹಾಲಕ್ಷ್ಮಿ, ಅರ್.ಮಾನಸ, ಬಿ.ಗಣೇಶ್, ನಾಗಭೂಷಣ, ಎಸ್.ಸಂಜಯ್ ಬಾಬು, ಎನ್. ಸುರೇಶ್ ಹಾಗೂ ಸೊಸೈಟಿಯ ಕಾರ್ಯದರ್ಶಿಯಾದ ಶ್ರೀಮತಿ ಶಶಿಕಲಾ ಇದ್ದಾರೆ.

ಇತಿಹಾಸವುಳ್ಳ ಭಾಷೆ ಉಳಿದರೆ ಸಂಸ್ಕೃತಿ ಉಳಿದಂತೆ

ಜೆಎನ್‌ಯು ನಿವೃತ್ತ ಭಾಷಾ ವಿಜ್ಞಾನಿ ಪ್ರೊ.ಕಪಿಲ್ ಕಪೂರ್

ಮೈಸೂರು, ಫೆ.21(ಜಿಎ)–ಎಲ್ಲ ಭಾಷೆಗಳಿಗೂ ದೊಡ್ಡ ಇತಿಹಾಸವಿದ್ದು, ಭಾಷೆ ಉಳಿಸಿದರೆ ಸಂಸ್ಕೃತಿಯನ್ನು ಉಳಿಸಿದಂತೆ ಎಂದು ಜೆಎನ್‌ಯು ವಿಶ್ವವಿದ್ಯಾಲಯದ ನಿವೃತ್ತ ಭಾಷಾ ವಿಜ್ಞಾನಿ, ಪದ್ಮಭೂಷಣ ಪ್ರೊ.ಕಪಿಲ್ ಕಪೂರ್ ತಿಳಿಸಿದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಾತೃಭಾಷಾ ದಿನಾಚರಣೆಯನ್ನು ವರ್ಚ್ಯುವಲ್ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕೃತವು ಎಲ್ಲಾ ಭಾಷೆಗಳಿಗೂ ಪದ ಸಂಪತ್ತನ್ನು ನೀಡಿದೆ. ಹೀಗಾಗಿ, ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಅರ್ಥವಾಗುತ್ತದೆ. ವಸಾಹತು ಕಾಲದ ಶಿಕ್ಷಣವೇ ಈಗಲೂ ಮುಂದುವರಿದಿದ್ದು, ಇಂಗ್ಲೀಷ್ ಉದ್ಯೋಗದ ಭಾಷೆಯೆಂದು ಬಿಂಬಿಸಲಾಗಿದೆ. ಈ ಮನಸ್ಥಿತಿ ಬದಲಾಗಬೇಕು. ಪ್ರತಿ ಮಾತೃಭಾಷೆಯೂ ಅಂತರರಾಷ್ಟ್ರೀಯ ಭಾಷೆಯಾಗಿದೆ ಎಂದರು.

ಮಾತೃಭಾಷೆಯಲ್ಲಿ ಕಲಿಕೆ ಆಗಬೇಕು. ಇಂಗ್ಲೀಷ್ ಜ್ಞಾನವು ವ್ಯಕ್ತಿಯ ಬೌದ್ಧಿಕತೆಯ ಮಾಪನವಲ್ಲ. ಸಂಸ್ಕೃತ ಸತ್ತ ಭಾಷೆಯಲ್ಲ. ಅದರ ಜ್ಞಾನ ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಎಲ್ಲ ಮಾತೃಭಾಷೆಗಳ ಉಳಿವಿಗೆ ಪೂರಕವಾಗಿಯೇ ಸಿದ್ಧಪಡಿಸಲಾಗಿದೆ. ಸಮಯ ವ್ಯರ್ಥಮಾಡದೇ ಮಕ್ಕಳನ್ನು ಮಾತೃಭಾಷಾ ಶಾಲೆಗಳಲ್ಲಿ ಓದಿಸಿ ಎಂದು ಸಲಹೆ ನೀಡಿದರು.

ಎಲ್ಲಾ ಭಾಷೆಗಳೂ ಜ್ಞಾನ ಸಂಪತ್ತನ್ನು ಹೊಂದಿವೆ. ಆದ್ದರಿಂದ, ಮಕ್ಕಳ ಶಿಕ್ಷಣ ಮಾಧ್ಯಮವು ಮಾತೃಭಾಷೆಯಲ್ಲಿಯೇ ಆಗಬೇಕು. ವಿಜ್ಞಾನ ಶಿಕ್ಷಣವನ್ನು ಮಾತೃಭಾಷೆಯಲ್ಲಿ ನೀಡಲಾಗದೆಂಬುದು ಹುಸಿ ಕಲ್ಪನೆಯಾಗಿದೆ ಪರ್ಯಾಯ ಪದಗಳ ಸಂಪತ್ತು ಭಾರತೀಯ ಭಾಷೆಗಳಲ್ಲಿದೆ ಎಂದು ಹೇಳಿದರು.

9ರಿಂದ 16ನೇ ಶತಮಾನದಲ್ಲಿ ಪರ್ಷಿಯನ್ ಹಾಗೂ ಅರೇಬಿಕ್ ಅಂತರರಾಷ್ಟ್ರೀಯ ಭಾಷೆಗಳಾಗಿದ್ದವು. ರೋಮ್‌ನಿಂದ ಭಾರತದವರೆಗೂ ಸಂವಹನವಾಗಿ ಈ ಭಾಷೆಗಳು ಬಳಕೆಯಾಗುತ್ತಿದ್ದವು. ನಂತರ ಫ್ರೆಂಚ್, ರಷ್ಯನ್, ಸ್ಪ್ಯಾನಿಷ್ ಹಾಗೂ ಇಂಗ್ಲೀಷ್ ಭಾಷೆಗಳು ಜಾಗತಿಕ ಅಧಿಕಾರವು ಬದಲಾದಂತೆ ಅರೇಬಿಕ್ ಹಾಗೂ ಪರ್ಷಿಯನ್‌ನ ಸ್ಥಾನ ತುಂಬಿದವು ಎಂದರು.


ಭಾಷಾ ಕಲಿಕೆ, ಭದ್ರತೆ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ಭಾಷಾ ಸಂಸ್ಥಾನ ಹಾಗೂ ರಾಜ್ಯ ಪೊಲೀಸ್ ಅಕಾಡೆಮಿ ಪರಸ್ಪರ ಒಪ್ಪಂದಕ್ಕೆ ಒಡಂಬಡಿಕೆ ಮಾಡಿಕೊಂಡರು.

ರಾಜ್ಯ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಮಾತನಾಡಿ, ದೇಶದ ಭಾಷಾ ವೈವಿಧ್ಯತೆಯೇ ದೇಶದ ಶಕ್ತಿಯಾಗಿದೆ. ಮಾತೃಭಾಷೆಯನ್ನು ಪ್ರೀತಿಸುವ ಜೊತೆಗೆ ಇತರ ಭಾಷೆಗಳನ್ನೂ ಗೌರವಿಸಬೇಕು. ಪೊಲೀಸ್ ಅಧಿಕಾರಿಗಳು ತನಿಖೆಗಾಗಿ ಇತರ ರಾಜ್ಯಗಳಿಗೆ ಹೋದಾಗ ಅಲ್ಲಿನ ಭಾಷಾ ತಿಳುವಳಿಕೆ ಅನಿವಾರ್ಯವಾಗಿರುತ್ತದೆ. ಹೀಗಾಗಿ, ಅಕಾಡೆಮಿಯು ಭಾಷಾ ಸಂಸ್ಥಾನದ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದು, ವೃತ್ತಿಪರ ಭಾಷಾ ಕಲಿಕೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಭಾರತದ ವಿವಿಧ ಭಾಷೆಗಳು, ಸಂಸ್ಕೃತಿ ವೈವಿಧ್ಯವೇ ಶಕ್ತಿಯಾಗಿದೆ. ದೇಶವು ಜಾಗತಿಕ ನಾಯಕನಾಗುವ ಅರ್ಹತೆಯಿದೆ. ರಾಜ್ಯದ ಗಡಿಭಾಗಗಳಲ್ಲಿನ ಇತರ ಭಾಷೆಗಳನ್ನು ಕಲಿಯಬೇಕು. ನಾನೂ ಚಾಮರಾಜನಗರದಲ್ಲಿ ಅಧಿಕಾರಿಯಾಗಿದ್ದಾಗ ತಮಿಳು, ಬೀದರ್‌ನಲ್ಲಿದ್ದಾಗ ಮರಾಠಿ, ತೆಲುಗು ಕಲಿತಿದ್ದೆ. ಹೆಚ್ಚು ಭಾಷೆಗಳನ್ನು ಕಲಿಯಬೇಕು. ಮಾತೃಭಾಷೆಯನ್ನು ಪ್ರೀತಿಸಬೇಕು' ಎಂದರು.

ಭಾಷಾ ಕಲಿಕೆ, ಭದ್ರತೆ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ಭಾಷಾ ಸಂಸ್ಥಾನ ಹಾಗೂ ರಾಜ್ಯ ಪೊಲೀಸ್ ಅಕಾಡೆಮಿ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದವು. ಕಾರ್ಯಕ್ರಮದಲ್ಲಿ ಭಾಷಾ ವಿಜ್ಞಾನಿಗಳಾದ ದೆಹಲಿ ವಿಶ್ವವಿದ್ಯಾಲಯದ ಪ್ರೊ.ಆರ್.ಸಿ.ಶರ್ಮ, ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರೊ.ಎಲ್.ರಾಮಮೂರ್ತಿ, ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಮಾಜಿ ನಿರ್ದೇಶಕ ಪ್ರೊ.ರಾಜೇಶ್ ಸಚ್ದೇವ, ಪ್ರೊ.ಪಿ.ಉಮಾರಾಣಿ ಉಪಸ್ಥಿತರಿದ್ದರು.

ಡಾ.ಬಾಬು ಜಗಜೀವನರಾಂ, ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಫೆ.21– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಏ.5 ಡಾ. ಬಾಬು ಜಗಜೀವನರಾಂ ಅವರ 118ನೇ ಹಾಗೂ ಏ.14 ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮದಿನಾಚರಣೆಯನ್ನು ರಾಜ್ಯಮಟ್ಟದಲ್ಲಿ ಆಚರಿಸಲಾಗುತ್ತಿದ್ದು, 2025–26 ನೇ ಸಾಲಿಗೆ ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸುವ ವ್ಯಕ್ತಿಗಳನ್ನು ಗುರುತಿಸಿ, ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ನೀಡಿ ಗೌರವಿಸಲು ಅರ್ಜಿ ಅಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಮೈಸೂರು ಜಿಲ್ಲೆಗೆ ಸಂಬಂಧಿಸಿದ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ನಮೂನೆಯನ್ನು ಪಡೆದು ದ್ವಿಪ್ರತಿಯಲ್ಲಿ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ಫೆ.28 ರೊಳಗೆ ಸಲ್ಲಿಸಬಹುದು ಎಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ನಂಜನಗೂಡು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯರಿಗೆ ಸೂಕ್ತ ರಕ್ಷಣೆಗೆ ಆಗ್ರಹ

ಮೈಸೂರು ಪ್ರಾದೇಶಿಕ ಆಯುಕ್ತರಿಗೆ ವಕೀಲ ರಮೇಶ್ ಮನವಿ



ಮೈಸೂರು, ಫೆ.21– ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಅವರಿಗೆ ಮಂಡಳಿಯ ಹಿಂದಿನ ಉಪ ನಿರ್ದೇಶಕ ಪಿ.ವಿ. ಅವರಾದಿ ಅವರು ಮಾನಸಿಕ ಕಿರುಕುಳ ನೀಡುತ್ತಿರುವುದರಿಂದ ಸುಬ್ರಮಣ್ಯ ಅವರು ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಸೂಕ್ತ ರಕ್ಷಣೆ ನೀಡಬೇಕೆಂದು ಮೈಸೂರಿನ ವಕೀಲ ಆರ್.ರಮೇಶ್ ಅವರು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಮೈಸೂರು ಅರಮನೆ ಮಂಡಳಿಗೆ ದೆಹಲಿಯ ಮೆ॥ ನ್ಯಾರೋ ಕ್ಯಾಸ್ಟರ್ಸ್ ಸಂಸ್ಥೆಯಿಂದ ಆಡಿಯೋ ಗೈಡ್ ಸೇವೆ ಒದಗಿಸಿರುವ ಸಂಬಂಧ ಅಕ್ರಮವಾಗಿ 3.5 ಕೋಟಿ ರೂ. ಪಡೆಯುವ ಉದ್ದೇಶದಿಂದ ಅವರಾದಿ ಅವರು ಸುಬ್ರಮಣ್ಯ ಅವರ ವಿರುದ್ಧ ಬೇರೆ ಕೆಲವರ ಮೂಲಕ ಸರ್ಕಾರ ಹಾಗೂ ಲೋಕಾಯುಕ್ತ ಮುಂತಾದೆಡೆಗೆ ದೂರುಗಳನ್ನು ನೀಡುವ ಮೂಲಕ ಕಿರುಕುಳ ನೀಡುತ್ತಿದ್ದಾರೆ ಎಂದು ವಕೀಲ ರಮೇಶ್ ತಮ್ಮ ಪತ್ರದಲ್ಲಿ ಆರೋಪಿಸಿದ್ದಾರೆ.

ಮೈಸೂರು ಅರಮನೆ ಮಂಡಳಿಗೆ ಸಂಬಂಧಪಟ್ಟ ಪ್ರಕರಣವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾಯಿಸಿರುವ ಕಾರಣ ಪ್ರಾದೇಶಿಕ ಆಯುಕ್ತರು ಕನ್ನಡ ಮತ್ತು ಸಂಸ್ಕೃತಿಯ ಪ್ರಧಾನ ಕಾರ್ಯದರ್ಶಿಗಳಿಗೆ ರಮೇಶ್ ಅವರ ಪತ್ರ ಹಾಗೂ ದಾಖಲಾತಿಗಳು ಮತ್ತು ಆಡಿಯೋ ಗೈಡ್ ಸೇವೆಗೆ ಸಂಬಂಧಿಸಿದ ತನಿಖಾ ವರದಿಯನ್ನು ಸಲ್ಲಿಸಿದ್ದಾರೆ.

ಟಿ.ಎಸ್.ಸುಬ್ರಮಣ್ಯ ವಿರುದ್ಧ ಲೋಕಾಯುಕ್ತ ಹಾಗೂ ಸರ್ಕಾರದ ಮಟ್ಟದಲ್ಲಿ ದಾಖಲಿಸಲಾದ ಹಲವಾರು ಪ್ರಕರಣಗಳಲ್ಲಿ ಅವರು ನಿರಪರಾಧಿ ಎಂದು ಆದೇಶವಾಗಿರುತ್ತದೆ ಎಂದು ರಮೇಶ್ ತಿಳಿಸಿದ್ದಾರೆ.

ಠೇವಣಿ ಮೊತ್ತ 120 ಕೋಟಿಗೇರಿಕೆ: ಮೈಸೂರು ಅರಮನೆಯ ಪ್ರವೇಶ ಟಿಕೆಟ್ ಹಾಗೂ ವಾಹನ ಪಾರ್ಕಿಂಗ್ ಶುಲ್ಕ ವಿಚಾರದಲ್ಲಿ ಬೋಗಸ್ ಮೆಷಿನ್‌ಗಳನ್ನು ಬಳಸಿ ಸುಬ್ರಮಣ್ಯ ಅರಮನೆ ಮಂಡಳಿಗೆ ಕೋಟ್ಯಾಂತರ ರೂ. ನಷ್ಟ ಉಂಟು ಮಾಡಿದ್ದಾರೆ. ಹಾಗೂ ಜಿಎಸ್‌ಟಿ ಕಟ್ಟದೇ ಮೋಸ ಮಾಡಿದ್ದಾರೆ ಎಂದು ಅವರ ವಿರುದ್ಧ ನೀಡಿರುವ ದೂರು ಸತ್ಯಕ್ಕೆ ದೂರವಾಗಿದೆ ಎಂದಿರುವ ವಕೀಲ ರಮೇಶ್, ಅರಮನೆ ಮಂಡಳಿಯ ಉಪ ನಿರ್ದೇಶಕರಾಗಿ ಸುಬ್ರಮಣ್ಯ ಅವರು ಬಂದ ನಂತರ ಮಂಡಳಿಯ ಆದಾಯ ಹೆಚ್ಚಾಗಿದೆ. ಅವರು ಬರುವುದಕ್ಕಿಂತ ಮುನ್ನ 10 ವರ್ಷದ ಅವಧಿಯಲ್ಲಿ ಮಂಡಳಿಯ ಬ್ಯಾಂಕ್‌ನಲ್ಲಿದ್ದ ಠೇವಣಿ ಮೊತ್ತ 19 ಕೋಟಿಗಳು ಮಾತ್ರವಾಗಿದ್ದು, ಸುಬ್ರಮಣ್ಯ ಅವರು ಬಂದ ನಂತರ ಈ ಮೊತ್ತವು 120 ಕೋಟಿ ದಾಟಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಸುಬ್ರಮಣ್ಯರ ಅವಧಿಯಲ್ಲಿ ಪ್ರವೇಶ ಟಿಕೆಟಿಂಗ್ ವ್ಯವಸ್ಥೆ ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದ್ದು, ಪ್ರತಿಯೊಂದು ಟಿಕೆಟ್‌ನ ವಿವರ ಸರ್ವರ್‌ನಲ್ಲಿ ಲಭ್ಯವಿರುತ್ತದೆ. ಯಾವುದೇ ಕಾರಣಕ್ಕೂ ಡಾಟಾವನ್ನು ಟ್ಯಾಂಪರಿಂಗ್ ಮಾಡಲು ಸಾಧ್ಯವಿಲ್ಲ. ಟಿಕೆಟ್‌ನಲ್ಲಿ ಸಂಖ್ಯೆಯ ಜೊತೆಗೆ ಬಾರ್‌ಕೋಡ್ ಸಹ ಇರುತ್ತದೆ. ಹೀಗಾಗಿ ಪ್ರವೇಶ ಟಿಕೆಟ್ ವಿಚಾರದಲ್ಲಿ ಅವರ ವಿರುದ್ಧ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದಿದ್ದಾರೆ.

ನಿಯಮಾನುಸಾರ ಜಿಎಸ್‌ಟಿ ಪಾವತಿ: ಪಾರ್ಕಿಂಗ್ ಸ್ಥಳದಲ್ಲಿ ಮಂಡಳಿಯಿಂದ ಖರೀದಿಸಿರುವ ಹ್ಯಾಂಡಿ ಮಿಷನ್‌ಗಳ ಮೂಲಕ ಶುಲ್ಕದ ಟಿಕೆಟ್ ವಿತರಿಸುತ್ತಿದ್ದು, ಇಲ್ಲಿಯೂ ಕೂಡ ಅವ್ಯವಹಾರಕ್ಕೆ ಅವಕಾಶವಿಲ್ಲ. ಅಲ್ಲದೇ ಪ್ರತೀ ದಿನ ವಸೂಲಿ ಆಗಿರುವ ಹಣಕ್ಕೆ ಸಂಬಂಧಿಸಿದಂತೆ ವಿವರಗಳನ್ನು ನಿಯಮಾನುಸಾರ ಮಿಷನ್‌ಗಳಿಂದ ಪಡೆದು ರಿಜಿಸ್ಟರ್‌ನಲ್ಲಿ ದಾಖಲಿಸಿ, ಮಂಡಳಿ ಖಾತೆ ಜಮೆ ಮಾಡಲಾಗುತ್ತದೆ. ಮಂಡಳಿಯಲ್ಲಿ ರಾಜ್ಯ ಲೆಕ್ಕ–ಪತ್ರ ಶಾಖೆಯಿಂದ ಲೆಕ್ಕಾಧಿಕಾರಿಗಳು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ನಿಯಮಾನುಸಾರ ಸರ್ಕಾರಕ್ಕೆ ಜಿಎಸ್‌ಟಿ ಪಾವತಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಆದೇಶ ಪಾಲನೆ ಅಷ್ಟೇ: ಅರಮನೆ ಮಂಡಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿದ್ದು, ಜಿಲ್ಲಾಧಿಕಾರಿಗಳು ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಈ ಮಂಡಳಿಯ ನಿರ್ಧಾರ ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಕಡತಗಳಿಗೆ ನಿಯಮಾನುಸಾರ ಅನುಮೋದನೆ ಪಡೆದು ಸುಬ್ರಮಣ್ಯ ಕಾರ್ಯನಿರ್ವಹಿಸುತ್ತಾರೆಯೇ ಹೊರತು ಅವರೇ ಸ್ವಂತ ನಿರ್ಧಾರದಿಂದ ಕ್ರಮ ವಹಿಸಲು ಅವಕಾಶವಿಲ್ಲ. ಹೀಗಿದ್ದರೂ ಅವರ ಮೇಲೆ ವಿನಾಕಾರಣ ಆರೋಪ ಹೊರಿಸಿ ಮಾನಸಿಕ ಕಿರುಕುಳ ನೀಡಲಾಗುತ್ತಿದೆ ಎಂದಿರುವ ವಕೀಲ ರಮೇಶ್ ಅವರು ಸುಬ್ರಮಣ್ಯ ವಿರುದ್ಧ ಆರೋಪ ಮಾಡಿರುವ ಹಾಗೂ ಮೆ॥ ನ್ಯಾರೋ ಕ್ಯಾಸ್ಟರ್ಸ್ ಸಂಸ್ಥೆಯ ಪಾಲುದಾರರಾದ ಅರಮನೆ ಮಂಡಳಿಯ ಹಿಂದಿನ ಉಪ ನಿರ್ದೇಶಕ ಅವರಾದಿ ಅವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಿದರೆ ಸತ್ಯಾಂಶ ತಿಳಿದು ಬರುತ್ತದೆ ಎಂದು ಹೇಳಿದ್ದಾರೆ.

> “ದೆಹಲಿಯ ಮೆ॥ ನ್ಯಾರೋ ಕ್ಯಾಸ್ಟರ್ಸ್ ಸಂಸ್ಥೆಯಿಂದ ಮೈಸೂರು ಅರಮನೆ ಮಂಡಳಿಗೆ ಆಡಿಯೋ ಗೈಡ್ ಸೇವೆ ಒದಗಿಸುತ್ತಿರುವ ಸಂಬಂಧ ಸರ್ಕಾರದ ನಿರ್ದೇಶನದಂತೆ ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿ ಈ ಪ್ರಕರಣದಲ್ಲಿ ಟೆಂಡರ್ ಪ್ರಕ್ರಿಯೆ ನಿಯಮ ಬಾಹಿರವಾಗಿರುವುದಾಗಿ ವರದಿ ಸಲ್ಲಿಸಿದ್ದಾರೆ. ಅಲ್ಲದೇ ಈ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಪ್ರಕರಣ ನ್ಯಾಯಾಲಯದಲ್ಲಿದೆ. ಹೀಗಾಗಿ ಈ ಸಂಸ್ಥೆಗೆ ಹಣ ಸಂದಾಯ ಮಾಡಲು ಸಾಧ್ಯವಿಲ್ಲ. ನ್ಯಾಯಾಲಯದ ತೀರ್ಪು ಮತ್ತು ಅರಮನೆ ಮಂಡಳಿಯ ನಿರ್ಧಾರದಂತೆ ನಾನು ಕ್ರಮ ಕೈಗೊಳ್ಳಬೇಕಾಗುತ್ತದೆ. ಹೀಗಿದ್ದರೂ ಅವರಾದಿ ಅವರು ನನಗೆ ನಾನಾ ರೀತಿ ಮಾನಸಿಕ ಕಿರುಕುಳ ಕೊಡುತ್ತಿರುವುದು ಎಲ್ಲರಿಗೂ ತಿಳಿದಿರುವ ಬಹಿರಂಗ ಸತ್ಯವಾಗಿದೆ. ನನ್ನ ವಿರುದ್ಧ ಆರೋಪಗಳು ಸತ್ಯಕ್ಕೆ ದೂರ ಎಂದು ಈಗಾಗಲೇ ಲೋಕಾಯುಕ್ತದಿಂದಲೂ ವರದಿ ಬಂದಿದೆ. – ಟಿ.ಎಸ್.ಸುಬ್ರಮಣ್ಯ, ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ



ಮುಸ್ಲಿಂ ಯುವಕರಿಗೆ ಮಸೀದಿಗಳಲ್ಲಿ ದೇಶದ ಕಾನೂನು ಅರಿವು ಮೂಡಿಸಲು ಮುಸ್ಲಿಂ ಆರ್ಗನೈಸೇಷನ್ ತೀರ್ಮಾನ

- ಉದಯಗಿರಿ ಪೊಲೀಸ್ ಠಾಣೆ ಮೇಲಿನ ಕಲ್ಲು ತೂರಾಟದಂತಹ ಘಟನೆ ನಡೆಯದಂತೆ ಎಚ್ಚರವಹಿಸಲು ನಿರ್ಧಾರ
- ರಂಜಾನ್ ವೇಳೆ ಶಾಂತಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹಲವು ನಿರ್ಣಯ



ಫೆಡರೇಷನ್ ಆಫ್ ಮೈಸೂರು ಮುಸ್ಲಿಂ ಆರ್ಗನೈಸೇಷನ್ ಸಭೆಯಲ್ಲಿ ಸಂಚಾಲಕ ಅಬ್ದುಲ್ ಖಾದರ್ ಶಾಹೀದ್ ಮಾತನಾಡಿದರು. ಹಲವು ಮಸೀದಿಗಳ ಮೌಲ್ವಿಗಳು, ಮುಖಂಡರು ಉಪಸ್ಥಿತರಿದ್ದರು.

ಮೈಸೂರು, ಫೆ.21(ಎಂಕೆ)– ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟದಂತಹ ಘಟನೆಗಳು ಮುಂದೆಂದೂ ಮರುಕಳಿಸದಂತೆ ಶಾಂತಿ ಕಾಪಾಡಲು ಮಸೀದಿಗಳಲ್ಲಿ ಯುವಕರಿಗೆ ದೇಶದ ಕಾನೂನಿನ ಅರಿವು ಮೂಡಿಸಲು ಫೆಡರೇಷನ್ ಆಫ್ ಮೈಸೂರು ಮುಸ್ಲಿಂ ಆರ್ಗನೈಸೇಷನ್ ಒಕ್ಕೊರಲ ತೀರ್ಮಾನ ಕೈಗೊಂಡಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಕಲ್ಲು ತೂರಾಟ ಪ್ರಕರಣದಲ್ಲಿ ಭಾಗಿಯಾದ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಆದರೆ ನಿರಪರಾಧಿಗಳಿಗೆ ಶಿಕ್ಷೆಯಾಗಬಾರದು. ಮುಗ್ಧರನ್ನು ಬಂಧನದಿಂದ ಮುಕ್ತಗೊಳಿಸಲು ಕಾನೂನು ಚೌಕಟ್ಟಿನೊಳಗೆ ಆರ್ಗನೈಸೇಷನ್ ಸಂಘಟಿತ ಪ್ರಯತ್ನ ಮಾಡಬೇಕು. ಮುಖ್ಯವಾಗಿ ಶಾಂತಿ–ಸುವ್ಯವಸ್ಥೆ ನೆಲೆಸುವಂತೆ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲು ನಿರ್ಧರಿಸಲಾಯಿತು.

ರಂಜಾನ್ ಹಬ್ಬ ಹತ್ತಿರವಾಗುತ್ತಿದ್ದು, ಶಾಂತಿ ನೆಲೆಸುವಂತೆ ಮಾಡುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಮಸೀದಿಗಳಿಗೆ ನಮಾಜ್ ಮಾಡಲು ಬರುವ ಯುವಕರಿಗೆ ದೇಶದ ಕಾನೂನಿನ ಅರಿವು ಮೂಡಿಸಬೇಕು. ಆಧಾರವಿಲ್ಲದೆ ಹಾಗೂ ಮತ್ತೊಬ್ಬರಿಗಾಗಲೀ, ಮತ್ತೊಂದು ಕೋಮಿನ ವಿರುದ್ಧವಾಗಲೀ ಯಾವುದೇ ಪ್ರತಿಕ್ರಿಯೆಗಳನ್ನು ಯಾರು ನೀಡಬಾರದು. ಪ್ರತಿಯೊಬ್ಬರು ಸಂವಿಧಾನದ ಅಡಿಯಲ್ಲಿ ರೂಪಿತವಾದ ಕಾನೂನು ಪಾಲಿಸಬೇಕು ಎಂಬುದಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಮೌಲ್ವಿಗಳು ಸಮ್ಮತಿಸಿದರು.

ಈ ವೇಳೆ ಫೆಡರೇಷನ್ ಆಫ್ ಮೈಸೂರು ಮುಸ್ಲಿಂ ಆರ್ಗನೈಸೇಷನ್‌ನ ಸಂಚಾಲಕ ಅಬ್ದುಲ್ ಖಾದರ್ ಶಾಹೀದ್ ಮಾತನಾಡಿ, ದೇಶದಲ್ಲಿ ಕಾನೂನು ಇದೆ. ಕಾನೂನು ಪಾಲನೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ನಮ್ಮೆಲ್ಲರ ರಕ್ಷಣೆಗೆ ಪೊಲೀಸ್ ವ್ಯವಸ್ಥೆ ಇದೆ. ಯಾರೇ ತಪ್ಪು ಮಾಡಿದ್ದರೂ ಅವರ ಬಂಧನವಾಗಬೇಕು ಎಂದರು.

ಉದಯಗಿರಿ ಪೊಲೀಸ್ ಠಾಣೆ ಮೇಲೆ ನಡೆದ ಕಲ್ಲು ತೂರಾಟದಂತಹ ಘಟನೆ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ನಡೆಯಬಾರದು. ರಂಜಾನ್ ಹಬ್ಬದ ಹಿನ್ನಲೆಯಲ್ಲಿ ಕಾನೂನು ವಿರುದ್ಧ ಯಾರು ಹೋಗಬಾರದು. ಧಾರ್ಮಿಕ ಮುಖಂಡರು, ದೇಶದ ಸಂವಿಧಾನ ಹಾಗೂ ಕಾನೂನು ಕುರಿತು ಅರಿವು ಮೂಡಿಸಬೇಕು. ಪ್ರಚೋದನೆ ಮಾಡಿರುವವರಿಗೂ ಇದು ಎಚ್ಚರಿಕೆಯ ಸಂದೇಶವಾಗಬೇಕು. ಶಾಂತಿ ಸೌಹಾರ್ದತೆ ಕಾಪಾಡಬೇಕು ಎಂದು ಮನವಿ ಮಾಡಿದರು.

ಭವಿಷ್ಯ ಹಾಳಾಗಬಾರದು: ಪ್ರತೀ ಮಸೀದಿಯಲ್ಲಿ 18–20 ವರ್ಷದ ಹುಡುಗರ ಭವಿಷ್ಯ ಹಾಳಾಗದಂತೆ ಮಾರ್ಗದರ್ಶನ ನೀಡಬೇಕು. ಸಂವಿಧಾನದಡಿಯಲ್ಲಿ ಪ್ರತಿಯೊಬ್ಬರು ನಡೆಯಬೇಕು ಎಂಬುದನ್ನು ಅರ್ಥ ಮಾಡಿಸಬೇಕು. ಹಾಗೆಯೇ ಶಾಂತಿ–ಸಹೋದರತೆ ಶಾಶ್ವತವಾಗಿ ನೆಲೆಯಾಗುವಂತಿರಬೇಕು ಎಂದರು.

ಮುಗ್ದರಿಗೆ ಜಾಮೀನು: ವಕೀಲರಾದ ಖಲೀಮ್ ಉಲ್ಲಾ ಷರೀಫ್ ಮಾತನಾಡಿ, ಪ್ರಕರಣದಲ್ಲಿ ಬಂಧಿತ ಮುಗ್ದರಿಗೆ ಜಾಮೀನು ಸಿಗುವ ಎಲ್ಲಾ ಸಾಧ್ಯತೆಗಳು ಇವೆ. ಆಕಸ್ಮಾತ್ ಜಿಲ್ಲಾ ಕೋರ್ಟ್‌ನಲ್ಲಿ ಜಾಮೀನು ಸಿಗದಿದ್ದರೆ, ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸಂಚಾಲಕ ಹಾಫಿಜ್ ಅರ್ಷದ್ ಸಾಬ್, ಸದಸ್ಯರಾದ ಜಮಿಯತೇ ಉಲ್ಮಾಹಿಂದ್, ಖಾರಿ ಫಯಾಜ್, ಮಜಲಿಸ್ ಉಲೇಮಾ, ಸುನ್ನಿ ಜಮಾತೆಯ ಮೌಲಾನ ಅಬ್ದುಲ್ ಮುಸ್ತಾಫ, ಖ್ವಾಜ ಅಜೀಮ್ ಚಿಸ್ತಿ, ಉಲೇಮಾ ಯೂನಿಯನ್‌ನ ಮೌಲಾನ ನೂರಿ ಬಾಬಾ, ಮೌಲಾನ ಸೈಯದ್ ಫಜಲುಲ್ಲಾ, ತಂಜೀಮೇ ಅಹಲೇ ಸುನ್ನತ್ ಜಮಾತ್‌ನ ಯೂನುಸ್, ಜಮೀರ್ ಅಹಮದ್ ಅಶ್ರಫಿ, ಜಮಾತೆ ಇಸ್ಲಾಮಿ ಹಿಂದ್‌ನ ಫಾರುಖ್ ನಶ್ರರ್, ಅಸದ್, ಹನಿಫ್, ಶಿಯಾ ಜಮಾತೆಯ ಕೌನೈನ್ ಮಿರ್ಜಾ, ವಕೀಲರಾದ ಖಲೀಮ್ ಉಲ್ಲಾ ಷರೀಫ್, ಮನ್ನಾವ್, ಬಿಲಾಲ್, ಆಸ್ಮಾ ಮತ್ತಿತರರು ಉಪಸ್ಥಿತರಿದ್ದರು.